ಕೊಡಗು ಸಂಗಾತಿ

ಜನವರಿ 1 ರಿಂದ 31, 2004 ಪಾಕ್ಷಿಕ ಪತ್ರಿಕೆ (ಪೆರಾರ್ದೆ 16-29, ಪೊನ್ನಿ 1-17)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ RNI No. : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಲಿ ಪ್ರಕಟಿತ

KA / SK / MYS / 88 / 2003-05, ಸಂಪುಟ : 7 ಸಂಚಿಕೆ : 19-20 ಪುಟಗಳು : 24 ಬೆಲೆ : 12-00 ರೂ.



: ಲೇಖನ ಒಳಪುಟದಲ್ಲಿ

ಅಂತರಾಷ್ಟ್ರೀಯ ವ್ಯಕ್ತಿಯಾಗಿ ರಾರಾಜಿಸುವ ಕರ್ಮಯೋಗಿ ಸುಳ್ಯದ ಅಮರಶಿಲ್ಪಿ ಡಾ॥ ಕುರುಂಜಿ ವೆಂಕಟ್ರಮಣ ಗೌಡರು

ನಾಡಿನ ಜನತೆ ಹಾಗೂ ಸಂಗಾತಿ ಓದುಗರೆಲ್ಲರಿಗೂ 2004 ಶುಭವನ್ನುಂಟುಮಾಡಲಿ



ಪಟ್ಟಡ ದೀಪಕ್

ಕ್ರಿಕೆಟ್‌ನಲ್ಲಿ ಅರಳಿದ ಪ್ರತಿಭೆಗಳು

ರಾಷ್ಟ್ರ ಮಟ್ಟದಲ್ಲಿ ಗುಜರಾತ್‌ನ ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ, ದಕ್ಷಿಣ ವಲಯ ವಿಶ್ವವಿದ್ಯಾಲಯಕ್ಕೆ ಪ್ರಥಮ ತಂಡವಾಗಿ ಆಯ್ಕೆಯಾಗಿರುವ ಮೈಸೂರು ವಿಶ್ವ ವಿದ್ಯಾಲಯವನ್ನು ಪ್ರತಿನಿಧಿಸಿರುವ ನಮ್ಮ ಮೇರು ಪ್ರತಿಭೆಗಳಿಗೆ ನಮ್ಮೆಲ್ಲರ ಶುಭಾಶಯಗಳು

:ತಂದೆ ತಾಯಿಯಂದಿರು, ಮತ್ತು ಬಂಧು ಬಳಗದವರು.



ಕೊಡಗನ ಚಂದನ್

ವರ ಬೇಕಾಗಿದೆ :

25 ವರ್ಷ ವಯಸ್ಸಿನ ಬಿಕಾಂ ಓದಿರುವ ಸುಂದರ ಒಕ್ಕಲಿಗ ಜನಾಂಗದ ಗಂಗಡ್‌ಕಾರ್ ಪಂಗಡದ, ಅನುಕೂಲವಾಗಿರುವ, ಪೂಜೆ, ಪುರಸ್ಕಾರ, ನಿಯಮ ಪಾಲನೆಗೆ ಒಗ್ಗಿರುವ ವಿಚ್ಛೇದಿತ ಮಕ್ಕಳಿಲ್ಲದ ಮಹಿಳೆಗೆ ಸರ್ಕಾರಿ ಯಾ ಖಾಸಗಿ ಉದ್ಯೋಗದಲ್ಲಿರುವ ವರ ಬೇಕಾಗಿದೆ. ಅರೆಭಾಷೆ ಗೌಡರಿಗೆ ಆದ್ಯತೆ. ವಿದುರರು ಸಹ ವಿವರಗಳೊಂದಿಗೆ ಸಂಪರ್ಕಿಸಿ. Box No. 10, C/o Kodagu Sangathi, Phone : 0821/2404290

27 ವರ್ಷ ವಯಸ್ಸಿನ ಬಿ. ಇ. ಓದಿ ನೌಕರಿಯಲ್ಲಿರುವ ಸುಸಂಸ್ಕೃತ ಸುಂದರ ಗೌಡ ವಿಚ್ಛೇದಿತ ಮಹಿಳೆಗೆ ವರ ಬೇಕಾಗಿದೆ. ಮಕ್ಕಳಿಲ್ಲ. ಸರ್ಕಾರಿ ಯಾ ಖಾಸಗಿ ಉದ್ಯೋಗದಲ್ಲಿರುವ ಆಸಕ್ತ ಗೌಡ ವರರು ಸಂಪರ್ಕಿಸಬೇಕಾದ ವಿಳಾಸ Box No. 11, Kodagu Sangathi, Phone : 0821/2404290



ಕುದುಪಜೆ ಬಸಪ್ಪ,
ಕುಶಾಲನಗರ

ಆಯ್ಕೆ ಹಿಂತೆಗೆದುಕೊಳ್ಳಲಾಗಿದೆ

ಕೊಡಗು ಸಂಗಾತಿ, ಪಾಕ್ಷಿಕ ಪತ್ರಿಕೆಯ ಸೋಮವಾರ ಪೇಟೆ ತಾಲೂಕಿನ ಕ್ಷೇತ್ರ ನಿರ್ವಾಹಕರಾಗಿ ಕುಶಾಲನಗರದ ಕುದುಪಜೆ ಬಸಪ್ಪನವರನ್ನು ಸಂಗಾತಿ ಸಂಪುಟ 7 ಸಂಚಿಕೆ 16-17 ರಲ್ಲಿ ಪ್ರಕಟಿಸಲಾಗಿತ್ತು. ಅನಾರೋಗ್ಯದ ನಿಮಿತ್ತ ಶ್ರೀಯುತರ ಸಹಕಾರವನ್ನು ಹಿಂತೆಗೆದುಕೊಳ್ಳಲಾಗಿದೆ. ಸಂಗಾತಿಗೆ ಸಂಬಂಧ ಪಟ್ಟ ಹಣದ ವಿಚಾರ, ಲೇಖನ, ಬರಹಗಳಿಗಾಗಿ ಕುಂಭಗೌಡನ ಸೋಮಣ್ಣನವರನ್ನು ಸಂಪರ್ಕಿಸಬಹುದಾಗಿದೆ. ಓದುಗರ ಹಾಗೂ ಹಿತೈಷಿಗಳ ಸಹಕಾರ ಹಿಂದಿನಂತೆಯೇ ಮುಂದುವರಿಯಲೆಂಬುದಾಗಿ ನಮ್ಮ ಹಾರೈಕೆ.

ವಿಳಾಸ : ಕುಂಭ ಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಫಾತಿಮಾ ಹೈಸ್ಕೂಲ್ ಎದುರುಗಡೆ, ಕುಶಾಲನಗರ, Phone : 08276/273370

-ಪಟ್ಟಡ ಪ್ರಭಾಕರ, ಗೌರವ ಸಂಪಾದಕರು



ಶ್ರೀ ಕುರುಂಜಿ ವೆಂಕಟ್ರಮಣ ಗೌಡರ ವಜ್ರಮಹೋತ್ಸವದ ಸ್ಮರಣ ಸಂಚಿಕೆ, ಕ್ಯಾಸೆಟ್‌ಗಳು ಕೊಡಗು ಸಂಗಾತಿಯ ಮಡಿಕೇರಿ ಕಛೇರಿಯಲ್ಲಿ ಲಭ್ಯವಿದೆ.

ಸಂಪರ್ಕಿಸಿ ***: 228047***





ಜ: 10-12-1958
ಮ: 28-1-2002

ದ್ವಿತೀಯ ವರ್ಷದ ಪುಣ್ಯಸ್ಮರಣೆ

ನೀವು ಭೌತಿಕ ಶರೀರವನ್ನು ತ್ಯಜಿಸಿ ಎರಡು ವರ್ಷ ಕಳೆದರು ನಿಮ್ಮ ನೆನಪುಗಳು ನಿಮ್ಮ ಆ ಒಡನಾಟದ ಸುಂದರ ಕ್ಷಣಗಳು ನಮ್ಮ ಕಣ್ಣು ಮುಂದೆ ಆಗಾಗ ತೇಲಿ ಬರುತ್ತಿದೆ. ನೀವು ತೋರಿಸಿಕೊಟ್ಟ ಆದರ್ಶಮಯ ಮಾರ್ಗದರ್ಶನವು ನಮಗೆಲ್ಲರಿಗೂ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಸದಾ ಚಿರಶಾಂತಿಯನ್ನು ಆ ಭಗವಂತನು ನೀಡಲೆಂದು ಪ್ರಾರ್ಥಿಸುವೆವು.

ಪತ್ನಿ : ಇಂದು, ಮಕ್ಕಳು : ಚಾಂದಿನಿ ಮತ್ತು ಕಾಳಪ್ಪ, ಮಡಿಕೇರಿ. Phone : 223763

2004, ಜನವರಿ 1 ರಿಂದ 31ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಮತ್ತು ಕೋರಿಯರ್ ಸರ್ವಿಸ್ ಇತ್ಯಾದಿ	ಕೊಡಗು ಸಂಗಾತಿ,12058, ಸಂಗಾತಿ ನಿಲಯ,ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17.**ಫೋನ್:0821/2404290** ಕುಂಟುಪುಣಿ ರಾಮಕೃಷ್ಣ, ಕಾವೇರಿ ಆಟೋಮೊಬೈಲ್, ರಿಂಗ್ ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 **Mobile : 94483-90855**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ: ಚಿಹ್ನೆ, ಹಸೆಮಣೆ ಪುಸ್ತಕ / ಚಾಂಪಾ ಶುಭಾಶಯ ಕಾರ್ಡ್ಸ್ / ಕುರುಂಜಿಯವರ ಕ್ಯಾಸೆಟ್ಸ್, ಅಮರಶ್ರೀ ಸ್ಮರಣ ಸಂಚಿಕೆ ಇತ್ಯಾದಿ ಲಭ್ಯ.	ಕೊಡಗು ಸಂಗಾತಿ C/o ಪಾಂಡನ ಕಾಂಪೌಂಡ್, 21/4, (1), ಅಪ್ಪಯ್ಯ ಗೌಡ ರಸ್ತೆ, ಜೂನಿಯರ್ ಕಾಲೇಜು ಹತ್ತಿರ, ಮಡಿಕೇರಿ - 571 201 ಬೈತಡ್ಕ ಜಾನಕಿ ಬೆಳ್ಯಪ್ಪ ಫೋನ್ : 228047 ಪಾಂಡನ ರತಿ ಚಂದ್ರಶೇಖರ್ ಫೋನ್ : **228380**
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/256591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೆಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/273370
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006 Mobile : 94482 25160

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ. ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ),

ಕೊಡಗು ಸಂಗಾತಿಯನ್ನು ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಹೊಸ ವರುಷ : ಹರುಷ ತರಲಿ

ಪ್ರಕೃತಿಯ ಒಂದೊಂದು ಪ್ರಬೇಧದಲ್ಲೂ ಹೊಸತನ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಕಾಣಿಸಿಕೊಳ್ಳುತ್ತದೆ. ಕೆಲವು ಸಸ್ಯಗಳು ಅಕ್ಟೋಬರ್ ನವಂಬರ್ ತಿಂಗಳುಗಳಲ್ಲಿ ತಮ್ಮ ಮುದಿ ಎಲೆಯ ವಸ್ತ್ರ ಕಳಚಿ ವಸಂತಕಾಲದಲ್ಲಿ ಹೊಚ್ಚ ಹೊಸ ಹಸಿರನ್ನುಟ್ಟು ಹೊಸತನವನ್ನು ಮೆರೆಯುತ್ತವೆ. ಕೆಲವು ಬೇಸಿಗೆಯಲ್ಲಿ ಹಸಿರುಡುತ್ತವೆ. ಪ್ರಾಣಿಗಳಲ್ಲೂ ಹಾಗೆಯೇ. ಕೂದಲು ಉದುರುವುದು, ಪೊರೆ ಕಳಚುವುದು ಮುಂತಾದ ಕೆಲವು ದೈಹಿಕ ಲಕ್ಷಣಗಳಲ್ಲಿ ಬದಲಾಗುವ ಮುಖೇನ, ನಾವೀನ್ಯತೆ ಮೆರೆಯುತ್ತವೆ. ಆದರೆ ಮಾನವರು ಇಂತಹ ಭೌತಿಕ ಬದಲಾವಣೆಗಳನ್ನು ನಿತ್ಯವೂ ಕಾಣುವುದರಿಂದ ಜೈವಿಕ ಹೊಸತನ ಅಷ್ಟು ಪ್ರಧಾನವಾಗಿ ಕಾಣುವುದಿಲ್ಲ. ಕಾಲವನ್ನು ಆಧಾರವಾಗಿಟ್ಟುಕೊಂಡು ಹೊಸ ವರ್ಷವನ್ನಾಗಿ ಆಚರಿಸುವ ಪರಿಪಾಠ ಇತ್ತೀಚೆಗಷ್ಟೇ ಹೆಚ್ಚು ಪ್ರಚುರವಾಗಿದೆ. ಆದರೆ ನಿಜವಾಗಿ ನಾವು ಹೊಸತನ ಕಾಣಬೇಕಾದ್ದು ಕಾಲದಲ್ಲಲ್ಲ. ನಮ್ಮ ತಿಳುವಳಿಕೆ ನಡವಳಿಕೆಗಳಲ್ಲಿ ಸಾಮೂಹಿಕ ಕಲ್ಯಾಣ ದೃಷ್ಟಿಯಿಂದ ಪ್ರಯೋಜನಕಾರಿ ಎಂದೆನಿಸುವ ವರ್ತನೆಗಳ ಉತ್ತಮೀಕರಣ ಗೊಳಿಸುವುದು. ಅಹಿತವಾದವುಗಳನ್ನು ವರ್ಜಿಸುವುದರಲ್ಲಿ ನಿಜವಾಗಿ ನಾವು ಹೊಸತನ ಕಾಣಬೇಕಲ್ಲದೆ, ಒಂದು ದಿನವನ್ನು ಹೊಸದೆಂದು ಹೇಳುವುದರಲ್ಲಿ ಉಳಿದ ದಿನಗಳನ್ನು ಕಡೆಗಣಿಸಬಾರದು. ಹಾಗೆ ನೋಡಿದರೆ ಒಂದೊಂದು ಸೆಕೆಂಡುಗಳೂ ನಮಗೆ ಹೊಸತೆ. ಅನುಕೂಲಕ್ಕಾಗಿಯಷ್ಟೇ ಒಂದು ಕಾಲ ಘಟ್ಟವನ್ನು ಹೊಸದಾಗಿ ಆಚರಿಸುವ ಔಚಿತ್ಯದ ಸೂಚ್ಯಾರ್ಥವನ್ನು ಅರಿತುಕೊಳ್ಳಬೇಕು. ಹಿಂದೂಗಳು ಪ್ರಾಕೃತಿಕ ಹೊಸತನವನ್ನು ಆಧಾರವಾಗಿಟ್ಟುಕೊಂಡು ಯುಗಾದಿಯನ್ನು ಹೊಸದಿನವೆಂದು ಹೇಳುತ್ತಾರೆ. ಕ್ರೈಸ್ತರು ಒಬ್ಬ ಪ್ರಭಾವೀ ವ್ಯಕ್ತಿಯ ಜನನವನ್ನೂ, ಮುಸ್ಲಿಮರು ಮಹಮ್ಮದನು ಜನೋದ್ಧಾರಕ್ಕಾಗಿ ತನ್ನನ್ನು ತೊಡಗಿಸಿಕೊಂಡು ಹಿಜಿರಾ ಘಟನೆಯ ತಿರುವನ್ನೂ ಹೊಸದರ ದ್ಯೋತಕವಾಗಿ ಕಾಣುತ್ತಾರೆ. ಈ ಎಲ್ಲ ಹಿನ್ನಲೆಗಳ ಔಚಿತ್ಯ ಅರಿತಾಗಲೇ ಹೊಸತನಕ್ಕೆ ಅರ್ಥ ಬರುವುದಲ್ಲವೆ?

ಕಳೆದ ವರ್ಷವೂ ಈ ವರ್ಷದಷ್ಟೇ ಹೊಸದಾಗಿ ಪುನೀತವಾಗಿ ಕಾಲದ ನಿರ್ಮಲ ಪುಟಗಳನ್ನು ನಮಗೆ ನೀಡಿತ್ತು. ಅದರಲ್ಲಿ ಏನೆಲ್ಲಾ ತುಂಬಿಬಿಟ್ಟೆವು ನಾವು ಭಯೋತ್ಪಾದನೆ ಯಿಂದಿಡಿದು ಶಾಂತಿ ಪ್ರಗತಿಯವರೆಗಿನ ಕಳೆದ ವಿಚಾರಗಳೂ ಈಗ ಹಳಸಲು ಸುದ್ದಿಗಳು.

ಕೆಲವರಿಗೆ ತಮ್ಮ ಯೋಜನೆ ಸಾಧನೆಗಳನ್ನು ಬರೆಯಲು ಆ ಪುಟಗಳು ಸಾಲವು. ಕೆಲವರು ಒಂದು ಪುಟವನ್ನು ಸಹ ಬರೆಯಲಾರರು. ಹೊಸತಿಲ್ಲದ ಬದುಕು ಜಡ, ಪರಿವರ್ತನೆ ಜಗದ ನಿಯಮ. ಈ ನಿಸರ್ಗ ನಿಯಮಗಳಿಗೆ ಅಡ್ಡಿ ಪಡಿಸಿದಾಗ ನೈಸರ್ಗಿಕ ವೈಪರೀತ್ಯಗಳು ಸಂಭವಿಸುತ್ತವೆ. ಜೀವಿ ಸಂಕುಲ ವಿನಾಶದ ಹಾದಿ ಹಿಡಿಯುತ್ತದೆ. ಆದ್ದರಿಂದ ನಿಸರ್ಗಕ್ಕೆ ಬಾಧೆಯಾಗದಂತೆ ಹೊಸ ಆವಿಷ್ಕಾರಗಳನ್ನು ನಡೆಸಬೇಕು. ಪ್ರಗತಿ ಪಥದಲ್ಲಿ ಸಾಗಬೇಕು.

ಎಲ್ಲರಿಗೂ ವರುಷ ಪೂರ್ಣ ಹರ್ಷವಿರಲಿ. ಇಷ್ಟಾರ್ಥ ಸಿದ್ಧಿಸಲಿ. ಶ್ರೀ ಕುಲಗುರು ವೆಂಕಟರಮಣ ಮತ್ತೆ ತಾಯಿ ಶಾರದಾಂಬೆ ನಿಮಗೆ ಹೊಸತನ ಸಿರಿತನ ಸಕಲೈಶ್ವರ್ಯವನ್ನು ಕೊಟ್ಟು ಸಮೃದ್ಧಿಯಿಂದಿಡಲಿ ಎಂಬುದಾಗಿ ಸಂಗಾತಿ ಈ ಸಂದರ್ಭದಲ್ಲಿ ಶುಭ ಕೋರುತ್ತದೆ.

ಕನ್ನಡ ಸಾಹಿತ್ಯ ಸಮ್ಮೇಳನ

ಸಾಹಿತ್ಯ 71ನೇ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡ ಸಾಹಿತ್ಯ ಸಮ್ಮೇಳನದ ಚರಿತ್ರೆಯಲ್ಲಿಯೇ ವಿಭಿನ್ನವಾಗಿದೆ. ಜೈನರ ನೆರೆವೀಡಾದ ಮೂಡಬಿದಿರೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನ ಕನ್ನಡ ಭಾಷೆಗೆ ಜೈನ ಸಾಹಿತ್ಯ ಕೊಟ್ಟ ಸಾಹಿತ್ಯದ ಕೊಡುಗೆಯಷ್ಟೇ ಸಮ್ಮೇಳನದಲ್ಲಿ ಆಯ್ದುಕೊಂಡ ರಂಗಮಂಟಪದ ಚಪ್ಪರದ ವೈಶಿಷ್ಟ್ಯ ಜೈನ ಸಂಸ್ಕೃತಿಯ ಶಿಲ್ಪದ ನಮೂನೆಯಂತೆ ತಯಾರಿಸಿದರ ಜೊತೆಯಲ್ಲಿ ದಕ್ಷಿಣ ಕನ್ನಡ ಹಾಗೂ ಕೇರಳದ ವಾಸ್ತು ಶಿಲ್ಪದ ಶೈಲಿಯೂ ಮೈಗೂಡಿ ನಿಂತಂತಿತ್ತು.

ಎರಡು ಲಕ್ಷ ಜನರಿಗೆ ಉಳಿದುಕೊಳ್ಳುವವ ಸೌಲಭ್ಯ, ಆರೋಗ್ಯದ ದೃಷ್ಟಿಯಿಂದ ಅಲ್ಲಿನ ಪರಿಸರವನ್ನು ಶುಚಿಯಾಗಿ ಇರಿಸಿ ನೀರು, ಆಹಾರದ ವ್ಯವಸ್ಥೆ ಎಲ್ಲರ ಮೆಚ್ಚಿಗೆಗೆ ಪಾತ್ರವಾಗಿತ್ತು. ಸಸ್ಯಹಾರಿ ಊಟ ತಿನಿಸುಗಳಿಗೆ ಹೆಸರಾದ ದಕ್ಷಿಣ ಕನ್ನಡ ಜಿಲ್ಲೆಯ ಜನಗಳ ರುಚಿಯನ್ನು ದೂರ ದೂರದ ಊರಿನಿಂದ ಬಂದ ಕನ್ನಡ ಪ್ರೇಮಿಗಳಿಗೆ ಬಡಿಸಲಾಗಿತ್ತು. ಎಲ್ಲಾ ಚಟುವಟಿಕೆಗಳು ಕ್ರಮಬದ್ಧವಾಗಿ ಶಿಸ್ತಿನಿಂದ ನಿರ್ವಹಿಸಲ್ಪಟ್ಟಿತು.

ಇಂತಹ ಏರ್ಪಾಡುಗಳಿಗೆ ಪ್ರತಿಯೊಂದು ಹಂತದಲ್ಲಿ ತಕ್ಕ ಮಾರ್ಗದರ್ಶನವನ್ನು ಡಾ. ಮೋಹನ ಅವರು ಉತ್ತಮ ಮಾರ್ಗದರ್ಶನದಲ್ಲಿ ಶಿಸ್ತಿನಿಂದ ನಡೆಸಿಕೊಂಡು ಬರಲಾಯಿತು. ಈ ರೀತಿಯಾಗಿ ಈ ಸಮ್ಮೇಳನ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ನಡೆದ ಸಮ್ಮೇಳನ ಉತ್ತಮ ಮಟ್ಟದ ಏರ್ಪಾಡುಗಳಿಂದ ಬೇರೆ ಪ್ರದೇಶದವರಿಗೆ ಒಂದು ಮಾರ್ಗದರ್ಶನವಾಗಿ ಒಂದು ರೀತಿಯ ಚರಿತ್ರೆಯನ್ನು ಸೃಷ್ಟಿಸಿದಂತಾಗಿದೆ.

ದಾನ ಮಾಡಿದಷ್ಟು ವೃದ್ಧಿಸುವುದೆಂದರೆ ವಿದ್ಯೆ ಮಾತ್ರ

ಜನಾಂಗದ ಅಭಿವೃದ್ಧಿಯಲ್ಲಿ ಶ್ರೀ ಕುರುಂಜಿ

ಕರ್ನಾಟಕದಲ್ಲಿ, ಅದರಲ್ಲೂ ಕೊಡಗು ಮತ್ತು ದಕ್ಷಿಣ ಕನ್ನಡ ಆವಾಸಗಳಲ್ಲಿ ಭಾರತೀಯ ಸಂಸ್ಕೃತಿಯ ಕೆಲವು ವಿಶೇಷ ಅಂಶಗಳನ್ನು ಇಂದಿಗೂ ಪಾಲಿಸಿಕೊಂಡು ಬರುತ್ತಾ ಒಂದು ವಿಶೇಷ ಪ್ರಧಾನ ಜನಾಂಗವಾಗಿ ಗುರುತಿಸಲ್ಪಟ್ಟಿರುವುದು ಗೌಡ ಜನಾಂಗ. ಅರೆಭಾಷೆ ಹಾಗೂ ಉಡುಗೆ-ತೊಡುಗೆಗಳಲ್ಲಿಯಂತೂ ಶ್ರೇಷ್ಠ ಸಂಸ್ಕೃತಿಯ ಬಿಂಬವಾಗಿ ನಿಲ್ಲುವಂತದ್ದು. ಆಧುನಿಕತೆಯ ಗಾಳಿ ಮಂದಗತಿಯಲ್ಲಿ ಬೀಸಿ ಬರುತ್ತಿದ್ದ ಕೊಡಗಿನಲ್ಲಿ ಸ್ವಾತಂತ್ರ್ಯ ಬರುವವರೆಗೂ ಗೌಡರ ಸ್ಥಿತಿ ಶೋಚನೀಯವಾಗಿತ್ತು. ಶೈಕ್ಷಣಿಕವಾಗಿ, ಆರ್ಥಿಕವಾಗಿ ಎಲ್ಲ ರೀತಿಯಲ್ಲೂ ದೌರ್ಜನ್ಯ ಕ್ಕೊಳಗಾಗಿದ್ದು, ಅಸಂಘಟಿತರಾಗಿ ಅವರ ಶ್ರೀಮಂತ ಸಂಸ್ಕೃತಿಯ ಅಸ್ತಿತ್ವವನ್ನೇ ಗುರುತಿಸಿಕೊಳ್ಳಲಾಗದ ಅತಂತ್ರ ಅಸಹಾಯಕ ಸ್ಥಿತಿ ನಿರ್ಮಾಣವಾಗಿತ್ತು. ಸರ್ವ ಸಾಮಾಜಿಕ ರೋಗಕ್ಕೂ ಸಿದ್ಧೌಷದ ಶಿಕ್ಷಣ. ಆ ಶಿಕ್ಷಣವನ್ನು ಪಡೆಯಲು ದೂರದ ನಗರಗಳಿಗೆ ಹೋಗಿ ಬರುವಷ್ಟೂ ಅನುಕೂಲವಿರದ ದುಸ್ಥಿತಿ ಅಂದಿನದು.

ದುಷ್ಟ ನಿಗ್ರಹಕ್ಕೆ ಶಿಷ್ಟ ರಕ್ಷಣೆಗೆ ಭಗವಂತನು ಒಂದೊಂದು ಯುಗದಲ್ಲಿ ಒಂದೊಂದು ರೂಪದಲ್ಲಿ ಅವತರಿಸುತ್ತಾನಂತೆ. ಕೊಡಗು, ದಕ್ಷಿಣ ಕನ್ನಡದ ಮಟ್ಟಿಗೆ ಅದರಲ್ಲೂ ಗೌಡ ಜನಾಂಗದ ದೃಷ್ಟಿಯಿಂದ ಹೇಳುವುದಾದರೆ ಶ್ರೀ ಕುರುಂಜಿ ವೆಂಕಟ್ರಮಣ ಗೌಡರೇ ಆ ಅವತಾರ ಪುರುಷರು. ದುಷ್ಟರ ನಿಗ್ರಹ ಎಷ್ಟರ ಮಟ್ಟಿಗೆ ಆಗಿದೆ ಎಂಬುದು ಈಗ ಪ್ರಸ್ತುತವಲ್ಲ. ಆದರೆ ಗೌಡರ ದೂರದರ್ಶಿತ್ವದ ಯೋಜನೆಗಳಲ್ಲಿ ಹಾಗೂ ಅವರ ಆದರ್ಶಗಳಲ್ಲಿ ಸುಳ್ಯ ಮತ್ತು ಗೌಡ ಜನಾಂಗ ಯಶಸ್ಸಿನ ಶೃಂಗವನ್ನು ಎಲ್ಲಾ ರಂಗಗಳಲ್ಲೂ ಕಂಡಿದೆ ಎಂಬುದಂತು ಅಭೇದ್ಯ ಸತ್ಯ.

ಅಂದಿನ ಪೊದೆಗಳಿಂದ ತುಂಬಿದ, ಮುರಕಲ್ಲಿನ ಬಂಜರು ಭೂಮಿಯಾದ 'ಅಡ್ಕ'ವೊಂದು ಇಂದಿನ ಕುರುಂಜಿಬಾಗ್ ಆಗಿ ಭಾರತದ ನಕ್ಷೆಯಲ್ಲಿ ಮಿನುಗು ನಕ್ಷತ್ರವಾಗಿ ಕಾಣುವಲ್ಲಿ ಮತ್ತು ಸುಳ್ಯ ಒಂದು ತಾಲ್ಲೂಕು ಕೇಂದ್ರವಾಗಿ ನಿರ್ಮಾಣಗೊಳ್ಳುವಲ್ಲಿನ ಎಲ್ಲಾ ಕಾರ್ಯಗಳು ಗೌಡರು ಪಟ್ಟು ಹಿಡಿದು ಸಾಧಿಸಿದ ಕಾರ್ಯದ ಫಲಗಳು.

ಒಂದು ಜನಾಂಗದ ಉತ್ಕೃಷ್ಟತೆಯನ್ನು ಆ ಜನಾಂಗದಲ್ಲಿ ಜನಿಸಿರುವ ವ್ಯಕ್ತಿ ಸಾಧಿಸಿದ ಕಾರ್ಯದಿಂದ ಅಳೆಯಬಹುದು. (ಯಾದವ ಕುಲವನು ಪಾವನಗೊಳಿಸಿ ಉದಿಸಿದ ಮಾಧವ ಮಥುರೆಯಲಿ ಎಂಬಂತೆ) ಹಾಗಾಗಿ ಶ್ರೀ ಕುರುಂಜಿಯವರನ್ನು ಹೆತ್ತ ಜನಾಂಗದ ಮಡಿಲು ಪುನೀತವಾಗಿದೆ. ಸಂಸ್ಕೃತಿಯಿಲ್ಲದ ವ್ಯಕ್ತಿ ಸುಸಂಸ್ಕೃತನಾಗಲಾರ ಎಂಬ ಮಾತನ್ನು ಒಪ್ಪುವುದಾದರೆ ಕುರುಂಜಿಯವರ ಜನಾಂಗ ಸಂಸ್ಕೃತಿಯ ನೆಲೆ-ಬೆಲೆ ಅರ್ಥವಾದೀತು.

ಶ್ರೀಯವರು ಸರ್ವಜನರಲ್ಲೂ ಸರ್ವೋದಯವನ್ನುಂಟುಮಾಡಿದ ಮಹಾನ್ ಚೇತನ. ಯಾವುದೇ ಫಲಾಪೇಕ್ಷೆಗಳನ್ನು ನಿರೀಕ್ಷಿಸದೆ ಕಾರ್ಯವೆಸಗುವ ನಿಸ್ವಾರ್ಥ ಪ್ರಜ್ಞೆಯ ಕಷ್ಟ ಸಹಿಷ್ಣು! ಪರಹಿತ ಚಿಂತನೆಯಲ್ಲಿಯೇ ತಮ್ಮ ಶ್ರೇಯಸ್ಸು ಬಯಸಿದ ವೈಶಾಲ್ಯ ಹೃದಯದ ಆದರ್ಶಮಯಿ. ಆದರೂ ತಮ್ಮ ಜನಾಂಗವೆಂಬ ಅಂಧಾಭಿಮಾನವಾಗಲೀ ಅನ್ಯ ಜನಾಂಗದ ಬಗೆಗೆ ನಿರಭಿಮಾನವಾಗಲೀ ಅವರಲ್ಲಿಲ್ಲ. ಶ್ರೀ ಕುರುಂಜಿಯವರು ಸಾಗಿದ ಸಾಧನೆಯ ಹಾದಿಯಲ್ಲಿ ಅವರ ಜನಾಂಗದ ಅಭಿವೃದ್ಧಿ, ಹಿರಿಮೆ ಗರಿಮೆಗಳೂ ಅಡಗಿವೆ.

ಶ್ರೀ ಕುರುಂಜಿಯವರ ಆದರ್ಶ ದುಡಿಮೆಯ ಫಲವಾಗಿ ಗೌಡ ಜನಾಂಗದ ಇತಿಹಾಸವೇ ನವೀಕರಣಗೊಂಡು ಯಶಸ್ಸಿನ ಹಾದಿ ಹಿಡಿದಿದೆ. ಅವರ ಬಾಳು ಬೆಳಗಿದೆ. ಭವಿಷ್ಯದ ಹಾದಿಯೂ ಸುಗಮವಾಗಿದೆ. ಆ ಯಶಸ್ಸಿನ ಗುಟ್ಟೇನು ಎಂಬುದನ್ನು ಭೇದಿಸಿ ನೋಡೋಣ?

ಧರೆಯನ್ನು ಪಾವನಗೊಳಿಸಲು ಭಗೀರಥ ಗಂಗೆಯನ್ನು ಕರೆತಂದಂತೆ ಶ್ರೀಯವರು ಕೊಡಗು ಮತ್ತು ದಕ್ಷಿಣ ಕನ್ನಡದ ಜನರಿಗೆ ಜ್ಞಾನ ಮಂಜುಳ ನೀಡಲು ಶಿಕ್ಷಣ ಧಾರೆಯನ್ನು ಕರೆತಂದರು. ಶಿಕ್ಷಣದಿಂದ ಬಹುತೇಕ ಸಮಸ್ಯೆಗಳು ದೂರಾಗುತ್ತವೆ ಎಂಬ ಅಚಲ ನಂಬಿಕೆ ಅವರದು. ಹಾಗಾಗಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಹಂತ ಹಂತವಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು.

Academy of Liberal Education:

Nehru Memorial College ಗಳು ಅಭಿವೃದ್ಧಿಗೊಂಡು ಜ್ಞಾನಗಂಗೆಯನ್ನು ಸಿಂಚನ ಮಾಡಿ ತನ್ಮೂಲಕ ಗೌಡ ಜನಾಂಗವು ಶೈಕ್ಷಣಿಕ ಧಾರೆಯಲ್ಲಿ ಲೀನವಾಗಿ ಆಧುನಿಕ ಬದುಕಿಗೆ ಸ್ಪಂದಿಸಲು ಸಹಾಯಕವಾಯಿತು.

ಹೀಗೆ ಹತ್ತು ಹಲವು ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದ ನಂತರ ಶ್ರೀ ಕುರುಂಜಿಯವರ ಆಲೋಚನಾ ಮನಸ್ಸು ಇಷ್ಟಕ್ಕೇ ತೃಪ್ತವಾಗಲಿಲ್ಲ. ಪದವಿ ಪಡೆದವರ ಭವಿಷ್ಯದ ಪಾಡೇನು? ಆದ್ದರಿಂದ ತಮ್ಮ ಕಾಲ ಮೇಲೆ ನಿಂತು ವಯಸ್ಕ ಜೀವನದ ಜವಾಬ್ದಾರಿಯನ್ನು ಹೊರಲು ಸಮರ್ಥರಾಗುವಂತೆ ಶಿಕ್ಷಣ ನೀಡಬೇಕು ಎಂಬ ಚಿಂತನೆಯನ್ನು ಚುರುಕುಗೊಳಿಸಿದರು. ಅದರ ಫಲವಾಗಿ ಶ್ರೀ ಕುರುಂಜಿ ವೆಂಕಟ್ರಮಣಗೌಡ ಪಾಲಿಟೆಕ್ನಿಕ್ ಕಾಲೇಜು, ಐ.ಟಿ.ಐ. ತಾಂತ್ರಿಕ ಕಾಲೇಜುಗಳು ಜನ್ಮ ತಾಳಿದವು.

ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು

ಮುಂದೆ ಇಂಜಿನಿಯರಿಂಗ್ ಕಾಲೇಜು ಹಾಗೂ ಮೆಡಿಕಲ್ ಕಾಲೇಜ್‌ಗಳೂ ಸ್ಥಾಪನೆಯಾಗಿ ಭಾರತ ದೇಶದ ನಕ್ಷೆಯಲ್ಲಿ ಗುರುತಿಸುವಂತಾಯಿತು.

ಆರೋಗ್ಯವೇ ಭಾಗ್ಯವೆಂದು ಹೇಳುವ ಕುರುಂಜಿಯವರು ಸುಳ್ಯದಲ್ಲಿಯೇ ಒಂದು ದೊಡ್ಡ ಸಾರ್ವಜನಿಕ ಆಸ್ಪತ್ರೆಯನ್ನು ತೆರೆದರು. ಅಲ್ಲಿ ಅವರ ಹಿರಿಯ ಮಗ ಡಾ. ಚಿದಾನಂದರವರೇ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲಿನ ವೈದ್ಯಕೀಯ ಸೇವೆ ಬೇರೆಡೆ ಸಿಗಲಾರದೇನೊ ಎಂಬುವಷ್ಟು ಮಟ್ಟಿಗೆ ಅದು ಕಾರ್ಯ ನಿರತವಾಗಿದೆ. ಹೀಗೇ ಇಡೀ ಕುಟುಂಬವೇ ಜನಸೇವೆಗೆ ತೆರೆದಿಟ್ಟ ಬದುಕು ಅವರದು.

ಶಿಕ್ಷಣ ಮತ್ತು ಆರೋಗ್ಯಕ್ಕೆ ಅವರು ಕಟ್ಟಿದ ಕಟ್ಟಡಗಳೋ ಬೆರಗುಗೊಳಿಸುವಂತವು. ಸೇವೆ ಮಾಡಬೇಕೆಂದು ಸಡ್ಡು-ಸಗಟುಗಳನ್ನು ಹಿಡಿದವರಲ್ಲ. ಇಷ್ಟೆಲ್ಲಕ್ಕೂ ಬಂಡವಾಳ ಹೇಗೆ ಒದಗಿತೆಂಬುದೇ ಆಶ್ಚರ್ಯವಾಗುತ್ತದೆ. ಆದರೆ ಒಳ್ಳೆಯ ಕೆಲಸ ಕಾರ್ಯಗಳಿಗೆ ಎಲ್ಲಿಂದಾದರೂ ಹಣ ಹರಿದು ಬರುತ್ತದೆ ಎಂಬುದನ್ನು ಶ್ರೀಯವರೇ ಹೇಳುತ್ತಾರೆ.

ಶ್ರೀಯುತರು 'ಜ್ಞಾನವೇ ಶಕ್ತಿ' ಎಂಬ ಮಾತಲ್ಲಿ ನಂಬಿಕೆಯುಳ್ಳವರು. ಹಲವು ಸಾರ್ವಜನಿಕ ಗ್ರಂಥಾಲಯಗಳು ಇಂದು ಜನಾಂಗದ ಬೌದ್ಧಿಕ ಅಭಿವೃದ್ಧಿಗೆ ಸಹಾಯಕವಾಗಿವೆ. ಅವರ ಸ್ಫೂರ್ತಿಯಿಂದ ಜನಾಂಗದ ಯುವ ಪೀಳಿಗೆ ಎಚ್ಚೆತ್ತು ಅವರ ಆದರ್ಶದ ಪಥವನ್ನೇ ತುಳಿಯುತ್ತಿದ್ದಾರೆ. ದೊಡ್ಡ ದೊಡ್ಡ ಹುದ್ದೆಗಳನ್ನೂ ಅಲಂಕರಿಸಿದ್ದಾರೆ. 100% ರಷ್ಟು ಸಾಕ್ಷರರಾಗಿದ್ದಾರೆ. ತಮ್ಮತನವನ್ನು ಅರಿತಿದ್ದಾರೆ. ಇಂದು ನೂರಾರು ಕೊಡಗು ಗೌಡರ ಸಂಘ ಸಂಸ್ಥೆಗಳು ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುತ್ತಿವೆ. ಎಲ್ಲದಕ್ಕೂ ಗೌಡರ ಸಹಾಯ ಸಹಕಾರ ಇದ್ದೇ ಇದೆ.

ಶ್ರೀ ಕುರುಂಜಿ ವೆಂಕಟ್ರಮಣನವರು ಭೋಗ ಜೀವನವನ್ನು ಆಸೆ ಪಡುವವರಲ್ಲ. ಜನಾಂಗಕ್ಕೆ ಸರಳ ವಿವಾಹ, ಸರಳ ಜೀವನ, ಉಳಿತಾಯದ ಹಾದಿಯ ಸಂದೇಶಗಳನ್ನುಬಿತ್ತುತ್ತಾರೆ. ಕುಡಿದು ಹಾಳಾಗುವುದನ್ನು ತಪ್ಪಿಸಲು ಮದ್ಯವರ್ಜನಾ ಘಟಕಗಳನ್ನೂ ಸ್ಥಾಪಿಸಿ ಅರಿವು ಮೂಡಿಸುವ ಕೆಲಸದಲ್ಲೂ ತೊಡಗಿದ್ದಾರೆ. ಇವು ಅವರ ಸಾಮಾಜಿಕ ಕಾಳಜಿಗೆ ಸಾಕ್ಷಿಯೆಂದರೆ ತಪ್ಪಾಗಲಾರದು. ಎಲ್ಲರೊಡನೆಯೂ ಈಗಲೂ ಪ್ರಸನ್ನವದನರಾಗಿ ಮಾತನಾಡುತ್ತಾರೆ.

ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು ಎಂಬಂತೆ ನಡೆದು ಈಗ ಅವರ ನೆರಳು ಕಾಣದ ಗ್ರಾಮವಿಲ್ಲ. ಅವರು ಸಹಾಯ ಹಸ್ತ ನೀಡದ ಸಂಸ್ಥೆಯಿಲ್ಲ. ಅವರ ಹೆಸರು ಗೊತ್ತಿಲ್ಲದ ಅಜ್ಞಾನಿ ಜನಾಂಗದಲ್ಲಿಲ್ಲ. ಅವರ ದಾನ ಪಡೆದು ಮುಂಬಂದ ಶ್ರೀ ಸಾಮಾನ್ಯರಿಗೆ ಲೆಕ್ಕವಿಲ್ಲ. ಆಡದೆ ಕೊಡುವವರು ರೂಢಿಯೊಳಗೆ ಉತ್ತಮರಂತೆ. ಹಾಗಾಗಿ ಶ್ರೀಯವರು ಉತ್ತಮೋತ್ತಮರ ಶ್ರೇಷ್ಠರ ಸಾಲಿಗೆ ಸೇರುವವರು.

ಅವರು ಕಟ್ಟಿದ ಕಲ್ಯಾಣ ಮಂಟಪಗಳೆಷ್ಟೋ, ಸಮುದಾಯ ಭವನಗಳೆಷ್ಟೋ. ಇಷ್ಟೆಲ್ಲಾ ಜೀವನೋಪಯೋಗಿ ಅನುಕೂಲಗಳೆಲ್ಲವೂ ಒಬ್ಬರ ಸಾಧನೆಯ ಫಲವೆಂದರೆ ಖಂಡಿತ ಆಶ್ಚರ್ಯವಲ್ಲವೆ?

ಶ್ರೀ ಕುರುಂಜಿಯವರು ಸರ್ಕಾರಿ ಚಾಕರಿಗೇ ಸೇರಬೇಕೆಂದು ಎಂದೂ ಹೇಳಿದವರಲ್ಲ. ಅವರ ಸಾಧನೆಯನ್ನೇ ಮುಂದಿಡುತ್ತಾ ಮಾದರಿ ಕೃಷಿಯನ್ನು ಬೆಂಬಲಿಸುತ್ತಾರೆ. ಭೂ ಒಡೆತನವನ್ನು ಮಾಡಿ ಅಭಿವೃದ್ಧಿ ಹೊಂದಲು ಉತ್ತೇಜನ ನೀಡುತ್ತಾರೆ.

ಒಟ್ಟಿನಲ್ಲಿ ಒಬ್ಬ ವ್ಯಕ್ತಿಯ ಹುಟ್ಟಿನಿಂದ ಸಾವಿನವರೆಗಿನ ಅಗತ್ಯ ಸಾಮಾಜಿಕ ಸವಲತ್ತುಗಳನ್ನು ಕಲ್ಪಿಸುವ ಎಲ್ಲಾ ಅವಕಾಶಗಳನ್ನೂ ಶ್ರೀಯವರು ತೆರೆದು ಕೊಟ್ಟಿದ್ದಾರೆ. ಅವನ್ನು ಉಳಿಸಿ ಬೆಳೆಸಿ ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಸಮಾಜಕ್ಕಿದೆ. ಇಷ್ಟೆಲ್ಲಾ ಸಾಧನೆಯ ಹಿನ್ನಲೆಯಲ್ಲಿಯೂ ಸ್ವಲ್ಪವೂ ಬೀಗುವ ಸ್ವಭಾವವಿಲ್ಲ. ದೇವರು ನನ್ನಿಂದ ಇದನ್ನೆಲ್ಲಾ ಮಾಡಿಸುತ್ತಾನೆಂಬ ದೈನ್ಯಭಾವ ಆದರ್ಶಪ್ರಾಯವಾದುದು.

ಇಷ್ಟೆಲ್ಲಾ ಸಾಧಿಸಿದ ಶ್ರೀಯವರ ಮೂಲ ಬಂಡವಾಳವಾದರೂ ಏನುಗೊತ್ತೆ? ಕನಸನ್ನು ನನಸಾಗಿಸುವಲ್ಲಿನ ಅವರ ಅಹರ್ನಿಶಿ ದುಡಿಮೆ, ದೈನಂದಿನ ಅವಿರತ ಪ್ರಯತ್ನ ಹಾಗೂ ದೂರದರ್ಶಿತ್ವದ ಚಿಂತನೆ.

ಬಹುಶಃ ಗೌಡ ಜನಾಂಗದ ಚರಿತ್ರೆಯಲ್ಲಿ ಬಂಗಾರದ ಪ್ರತಿಮೆಯಾಗಲಿರುವ ಆ ಆದರ್ಶ ವ್ಯಕ್ತಿತ್ವದ ಮಹಿಮಾ ಮಹಾಪುರುಷ ಮುಂದೆ ಹುಟ್ಟಿ ಬರಲು ಯುಗಗಳೇ ಬೇಕಾಗಬಹುದೇನೋ ಅನಿಸುತ್ತದೆ.

ಕರ್ಮಯೋಗಿ ಕುರುಂಜಿ, ಅಮರ ಸುಳ್ಯದ ಅಮರಶಿಲ್ಪಿ ಎಂಬುದಾಗಿ ಕೊಡಗಿನ ಗುಡ್ಡಗಳು ಎಂದೆಂದಿಗೂ ಮಾರ್ದನಿಸುತ್ತವೆ. ಈ ಎಲ್ಲ ಅನ್ವರ್ಥನಾಮಗಳೂ ಅವರ ಅವಿರತ, ನಿರಪೇಕ್ಷ ದುಡಿಮೆಗೆ ಸಂದ ಗೌರವಗಳು. ಇಂತಹ ಸ್ತುತಿ ನಿಂದೆಗೂ ಕಿವಿಗೊಡದ ಸ್ಥಿತಪ್ರಜ್ಞರು ಶ್ರೀ ಕುರುಂಜಿ ವೆಂಕಟ್ರಮಣಗೌಡರು.

ಅವರಿಗೆ ಜೈಕಾರ ಹಾಕಲು ಇಂದು ಸಾವಿರಾರು ಕೈಗಳಿವೆ. ನೂರಾರು ಸಂಘ ಸಂಸ್ಥೆಗಳಿವೆ. ಅದ್ದರಿಂದ ಶ್ರೀಯವರ ಮುಂದಿನ ಜನೋಪಯೋಗಿ ಯೋಜನೆಗಳೆಲ್ಲವೂ ಸುಗಮವಾಗಿ ಈಡೇರಲಿ ಎಂಬ ಆಶಯ ನಮ್ಮದು. ಶ್ರೀಯುತರು ಇನ್ನೂ ಹೆಚ್ಚಿನ ಕೊಡುಗೆ ನೀಡಲು ಶತಾಯುಷಿಗಳಾಗಿ ಬಾಳಿ ಬದುಕಲು ಕುಲಗುರು ವೆಂಕಟ್ರಮಣ ದೇವರು ತಾಯಿ ಶಾರದಾಂಬೆ ಹರಸಿ ಹಾರೈಸಲಿ ಎಂಬುದಾಗಿ ಅವರ 75 ನೇ ಜನ್ಮದಿನೋತ್ಸವಕ್ಕೆ ಶುಭ ಹಾರೈಸೋಣ.

– ಪಟ್ಟಡ ಪ್ರಭಾಕರ, ಮೈಸೂರು

ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುವವರೇ ಬಡವರು

ಶ್ರೀ ಕರುಂಜಿ ವೆಂಕಟ್ರಮಣ ಗೌಡರ ಜೀವನ ಸಾಧನೆ

ಶ್ರೀ ಕುರುಂಜಿ ವೆಂಕಟ್ರಮಣಗೌಡರು ಕುರುಂಜಿ ಮಹಾಲಿಂಗ ಮಾಸ್ತರ್ ಹಾಗೂ ಶ್ರೀಮತಿ ಲಕ್ಷ್ಮೀಮಹಾಲಿಂಗರವರ ವರ ಪ್ರಸಾದವಾಗಿ ಇಳೆಯ ಬೆಳಗಲು ದಿನಾಂಕ 26 ದಶಂಬರ 1928 ರಂದು ಸುಳ್ಯದಲ್ಲಿ ಜನ್ಮ ತಾಳಿದರು. ಬಾಲ್ಯದಿಂದಲೇ ಆದರ್ಶ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುತ್ತಾ ಬಂದು ತಂದೆ – ತಾಯಿ ಬಾಂಧವರ ಅಕ್ಕರೆಯ ಆಶ್ರಯದಲ್ಲಿ ಬೆಳೆದರು. ತಂದೆಯೊಡನೆ ಕೃಷಿ ಕೆಲಸದಲ್ಲಿ ಪಾಲ್ಗೊಳ್ಳುತ್ತಿದ್ದ ಶ್ರೀಯವರು ಮುಂದಿನ ಮಹತ್ವದ ಸಾಧನೆಗೆ ಬೇಕಾದ ಚಿಂತನೆಯ ತಳಪಾಯ ಅವರ ತೋಟಗಳಲ್ಲಿಯೇ ದೊರೆಯಿತು.

ಸುಳ್ಯದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಶ್ರೀಯವರು ಪ್ರೌಢ ಶಿಕ್ಷಣವನ್ನೂ ಪಡೆದವರಲ್ಲ. ಅಂದಿನ ಪೊದರು – ಗುಡ್ಡಗಳಿಂದಾವೃತವಾದ ಸುಳ್ಯದಲ್ಲಿ ಉನ್ನತ ವಿದ್ಯಾಭ್ಯಾಸ ಪಡೆಯುವುದು ಅಷ್ಟು ಸುಲಭವಾಗಿರಲಿಲ್ಲ. ಅಂದಿನಿಂದಲೇ ಸುಳ್ಯದ ಕುರುಂಜಿಬಾಗ್‌ನಲ್ಲಿ ಉದ್ಭವಿಸಬಹುದಾದ ಶಿಕ್ಷಣ ಸಂಸ್ಥೆಗಳ ಸಾಮ್ರಾಜ್ಯದ ಕನಸು ಕಾಣತೊಡಗಿದರು.

ಋಣಾನುಬಂಧ ರೂಪೇಣಂ ಪಶುಪತಿ ಸುತಾಲಯಂ ಎಂಬಂತೆ ಶ್ರೀಮತಿ ಜಾನಕಿ ವೆಂಕಟ್ರಮಣನವರು 1954 ರಲ್ಲಿ ಶ್ರೀಯವರ ಕೈಹಿಡಿದರು. ಅದೃಷ್ಟವೆಂಬಂತೆ ವಿ. ಚಿದಾನಂದ, ಶ್ರೀಮತಿ ವರ್ಧಿನಿ ಜಯಕುಮಾರ್, ಡಾ. ಕೆ. ವಿ. ರೇಣುಕಾ ಪ್ರಸಾದ್‌ರವರು ಮಕ್ಕಳಾಗಿ ಜನಿಸಿದರು.

ಸುಸಂಸ್ಕೃತ ಲಕ್ಷಣಗಳಿಂದ ಕೂಡಿದ ಮನೆಯಲ್ಲಿ ಅವರ ಇಡೀ ಕುಟುಂಬವೇ ಸಮಾಜಸೇವೆಗೆ ತಮ್ಮನ್ನು ತೆರೆದಿಟ್ಟು ಕೊಂಡಿತು.

ಕುಗ್ರಾಮವಾಗಿದ್ದ ಅಡ್ಕವನ್ನು ಇಂದಿನ ಕುರುಂಜಿಬಾಗ್ ಶಿಕ್ಷಣ ಸಂಸ್ಥೆಗಳ ಸಾಮ್ರಾಜ್ಯವಾಗಿ ನಿರ್ಮಿಸುವಲ್ಲಿ ಗೌಡರ ಅಹರ್ನಿಶಿ ದುಡಿಮೆ ಅನನ್ಯ. ಇದಕ್ಕೆಲ್ಲಾ ಅವರು ನಂಬಿದ ಮೂಲ ಬಂಡವಾಳ ಅವರ ಕೃಷಿ, ಅವಿರತ ಪ್ರಯತ್ನ, ಇಂದು ಅವರು 75ನೇ ವರ್ಷದ ವಜ್ರಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಸಂಭ್ರಮದಲ್ಲಿ ಅವರು ಶತಾಯುಷಿಗಳಾಗಿ ಬಾಳಿ ಬದುಕಿ ಇನ್ನಷ್ಟು ಸೇವೆಯನ್ನು– ಸಾಧನೆಯನ್ನು ಈ ನಾಡಿಗಾಗಿ ಅರ್ಪಿಸಲಿ ಎಂಬುದಾಗಿ ಕೇಳಿಕೊಂಡು ಗೌಡರಿಗೆ ಆಯುರಾರೋಗ್ಯವನ್ನು ಶ್ರೀ ಕುಲಗುರು ವೆಂಕಟರಮಣ ತಾಯಿ ಶಾರದಾಂಬೆಯರು ಅನುಗ್ರಹಿಸಲಿ ಎಂಬುದಾಗಿ ಹಾರೈಸೋಣ.

ಶ್ರೀಯುತರು ಅಲಂಕರಿಸಿದ ಸ್ಥಾನಗಳು

1952 ಸದಸ್ಯರು - ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು - ಸುಳ್ಯ ತಾಲ್ಲೂಕು ಮಂಡಲ ಕಾಂಗ್ರೆಸ್ ಸಮಿತಿ

1954 ಸದಸ್ಯರು - ಪುತ್ತೂರು ತಾಲ್ಲೂಕು ಕ್ಷೇತ್ರಾಭಿವೃದ್ಧಿ ಮಂಡಳಿ. 1958 ಸುಳ್ಯದ ನೂತನ ಬಸ್ ನಿಲ್ದಾಣ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಸುಳ್ಯಕ್ಕೆ ಬಸ್ ಸ್ಟಾಂಡ್ ಮಂಜೂರಾಗಲು ಕಾರಣಕರ್ತರು.1959 ಸುಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನಾ ಸಮಿತಿಯ ಅಧ್ಯಕ್ಷ. ಸುಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿಗೆ ಕಾರಣಕರ್ತರು.

1966 ಸುಳ್ಯಕ್ಕೆ ಟೆಲಿಫೋನ್ ಸೌಲಭ್ಯ ಒದಗಿಸುವಲ್ಲಿ ಕ್ರಮ. ಸುಳ್ಯಕ್ಕೆ ವಿದ್ಯುತ್ ತರಿಸಲು ಕ್ರಮ.1962 ಕುಟುಂಬ ಕಲ್ಯಾಣ ಅನುಷ್ಠಾನ ಸಮಿತಿಯ ನೇತೃತ್ವ ವಹಿಸಿ, ಸುಳ್ಯ ತಾಲೂಕಿನಲ್ಲಿ ಕುಟುಂಬ ಕಲ್ಯಾಣ ಯೋಜನೆ ಅನುಷ್ಠಾನದಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ - ಮೈಸೂರು ವಿಭಾಗದಲ್ಲೇ ಪ್ರಥಮ ಸ್ಥಾನ. 1965 ಸುಳ್ಯ ತಾಲ್ಲೂಕು ನಿರ್ಮಾಣ ಸಮಿತಿ ಅಧ್ಯಕ್ಷರಾಗಿ ಸುಳ್ಯವನ್ನು ತಾಲೂಕಾಗಿ ಪರಿವರ್ತಿಸುವಲ್ಲಿ ಯಶಸ್ವಿ. 17-12-1965 ರಲ್ಲಿ ಸುಳ್ಯಕ್ಕೆ ತಾಲೂಕು ಕಛೇರಿ ಮಂಜೂರಾಗುವಲ್ಲಿ ನೇತೃತ್ವ.1966 ಸುಳ್ಯ ತಾಲೂಕು ಅಭಿವೃದ್ಧಿ ಮಂಡಳಿ ಉಪಾಧ್ಯಕ್ಷ.1967 ಅಕಾಡೆಮಿ ಆಫ್ ಲಿಬರ್ ಎಜ್ಯುಕೇಷನ್ ಸ್ಥಾಪನೆ.1969 ಅಧ್ಯಕ್ಷರು ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್ ಸುಳ್ಯ, ಅಧ್ಯಕ್ಷರು ರಕ್ಷಕ ಶಿಕ್ಷಕ ಸಂಘ, ಸರಕಾರಿ ಪ. ಪೂ. ಕಾಲೇಜು, ಸುಳ್ಯ. ನೂತನ ಪ್ರಯೋಗಾಲಯ ಸ್ಥಾಪಿಸುವಲ್ಲಿ ಕ್ರಮ. ಸುಳ್ಯದಲ್ಲಿ ನ್ಯಾಯಾಲಯ ಸ್ಥಾಪನೆಗಾಗಿ ರೂಪಿಸಿಕೊಂಡ ಸಮಿತಿ ಅಧ್ಯಕ್ಷ - ಕಾರ್ಯದಲ್ಲಿ ಯಶಸ್ವಿ, ನ್ಯಾಯಾಲಯ ಕಟ್ಟಡ ಮಂಜೂರು ಗೊಳಿಸುವಲ್ಲಿ ಕ್ರಮ.

1970 ಪ್ರತಿಷ್ಠಿತ ಸುಳ್ಯ ರೋಟರಿ ಕ್ಲಬ್‌ನ ಅಧ್ಯಕ್ಷ.1972 ಉಪಾಧ್ಯಕ್ಷರು, ಅಖಿಲಭಾರತ ಅಡಿಕೆ ಬೆಳೆಗಾರರ ಸಂಘ, ಸುಳ್ಯದಲ್ಲಿ State Bank of India ಸ್ಥಾಪನೆಗೆ ಕ್ರಮ -ಯಶಸ್ಸು.1976 ಸುಳ್ಯ ನಗರ ಪಂಚಾಯತ್ ಸದಸ್ಯರಾಗಿ ಸುಳ್ಯಕ್ಕೆ ನಳ್ಳಿ ನೀರು ವ್ಯವಸ್ಥೆ ಒದಗಿಸುವಲ್ಲಿ ಕ್ರಮ.1978 ದ. ಕ. ಜಿಲ್ಲಾ 20 ಅಂಶ ಕಾರ್ಯಕ್ರಮಗಳ ಅನುಷ್ಠಾನ ಸಮಿತಿ ಸದಸ್ಯರಾಗಿ ಸರಕಾರದಿಂದ ನೇಮಕಾತಿ.1979 ಸುಳ್ಯ ಪುರಸಭೆಯ ಅಧ್ಯಕ್ಷರಾಗಿ ಆಯ್ಕೆ, ವಿಸ್ತೃತ ನಲ್ಲಿ ನೀರು ಯೋಜನೆ, ಸುಧಾರಿತ ರಸ್ತೆಗಳು ನಿರ್ಮಾಣ, ಉಚಿತ ಮನೆ ನಿವೇಶನಗಳ ಹಂಚುವಿಕೆ. ಬೀದಿ ದೀಪಗಳು, ಕಡಿಮೆ ವೆಚ್ಚದ ಮನೆಗಳ ನಿರ್ಮಾಣ- ಇವರ ಅಧಿಕಾರವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು.

1980 200 ಹಾಸಿಗೆಗಳುಳ್ಳ ಕೆ. ವಿ. ಜಿ. ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಸ್ಥಾಪನೆ. 1982 ದ. ಕ. ಜಿಲ್ಲಾ ಗೌಡ ವಿದ್ಯಾಸಂಘದ ಅಧ್ಯಕ್ಷರಾಗಿ ಆಯ್ಕೆ. ಶ್ರೀ ಶಾರದಾ ಹೆಮ್ಮಕ್ಕಳ

7 ನೇ ಪುಟಕ್ಕೆ

ಡಾ. ಕುರುಂಜಿ ವೆಂಕಟ್ರಮಣ ಗೌಡರ ಜನ್ಮ ಜಯಂತಿಯ ವಜ್ರ ಮಹೋತ್ಸವದ ಅಂಗವಾಗಿ ಜರುಗಿದ ಕಾರ್ಯಕ್ರಮಗಳ ಇಣುಕುನೋಟ :

ದಿನಾಂಕ 21-12-2003 ರಿಂದ ಸುಳ್ಯದ ಕುರುಂಜಿಬಾಗ್‌ನ ಭವ್ಯವೇದಿಕೆಯಲ್ಲಿಬೆಳಿಗ್ಗೆ 9 ಗಂಟೆಗೆ ಗಣಪತಿ ಸ್ತುತಿಯೊಡನೆ ವಿದ್ಯುಕ್ತವಾಗಿ ಆರಂಭವಾದ ಜಯಂತೋತ್ಸವ 26-12-2003 ರ ಸಮಾರೋಪ ಸಮಾರಂಭದವರೆಗೂ ವ್ಯವಸ್ಥಿತವಾಗಿ ನೆರವೇರಿದ್ದು ಬಹಳ ವಿಶೇಷವಾಗಿತ್ತು. 21 ರ ಬೆಳಿಗ್ಗೆ 10 ಗಂಟೆಗೆ "ಕುರುಂಜಿ ಶ್ರೀ" ಕ್ಯಾಸೆಟನ್ನು ಡಾ. ಕುರುಂಜಿ ವೆಂಕಟರಮಣ ಗೌಡರ ಅಮೃತ ಹಸ್ತದಿಂದಲೇ ಬಿಡುಗಡೆಗೊಳಿಸಿದರು. ಅದೇ ಸಮಯಕ್ಕೆ ನ್ಯಾಯವಾದಿ ಜಗದೀಶ್ವರ ಅವರಿಂದ ಕೆ.ವಿ.ಜಿ. ವೃತ್ತ ಉದ್ಘಾಟನೆಗೊಂಡಿತು.

ಭವ್ಯ ಭಾರತದ ಉಪಪ್ರಧಾನಿ ಶ್ರೀ ಎಲ್. ಕೆ. ಅಡ್ವಾಣಿಯವರಿಂದ ಉದ್ಘಾಟನೆಗೊಂಡ ವಜ್ರ ಮಹೋತ್ಸವವು ಸಂಸತ್ ಸದಸ್ಯರು ಹಾಗೂ ಮಾಜಿ ಮಂತ್ರಿಗಳು ಆದ ಶ್ರೀ ವಿ. ಧನಂಜಯಕುಮಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕುರುಂಜಿಯವರ ಜೀವನ ಸಾಧನೆಯನ್ನು ಹೊತ್ತ "ಅಮರಶ್ರೀ" ಶ್ರೀ ಕುರುಂಜಿ ವೆಂಕಟರಮಣ ಗೌಡರ ಅಮೃತೋತ್ಸವ ಅಭಿನಂದನ ಸಂಪುಟವನ್ನು ಉಪ ಪ್ರಧಾನಿ ಬಿಡುಗಡೆ ಗೊಳಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಅನಂತ್‌ಕುಮಾರ್ (ಸಂಸತ್ ಸದಸ್ಯರು ಹಾಗೂ ರಾಜ್ಯ ಬಿ.ಜೆ.ಪಿ. ಘಟಕದ ಅಧ್ಯಕ್ಷರು) ಕೇಂದ್ರ ಸಚಿವರಾದ ಪಾಟೇಲ್‌ಯತ್ನಾಳ್ ಹಾಗೂ ಬಿ.ಜೆ.ಪಿ. ನಾಯಕ ಯಡಿಯೂರಪ್ಪನವರು, ಶ್ರೀ ಎಸ್. ಅಂಗಾರ (ವಿಧಾನ ಸಭಾ ಸದಸ್ಯರು, ಸುಳ್ಯ) ಅವರು ಭಾಗವಹಿಸಿದ್ದರು. ಶ್ರೀ ಮೊಟ್ಟನ ರವಿಕುಮಾರ್ (ವಕೀಲರು, ಬೆಂಗಳೂರು) ರವರು ಪ್ರಸ್ತಾವಿಕ ಭಾಷಣ ಮಾಡಿದರು. ಆ ರಸ ಸಂಜೆಯಂದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನ ತಣಿಸಿದವು. ಗಿರೀಶ್ ಕಾಸರವಳ್ಳಿಯವರಿಂದ ನಿರ್ದೇಶಿಸಲ್ಪಟ್ಟ ಕುರುಂಜಿ ಶ್ರೀ ಸಿನಿಮಾ ಪ್ರದರ್ಶನ, ಭರತನಾಟ್ಯ, ಬಾಂಗ್ರನೃತ್ಯ, ಸಿದ್ಧರಾಜು ತಂಡದವರಿಂದ ಸುಗಮ ಸಂಗೀತ ಮುದ ತಂದಿತ್ತು.

ದಿನಾಂಕ 22-12-2003 ರಂದು ಕೆ.ವಿ.ಜಿ. ಸಾಮಾನ್ಯ ಶಿಕ್ಷಣ ಸಂಸ್ಥೆಗಳಿಂದ ಉತ್ಸವ ಜರುಗಿತು. ಸ್ಥಳೀಯ ನ್ಯಾಯಾಧೀಶರಾದ ಜಗದೀಶ್ವರರವರು ಸಭಾಧ್ಯಕ್ಷರಾಗಿಯೂ, ಮುಖ್ಯ ಅತಿಥಿಗಳಾಗಿ ಪ್ರೊ. ಬಿ. ಹನುಮಯ್ಯನವರು (ಕುಲಪತಿ, ಮಂಗಳೂರು. ವಿ.ವಿ.) ಪ್ರೊ. ಕೆ. ಚಿದಾನಂದಗೌಡ (ಕುಲಪತಿ, ಕುವೆಂಪು ವಿ. ವಿ.) ರವರು ಉಪಸ್ಥಿತರಿದ್ದರು. ಪ್ರೊ. ಕೆ. ವಿ. ದಾಮೋದರಗೌಡ (ಪ್ರಾಂಶುಪಾಲರು, ನೆಹರು ಮೆಮೋರಿಯಲ್ ಕಾಲೇಜು ಸುಳ್ಯ) ರವರು ಅಭಿನಂದನಾ ಭಾಷಣ ಮಾಡಿದರು.

ಅಂದಿನ ರಾತ್ರಿ ನೆಹರು ಮೆಮೋರಿಯಲ್ ಕಾಲೇಜು, ಕೆ.ವಿ.ಜಿ. ಕಾನೂನು ಕಾಲೇಜು, ಕೆ.ವಿ.ಜಿ. ಕಾಲೇಜು ಭಾಗಮಂಡಲ, ಕೆ. ವಿ.ಜಿ. ಆಂಗ್ಲ ಮಾಧ್ಯಮ ಶಾಲೆ, ಸುಳ್ಯ, ಹಳೆಯ ವಿದ್ಯಾರ್ಥಿ ಸಂಘ ಎನ್. ಎಂ. ಸಿ. ಸುಳ್ಯ ಹಾಗೂ ಸುಳ್ಯದ ಶ್ರೀ ಶಾರದಾ ಮಹಿಳಾ ಕಾಲೇಜುಗಳ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ದಿನಾಂಕ 23ನೇ ದಿನ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ದಿನವನ್ನಾಗಿ ಆಚರಿಸಲಾಯಿತು. ರಾಜ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳಾದ ಡಾ. ಮಲಕರೆಡ್ಡಿಯವರು ಸಭಾಧ್ಯಕ್ಷರಾಗಿ ಆಸೀನರಾಗಿದ್ದರು. ಸುಬ್ರಹ್ಮಣ್ಯ ಮಠದ ವಿಶ್ರಾಂತ ಮಠಾಧಿಪತಿಯಾದ ಶ್ರೀ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿಯವರು ಆಶೀರ್ವಚನ ನೀಡಿದರು. ಶ್ರೀ ಕುರುಂಜಿ ವೆಂಕಟ್ರಮಣಗೌಡರ ಅಮೃತೋತ್ಸವ ಕಾರ್ಯಕ್ರಮದ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಆರ್. ಗಂಗಾಧರ್‌ರವರು ಅಭಿನಂದನಾ ಭಾಷಣ ಮಾಡಿದರು.

ಅಂದಿನ ಶುಭರಾತ್ರಿಯಲ್ಲಿ ರಾಜ್ಯ ಪ್ರಶಸ್ತಿ ವಿಜೇತ ಮತ್ತು ನಟರಾದ ಶ್ರೀ ಶ್ರೀಧರ ಹಾಗೂ ಶ್ರೀಮತಿ ಅನುರಾಧ ಶ್ರೀಧರ್ ದಂಪತಿಗಳಿಂದ ನೃತ್ಯ ವೈಶಿಷ್ಟ್ಯ.

ಕೆ.ವಿ.ಜಿ. ವೈದ್ಯಕೀಯ ಕಾಲೇಜು, ಕೆ. ವಿ. ಜಿ. ದಂತಕಾಲೇಜು, ಕೆ. ವಿ.ಜಿ. ಆಯುರ್ವೇದ ವೈದ್ಯಕೀಯ ಕಾಲೇಜು, ಕೆ. ವಿ. ಜಿ. ನರ್ಸಿಂಗ್ ಸಂಸ್ಥೆ, ಸುಳ್ಯ, ಬೆಂಗಳೂರಿನ ಎನ್. ಎಸ್. ವಿ. ಕೆ. ದಂತ ಕಾಲೇಜುಗಳ ಸೇವಾ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

24ನೇ ದಿನಾಂಕವನ್ನು ತಾಂತ್ರಿಕ ಶಿಕ್ಷಣ ಸಂಸ್ಥೆಗಳ ದಿನವನ್ನಾಗಿ ಆಚರಿಸಲಾಯಿತು. ಸಭಾಧ್ಯಕ್ಷರಾಗಿಯೂ ಮುಖ್ಯ ಅತಿಥಿಗಳಾಗಿ ಶ್ರೀ ಎನ್. ಆರ್. ಶೆಟ್ಟಿ, (ನಿವೃತ್ತ ಕುಲಪತಿ ಛೇರ್‌ಮನ್ ಎನ್. ಡಬ್ಲ್ಯು ಆರ್. ಒ. ಎ.ಐ.ಸಿ.ಟಿ.ಇ.ಹೊಸದೆಹಲಿ) ಪ್ರೊ. ಕೆ. ಬಾಲವೀರ ಶೆಟ್ಟಿ, ಕುಲಪತಿಗಳು ವಿಟಿ ವಿ. ವಿ. ಬೆಳಗಾಂ ನಿಟ್ಟೆ ವಿದ್ಯಾಸಂಸ್ಥೆಗಳ ಅಧ್ಯಕ್ಷರಾದ ಶ್ರೀ ವಿನಯ್ ಹೆಗ್ಡೆ, ಶ್ರೀ ಅನಂತಕೃಷ್ಣ (ಛೇರ್‌ಮನ್ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಮಂಗಳೂರು) ರವರು ಉಪಸ್ಥಿತರಿದ್ದರು. ಪ್ರೊ. ಎಸ್. ಜಿ. ಗೋಪಾಲಕೃಷ್ಣ ಪ್ರಾಂಶುಪಾಲರು, ಕೆ. ವಿ. ಜಿ. ಇಂಜಿನಿಯರಿಂಗ್ ಕಾಲೇಜು, ಸುಳ್ಯ) ಅವರು ಅಭಿನಂದನೆಗಳನ್ನು ಸಲ್ಲಿಸಿದರು.

ಆ ರಸರಾತ್ರಿಗೆ ಕೆ. ವಿ. ಜಿ. ಎಂಜಿಯನಿಯರಿಂಗ್ ಕಾಲೇಜು, ಕೆ. ವಿ. ಜಿ. ಪಾಲಿಟೆಕ್ನಿಕ್, ಕೆ. ವಿ.ಜಿ. ಐ.ಟಿ.ಐ., ಸುಳ್ಯ ಮತ್ತು ಭಾಗಮಂಡಲ, ಬೆಂಗಳೂರಿನ ಎನ್. ಎಸ್. ವಿ. ಕೆ. ಪಾಲಿಟೆಕ್ನಿಕ್ ಕಾಲೇಜುಗಳ ಸೇವಾ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಮತ್ತಷ್ಟು ಮೆರುಗು ನೀಡಿದರು.

ಶ್ರೀಮತಿ ಮೋಬಿನಾ ಮತ್ತು ತಂಡದವರಿಂದ ಮ್ಯಾಜಿಕ್ ಹಾಗೂ ಪಂಚ ಕಲ್ಯಾಣ ಎಂಬ ಕನ್ನಡ ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಆಚರಿಸಲಾಯಿತು. ಸಭಾಧ್ಯಕ್ಷತೆಯನ್ನು ಶ್ರೀ ಡಿ. ವಿ. ಸದಾನಂದಗೌಡ (ವಿಧಾನ ಸಭಾ ಸದಸ್ಯರು, ಪುತ್ತೂರು) ವಹಿಸಿದ್ದರು. ಶ್ರೀ ಎಂ. ವಿ. ವೆಂಕಟಪ್ಪ (ವಿಧಾನ ಸಭಾಪತಿ) ಮತ್ತು ಶ್ರೀಮತಿ ಸುಭದ್ರಾ ವೆಂಕಟಪ್ಪ ದಂಪತಿಗಳನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾಗಿ, ಶ್ರೀ ಪ್ರಫುಲ್ಲಚಂದ್ರ ಆರ್. ದೇವಂಗಿ (ಮಾದರಿ ಕೃಷಿಕರು ಹಾಗೂ ಮ್ಯಾಗ್ಸೆಸ್ಸೆ ಪ್ರಶಸ್ತಿ ವಿಜೇತರು) ಹಾಜರಿದ್ದರು.

ಡಾ. ಕೆ. ಚಿನ್ನಪ್ಪಗೌಡ (ಕನ್ನಡ ಪ್ರಾಧ್ಯಾಪಕರು, ಮಂಗಳೂರು ವಿ. ವಿ.) ಅವರು ಅಭಿನಂದನಾ ಭಾಷಣ ಮಾಡಿದರು.

ಮಧ್ಯಾಹ್ನದ ಊಟದ ನಂತರ ಸಮನ್ವಯ ಸಾಮರಸ್ಯ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು. ಸಭಾಧ್ಯಕ್ಷತೆಯನ್ನು ಮಾಜಿ ವಿಧಾನಸಭಾ ಸದಸ್ಯರು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಬಿ. ಎಂ. ಇದಿನಬ್ಬಿನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ, ಶ್ರೀ ಸಂಜೀವಶೆಟ್ಟಿ ಅಲಿಕೆ, ಕರ್ನಾಟಕ ರಾಜ್ಯದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ವಿಜೇತರು, ರೆವರೆಂಡ್ ಫಾದರ್ ಜಾನ್ ಫರ್ನಾಂಡೀಸ್ (ಛೇರ್‌ಮನ್, ಕ್ರೈಸ್ತ ಅಧ್ಯಯನ ಕೇಂದ್ರ ಮಂಗಳೂರು ವಿ. ವಿ. ಉಪಸ್ಥಿತರಿದ್ದರು. ರಾತ್ರಿ ಏಳು ಗಂಟೆಗೆ ರಾಜ್ಯದ ನಗರಾಭಿವೃದ್ಧಿ ಸಚಿವರು ಆದ ಶ್ರೀ ಡಿ. ಕೆ. ಶಿವಕುಮಾರ್‌ರವರು ತಮ್ಮ ಅಭಿಮಾನಿ ಬಳಗದೊಂದಿಗೆ ಆಗಮಿಸಿ ಶ್ರೀ ಕುರುಂಜಿಯವರ ಶ್ರೇಷ್ಠ ಕಾರ್ಯದ ಬಗ್ಗೆ ಶ್ಲಾಘನೀಯ ಮಾತನಾಡಿದರು. ಈ ನಡುವೆ ಕೊಡಗು ವಾದ್ಯದೊಂದಿಗೆ ಶ್ರೀ ಕುರುಂಜಿಯವರು ಸಹಿತ ಕುಣಿದ ದೃಶ್ಯ ಅಭೂತಪೂರ್ವವಾಗಿತ್ತು.

ಬೆಳ್ಳಾರೆಯ ಜ್ಞಾನಗಂಗಾ ಸಾರ್ವಜನಿಕ ಶಾಲಾ ಮಕ್ಕಳು, ಗೌಡ ಸಮಾಜ ಕೊಡಗು ಜಿಲ್ಲೆ, ಸುಳ್ಯದ ಗೌಡ ಯುವ ಸೇವಾ ಸಂಘಗಳಿಂದ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಆ ರಾತ್ರಿ ಶೋಭಿಸಿತು. ಬೆಂಗಳೂರಿನ ಸಪ್ತಸ್ವರ ಕಂಪನಿಯಿಂದ ಸಂಗೀತ ರಾತ್ರಿ ಕಾರ್ಯಕ್ರಮ ನೆರೆದವರ ತಲೆದೂಗಿಸಿತು.

ದಿನಾಂಕ 26-12-2003 ರಂದು ಪೂಜಾವಿಧಿ, ವ್ರತಾಚರಣೆ ನಡೆಯಿತು. ಮುಂಜಾನೆ 4 ಘಂಟೆಗೆ ಗಣಹೋಮ, 7 ಕ್ಕೆ ಭೀಮರಥ ಶಾಂತಿ, ಮೃತ್ಯುಂಜಯ ಹೋಮ ಬೆಳಿಗ್ಗೆ 10 ಘಂಟೆಗೆ ಮತ್ತು ನವಗ್ರಹ ಶಾಂತಿ ಹೋಮ ಶ್ರೀ ಆದಿಚುಂಚನಗಿರಿ ಮಠದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಯವರಿಂದ ಆಶೀರ್ವಚನ ಸುಸೂತ್ರವಾಗಿ ನೆರವೇರಿತು.

ಮಧ್ಯಾಹ್ನ ಮೂರು ಗಂಟೆಗೆ ಬಹಿರಂಗವಾಗಿ ಸುಳ್ಯದ ಪ್ರಮುಖ ರಸ್ತೆಗಳಲ್ಲಿ ಕುರುಂಜಿ ದಂಪತಿಗಳನ್ನೊಳಗೊಂಡ 60 ಕ್ಕಿಂತ ವಿವಿಧ ರೀತಿಯ ಸ್ತಬ್ಧ ಚಿತ್ರಗಳ ಮೆರವಣಿಗೆ ನಿಜಕ್ಕೂ ಮೆಚ್ಚುಗೆಯಾದವು.

ಸಂಜೆ 6 ಘಂಟೆಗೆ ಸಾರ್ವತ್ರಿಕ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷರಾಗಿ ಪ್ರೊ. ಬಿ. ರಾಮನಾಥ್‌ರಾಯ್ (ರಾಜ್ಯ ಸಾರಿಗೆ ಸಚಿವರು) ಹಾಜರಿದ್ದರು. ಶ್ರೀ ಕ್ಷೇತ್ರದ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಸನ್ಮಾನ ನೆರವೇರಿತು.

ಉಡುಪಿಯ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದ ಸ್ವಾಮಿಜಿಯವರಿಂದ ಆಶೀರ್ವಚನವಿತ್ತು.

ಶ್ರೀ ಚೆರ್ಕಲಂ ಅಬ್ದುಲ್ಲಾ (ಮಂತ್ರಿಗಳು ಸ್ಥಳೀಯ ಸ್ವಯಂಮಾಡಳಿತ ಕೇರಳ ಸರ್ಕಾರ) ಮತ್ತು ಮುಖ್ಯ ಅತಿಥಿಗಳಾಗಿ ಶ್ರೀ ವಿ. ಧನಂಜಯ ಕುಮಾರ್ (ಸಂಸತ್ ಸದಸ್ಯರು ಮಂಗಳೂರು) ಶ್ರೀ ವಿನಯಕುಮಾರ್ ಸೊರಕೆ (ಸಂಸತ್ ಸದಸ್ಯರು, ಉಡುಪಿ) ಉಪಸ್ಥಿತರಿದ್ದರು.

ಅಭಿನಂದನಾ ಭಾಷಣ -ಶ್ರೀ ಮಾತೂರ್ ಕೃಷ್ಣಮೂರ್ತಿ, ಕಾರ್ಯ ನಿರ್ವಾಹಕ ನಿರ್ದೇಶಕರು, ಭಾರತೀಯ ವಿದ್ಯಾಭವನ್ ಅವರಿಂದ, ಆ ಅಪೂರ್ವ ರಸರಾತ್ರಿಯಲ್ಲಿ ಬೆಂಗಳೂರಿನ ಶ್ರೀಮತಿ ಮಂಜುಳಾ ಗುರುರಾಜ್ ಮತ್ತು ತಂಡದವರಿಂದ ಆರ್ಕೆಸ್ಟ್ರಾ, ಸಕೇತ ಕಲಾವಿದರಿಂದ ಯಕ್ಷಗಾನ ಕಾರ್ಯಕ್ರಮಗಳು ಹಾಗೂ ಮಂಗಳೂರಿನ ಕುಮಾರಿ ಲಾವಣ್ಯ ಮತ್ತು ತಂಡದವರಿಂದ ಸ್ಯಾಕ್ಸೋಫೋನ್ ವಾದನ, ಪೂಜಾ ಕೈಂಕರ್ಯ ಮುಗಿಯು ವವರೆವಿಗೂ ನೆರೆದ ಜನಸ್ತೋಮಕ್ಕೆ ಉಲ್ಲಾಸ ನೀಡಿತು. ಈ ಎಲ್ಲಾ ಆರು ದಿನಗಳಲ್ಲಿಯೂ ಕನಿಷ್ಠ 10 ಸಾವಿರಕ್ಕಿಂತಲೂ ಹೆಚ್ಚಿನ ಅಭಿಮಾನಿಗಳೂ ಭಾಗವಹಿಸಿದ್ದರು. ಕೊನೆಯ ದಿನವಂತೂ 25-30 ಸಾವಿರ ಜನಸ್ತೋಮ ಭಾಗವಹಿಸಿ ಶ್ರೀ ಕುರುಂಜಿಯವರ ವಜ್ರ ಮಹೋತ್ಸವಕ್ಕೆ ಭಾಗವಹಿಸಿ ತಮ್ಮ ಋಣಾನುಭಾವವನ್ನು ತೀರಿಸಿಕೊಂಡಿತ್ತೆಂದು ಹೇಳಲು ಹೆಮ್ಮೆ ಎನಿಸುತ್ತದೆ.

-ಸಂಗಾತಿ

5 ನೇ ಪುಟದಿಂದ

ಪ್ರೌಢಶಾಲೆ ಸ್ಥಾಪನೆ. 1983 ಸುಳ್ಯದ ಶ್ರೀ ರಾಜ ರಾಜೇಶ್ವರಿ ಹೆಮ್ಮಕ್ಕಳ ಯಕ್ಷಗಾನ ಕಲಾ ಸಂಘದ ಅಧ್ಯಕ್ಷರಾಗಿ ಆಯ್ಕೆ ಕರ್ನಾಟಕ ರಾಜ್ಯದಾದ್ಯಂತ ಕಾರ್ಯಕ್ರಮ ಪರಿವರ್ತನೆ. 1986 ಸುಳ್ಯದಲ್ಲಿ ನಡೆದ ಪ್ರಪಥಮ ಗೌಡ ಸಮ್ಮೇಳನದ ಅಧ್ಯಕ್ಷತೆ. 1987 ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು ಇದರ ನಿರ್ದೇಶಕರಾಗಿ ಆಯ್ಕೆ. 1988 157 ಶಿಕ್ಷಣ ಸಂಸ್ಥೆಗಳಿಗೆ ಆಂಗ್ಲ ಭಾಷಾ ಗ್ರಂಥಾಲಯ ಸ್ಥಾಪಿಸುವವರೇ ಉಕ್ಕಿನ ಕಪಾಟು ಮತ್ತು ಪುಸ್ತಕಗಳ ಕೊಡುಗೆ. 1989 ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಕರುಂಜಿಬಾಗ್‌ನಲ್ಲಿ ಸಂಘಟನೆ.

1990 ರಾಜ್ಯದಾದ್ಯಂತ 18 ಸಮಾಜ ಕಲ್ಯಾಣ ಮಂಟಪಗಳ ನಿರ್ಮಾಣಕ್ಕಾಗಿ ಉದಾರ ಕೊಡುಗೆ. 1992 ಸುಳ್ಯದ ಪುರಭವನದ ನಿರ್ಮಾಣದ ನೇತೃತ್ವ ರೂ. 14 ಲಕ್ಷ ವೈಯಕ್ತಿಕ ದೇಣಿಗೆ. 1993 ತಾಲೂಕಿನ ಪ್ರಾಥಮಿಕ ಶಾಲೆಗಳಿಗೆ 42 ಜ್ಞಾನದೇಗುಲ ಕೊಠಡಿಗಳ, 26 ರಂಗಮಂದಿರಗಳ ಕೊಡುಗೆ (ಪ್ರತೀ ಕೊಠಡಿಗೆ ರೂ 10,000 ದೇಣಿಗೆ) 27 ಅಕ್ಷರ ಕರಾವಳಿ ಕೇಂದ್ರಗಳ ನಿರ್ಮಾಣಕ್ಕೆ ತಲಾ ರೂ. 5,000 ನಗದು ಮತ್ತು ರೂ. 4,000 ದ ಉಕ್ಕಿನ ಕಪಾಟುಗಳ ಕೊಡುಗೆ. 1994 ದ. ಕ. ಜಿಲ್ಲಾ 7 ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದರ ಸಂಘಟನಾ ಸಮಿತಿಯ ಅಧ್ಯಕ್ಷರಾಗಿ ಕುರುಂಜಿಬಾಗ್‌ನಲ್ಲಿ ಅದ್ದೂರಿಯಾಗಿ ನಡೆಸಿಕೊಟ್ಟದುದು. 1996 ಅಖಿಲ ಭಾರತ ಗೌಡ ಸಮ್ಮೇಳನದ ಅಧ್ಯಕ್ಷತೆ. 1998 ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಅಕಾಡೆಮಿಕ್ ಕೌನ್ಸಿಲ್, ಸಿಂಡಿಕೇಟ್ ಸದಸ್ಯರಾಗಿ ಆಯ್ಕೆ (1998-2001). 2001 ಕರಾವಳಿ ಟಾಸ್ಕ್ ಪೋರ್ಸ್‌ನ ಸದಸ್ಯರಾಗಿ ರಾಜ್ಯ ಸರಕಾರದಿಂದ ನೇಮಕ.

ಬಾಂಧವ್ಯ ದಿನಾಚರಣೆ

ಡಾ.ಕುರುಂಜಿ ವೆಂಕಟ್ರಮಣಗೌಡರ ವಜ್ರಮಹೋತ್ಸವವು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹಬ್ಬದ ವಾತಾವರಣವನನು ಉಂಟುಮಾಡಿತ್ತು. ಕಣ್ಣು ಹಾಯಿಸಿದಲ್ಲೆಲ್ಲಾ ಕುರುಂಜಿಯವರ ಚಿತ್ರಪಟಗಳು, ಹುಟ್ಟುಹಬ್ಬದ ಆಹ್ವಾನ ಬಿತ್ತಿಗಳು, ಜನರಲ್ಲಿ ಸಡಗರ ಸಂಭ್ರಮಗಳು. ದಶಂಬರದ ಮೊದಲ ದಿನದಿಂದಲೇ ತವಕದ ದಿನಗಣನೆ ಆರಂಭವಾಗಿತ್ತು. ವ್ಯವಸ್ಥಾಪಕ ಸಮಿತಿಯವರು ಸಂಘಟನಾ ಸಂಚಾಲಕರು ಭರದಿಂದ ಕಾರ್ಯವೆಸಗುತ್ತಾ ರಾಷ್ಟ್ರದ ಪ್ರಥಮ ಪ್ರಜೆಯಿಂದ ಅತ್ಯಂತ ಕನಿಷ್ಟ ವ್ಯಕ್ತಿಯವರೆಗೂ ವಿಷಯ ಮುಟ್ಟಿಸಿ ಆಹ್ವಾನೀಯುವಲ್ಲಿ ಯಶಸ್ವಿಯಾದರು.

ದಿನಾಂಕ 21-12-2003 ರಿಂದ 26-12-2003ರವರೆಗೆ ಸುಸೂತ್ರವಾಗಿ ಪೂರ್ವಯೋಜನೆಯಂತೆಯೇ ನಡೆದ ಜಯಂತೋತ್ಸವದಲ್ಲಿ ಗೌಡ ಕುಲಬಾಂಧವರಿಗೆ ಅವರ ಅಭಿನಂದನಾ ಮಹಾಪೂರವನ್ನು ಜನಾಂಗದ ಮೇರು ವ್ಯಕ್ತಿ ಶ್ರೀ ಕುರುಂಜಿ ವೆಂಕಟ್ರಮಣಗೌಡರಿಗೆ ಸಮರ್ಪಿಸಲು 25 ನೇ ದಿನಾಂಕವನ್ನು ಮೀಸಲಿಟ್ಟಿದ್ದರು.

ಆ ದಿನದಂದು ಗೌಡರ ಮನೆಗಳಲ್ಲಿ ಸಡಗರವೋ ಸಡಗರ. ಅಂದಿನ ಬಹು ಅನಿವಾರ್ಯ ಕಾರ್ಯಗಳನ್ನು ಬದಿಗೊತ್ತಿ ತಮ್ಮ ಮನೆಯ ಸದಸ್ಯರೊಬ್ಬರ ಹುಟ್ಟುಹಬ್ಬವನ್ನು ಆಚರಿಸುವಷ್ಟೇ ಉತ್ಸಾಹಗೊಂಡು ಹಾರ ತುರಾಯಿ ವಾಹನಾದಿಗಳನ್ನು ಸಿದ್ಧಗೊಳಿಸಿಕೊಂಡರು. ಮಡಿಕೇರಿ ತಿಮ್ಮಯ್ಯ ವೃತ್ತದಲ್ಲಿ ಸೂರ್ಯೋದಯಕ್ಕೆ ಮುನ್ನವೇ ವಾಹನಗಳು ಸಾಲುಗಟ್ಟಿ ನಿಂತಿದವು. ವಿವಿಧ ಗೌಡ ಸಂಘಟನೆಗಳು ಕುರುಂಜಿ ಅಭಿಮಾನಿ ಬಳಗಕ್ಕೆ ವಾಹನಗಳನ್ನು ವ್ಯವಸ್ಥೆಗೊಳಿಸಿದ್ದವು. ಕೊಡಗು ಸಂಗಾತಿ ಪರಿಚಯಿಸಿದ ಗೌಡ ಚಿಹ್ನೆಯು ವಾಹನಗಳನ್ನು ಅಲಂಕೃತಗೊಳಿಸಿತು. ಕೊಡಗು ಜಿಲ್ಲೆಯ ಸಂಘಟನಾ ಸಂಚಾಲಕರಾಗಿದ್ದ ಕೋಳುಮುಡಿಯನ ಅನಂತಕುಮಾರ್‌ರವರು ನೀವು ಹೊರಡಿ ತಾವು ಹೊರಡಿ ಎಂಬುದಾಗಿ ಉದ್ಗರಿಸುತ್ತಾ ವಾಹನಗಳನ್ನು ಸಾಲು ಸಾಲಾಗಿ ಕಳುಹಿಸಿಕೊಟ್ಟರು. ಎಲ್ಲರೆದೆಯಲ್ಲೂ ಕುರುಂಜಿಯವರ ಭಾವಚಿತ್ರ ತೂಗುತ್ತಿತ್ತು. ಹೃದಯದಲ್ಲಿ ನೆಲೆ ನಿಂತಂತಿತ್ತು.

ವಾಹನಗಳು ನಾವು ಮುಂದು ತಾವು ಮುಂದು ಎಂದು ಓಡುತ್ತಾ, ಒಂದನ್ನೊಂದು ಹಿಂದಿಕ್ಕುತ್ತಾ ಏರು ತಗ್ಗಿನ ರಸ್ತೆಯಲ್ಲಿ ಹಾಯ್ದೋಣಿಯಂತೆ ಸಾಗಿ ತೂಗಿ ನಲಿಸುತ್ತಾ ಹೊರಟವು. ಅದುವರೆವಿಗೂ ಕುರುಂಜಿಯವರ ಬಗೆಗಿನ ಅಭಿಮಾನ (ಮುಡುಗಟ್ಟಿ ನಿಂತಿದ್ದ) ಹೊರಚಿಮ್ಮಿ ಆವೇಶಭರಿತ ಉದ್ಗಾರಗಳೊಂದಿಗೆ ಮುಗಿಲುಮುಟ್ಟಿ ಗುಡ್ಡಗಳಲ್ಲಿ ಪ್ರತಿಧ್ವನಿಸಿತು. ಭಾವಾವೇಶಕ್ಕೊಳಗಾದ ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆಯ ಗೌರವ ಸಂಪಾದಕರಾದ ಪಟ್ಟಡ ಪ್ರಭಾಕರರವರಿಂದ ಆರಂಭಗೊಂಡ ಉದ್ಗಾರ ಎಲ್ಲಾ ಪ್ರಯಾಣಿಕರಿಂದ ಜೈಕಾರವನ್ನು ಹೊರಸೆಳೆಯಿತು. ಸುಳ್ಯ ಇನ್ನೂ ನಾಲ್ಕು ಕಿ. ಮೀ. ಇರುವಾಗಲೇ ಗೌಡರ ವೀರ ಸಾಂಪ್ರದಾಯಿತ ಸಮವಸ್ತ್ರವಾದ ರುಮಾಲು,ಕುಪ್ಪಸದಟ್ಟಿ, ನಡುಪಟ್ಟಿಕಟ್ಟಿದ ತಂಡವೊಂದು ಸಜ್ಜುಗೊಂಡಿತು. ಸುಳ್ಯದಲ್ಲಿ ವಾದ್ಯ ಜೈಕಾರದೊಂದಿಗೆ ಎರಡು ಸಾಲುಗಳಲ್ಲಿ ಹೊರಟ ಮೆರವಣಿಗೆ ಪಟ್ಟಣದ ಜನಸ್ತೋಮಕ್ಕೆ ಅಭೂತಪೂರ್ವ ಅನುಭವ ಉಂಟುಮಾಡಿತು. ನಿಂತನಿಂತಲ್ಲಿಂದಲೇ ಜನರು ಬೆಕ್ಕಸಬೆರಗಾಗಿ ದಿಬ್ಬಣವನ್ನು ವೀಕ್ಷಿಸಿದರು.

ಡಾ. ಕುರುಂಜಿ ವೆಂಕಟ್ರಮಣಗೌಡರಿಗೆ ಜೈ, ಜನಾಂಗದ ಮೇರು ವ್ಯಕ್ತಿಗೆ ಜೈ, ಅರೆಭಾಷಿಕರ ಕಣ್ಮಣಿಗೆ ಜೈ, ಸುಳ್ಯದ ಅಮರಶಿಲ್ಪಿಗೆ ಜೈ, ಗೌಡರ ಗೌಡರಿಗೇ ಜೈ, ಗೌಡ ಹರಿಕಾರನಿಗೆ ಜೈ, ಜನಾಂಗದ ನೇತಾರನಿಗೆ ಜೈ, ವಿದ್ಯಾದಾನಿಗೆ ಜೈ, ಕೊಡುಗೈದಾನಿಗೆ ಜೈ, ಗೌಡ ಇತಿಹಾಸಕಾರನಿಗೆ ಜೈ,ಸಾಧನೆಯ ಸಾಧಕನಿಗೆ ಜೈ, ಜನಾಂಗ ಬಾಂಧವರಿಗೆ ಜೈ, ಚಿರಂಜೀವಿ ಗೌಡರಿಗೆ ಜೈ, ಅವತಾರಪುರುಷನಿಗೆ ಜೈ, ಪುರುಷೋತ್ತಮನಿಗೆ ಜೈ, ಇತ್ಯಾದಿ ಉಗಾಭೋಗಾದಿಗಳಿಂದ ಕಟ್ಟುನಿಟ್ಟಾಗಿ ಪಟ್ಟಡ ಪ್ರಭಾಕರರವರು ಮೆರವಣಿಗೆಯ ಹಿಂದೆ ಮುಂದೆ ಓಡಾಡುತ್ತಾ ಉದ್ಗರಿಸುತ್ತಿದ್ದರೆ ಇಡೀ ಮೆರವಣಿಗೆಯೇ ಬಾಯ್ದೆರೆದು ಜೈಕಾರ ಹಾಕುವ ಪರಿ ಕುರುಂಜಿಯವರನ್ನು ಭಾವಪರವಶರನ್ನಾಗಿಸಿತು. ಜೈಕಾರ ಕೇಳುತ್ತಿದ್ದಂತೆಯೇ ಶ್ರೀ ಕುರುಂಜಿಯವರು ಸಭಾ ಮಂಟಪದಲ್ಲಿ ಎದ್ದು ನಿಂತು ಎರಡೂ ಕೈಗಳನ್ನು ಮುಗಿದು ಕುಲಬಂಧುಗಳನ್ನು ಸ್ವಾಗತಿಸಿದರು. ಸಾಧನೆಯ ಸಾರ್ವಭೌಮನಾಗಿಯೂ ಇಂತಹ ದೈನ್ಯಭಾವ ಸಾಲಾಗಿ ಬಂದ ಮೆರವಣಿಗೆಗೆ ಅವಕಾಶವಲ್ಲವೆ? ಸರೋವರವನ್ನು ಸೇರುವ ನದಿಯಂತೆ ಆಸನಗಳನ್ನು ಅಲಂಕರಿಸಿ ಆ ಭವ್ಯ ಸಭೆಯಲ್ಲಿ ಲೀನವಾಯಿತು. ನೂರಾರು ಶಿಸ್ತಿನ ಸ್ವಯಂ ಸೇವಕರು ಸ್ವಾಗತ ಕೋರಿ ಆಸನಗಳನ್ನು ತೋರುತ್ತಿದ್ದರು.

ಆ ವೇಳೆಗಾಗಲೇ, ಸಭಾ ಮಂಟಪದ ನಡುವೆ ಶ್ರೀ ಕುರುಂಜಿ ದಂಪತಿಗಳು, ಪುತ್ತೂರು ಕ್ಷೇತ್ರದ ವಿಧಾನ ಸಭಾ ಸದಸ್ಯರಾದ ಶ್ರೀ ಡಿ. ವಿ. ಸದಾನಂದರವರು ಅಧ್ಯಕ್ಷ ಅತಿಥಿಗಳಾಗಿ, ಕೇರಳದ ರಾಜಗೋಪಾಲ್ (ರಕ್ಷಣಾ ಸಾಮಗ್ರಿ ಪೂರೈಕೆ ಸಚಿವ) ವಿಧಾನ ಸಭೆಯ ಸಭಾಪತಿಗಳಾದ ಶ್ರೀ ಎಂ. ವಿ. ವೆಂಕಟಪ್ಪ ಹಾಗೂ ಸುಭದ್ರಾ ವೆಂಕಟಪ್ಪನವರು, ಶ್ರೀ ಪ್ರಫುಲ್ಲ ಚಂದ್ರ ರೇ ದೇವಂಗಿಯವರು. ಮ್ಯಾಗ್ಸೆಸ್ಸೆ ಪ್ರಶಸ್ತಿ ವಿಜೇತರು, ಮಂಗಳೂರು ವಿ. ವಿ. ಯ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ.

ಚಿನ್ನಪ್ಪಗೌಡರವರು, ಶ್ರೀ ಕುರುಂಜಿಯವರು ಮಕ್ಕಳು ಹಾಗೂ ಸೊಸೆಯಂದಿರು ಇನ್ನಿತರ ಗಣ್ಯ ಮುಖಂಡರು ಸಭೆಯನ್ನು ಅಲಂಕರಿಸಿದ್ದರು.

ಸಭೆ 10-30 ಕ್ಕೆ ವಿದ್ಯುಕ್ತವಾಗಿ ಆರಂಭವಾಯಿತು. ಕೇರಳದ ಮಂತ್ರಿ ಶ್ರೀ ರಾಜಗೋಪಾಲ್‌ರವರು (Honorable Minister for Defence Production & Supplies) New teaching blockನ್ನು ಉದ್ಘಾಟಿಸಿ ಉದ್ಘಾಟನಾ ಭಾಷಣ ಮಾಡಿದರು. ಆ ವೇಳೆಗೆ ಕಿಕ್ಕಿರಿದು ತುಂಬಿದ್ದ ಕುರುಂಜಿಯವರ ಅಭಿಮಾನಿ ಬಳಗವು ಆಸನಗಳು ಸಾಲದಾಗಿ ನಿಂತು ವೀಕ್ಷಿಸುವಷ್ಟು ಹಂತಕ್ಕೆತಲುಪಿತು. ಜಯಂತ್ಯೋತ್ಸವದಲ್ಲಿ ನೆರೆದಿದ್ದ ಈ ಅಪಾರ ಜನಸ್ತೋಮ ಸಭಾ ಸರೋವರದಿಂದ ಕೋಡಿಬಿದ್ದು ಹರಿದಂತೆ ಭಾಸವಾಗುತ್ತಿತ್ತು.

ಉದ್ಘಾಟನಾ ಭಾಷಣ ಮಾಡಿದ ಶ್ರೀ ಓ. ರಾಜಗೋಪಾಲ್ ರಿಗೆ ಶ್ರೀ ಕುರುಂಜಿಯವರೇ ವಂದನೆಗಳನ್ನು ಅರ್ಪಿಸಿ ನೆನಪಿನ ಕಾಣಿಕೆ ಸಲ್ಲಿಸಿದರು.

ಆ ನಂತರ ಬಾಂಧವ್ಯ ದಿನಾಚರಣೆ ಯೋಜಿಸಿದ್ದಂತೆ ಆರಂಭವಾಯಿತು. ಎಂ. ವಿ. ವೆಂಕಟಪ್ಪನವರು ಹೆಚ್ಚಿವು ಬಾಂಧವ್ಯ ದೀಪ ಹಾಡಿನೊಂದಿಗೆ ಜ್ಯೋತಿ ಬೆಳಗುವುದರೊಂದಿಗೆ ಬಾಂಧವ್ಯ ದಿನಾಚರಣೆಗೆ ಚಾಲನೆ ನೀಡಿದರು. ಕೆಂ. ಎಂ. ಪುಂಡರೀಕರವರು ನಿನ್ನೊಲುಮೆಯಿಂದಲೆ ಬಾಳು, ಬೆಳಕಾಗಿರಲು ಚಂದ್ರಮುಖಿ, ನೀನೆನಲು ತಪ್ಪೇನೆ ಎಂಬುದಾಗಿ ತನುದುಂಬಿ ಪ್ರಾರ್ಥಿಸಿದರು.

ಈ ನಡುವೆ ಸುಳ್ಯದ ಚರ್ಚ್‌ನ ಫಾದರ್‌ರವರಿಂದ ಕ್ರಿಸ್ಮಸ್ ಜಯಂತಿಯ ಶುಭ ಕಾಮನೆಗಳೊಂದಿಗೆ ಕೇಕ್ ಅರ್ಪಿಸಲಾಯಿತು. ಮೊಂಟಡ್ಕ ಉಮೇಶ್‌ರವರು ಅತಿಥಿಗಳನ್ನು ಸ್ವಾಗತಿಸಿದರು. ಡಾ. ಕೆ. ಚಿನ್ನಪ್ಪಗೌಡರು ಅಭಿನಂದನಾ ಸಮರ್ಪಣಾ ಭಾಷಣ ಮಾಡಿದರು.

ಮರುಕ್ಷಣವೆ ಜನಾಂಗ ಬಂಧುಗಳಿಂದ ಸನ್ಮಾನ ಕಾರ್ಯಕ್ರಮ ಆರಂಭವಾಯಿತು. ಕೆಲವೇ ನಿಮಿಷಗಳಲ್ಲಿ ಸಾಲುಗಟ್ಟಿ ಬಂದ ಅಭಿಮಾನಿ ಬಂಧುವರ್ಗ ಹಾರಾರ್ಪಣೆ ಮಾಡಿ ಗೌಡ ಸಂಪ್ರದಾಯ ಪದ್ಧತಿಯಲ್ಲಿ ಕಾಲುಮುಟ್ಟಿ ನಮಸ್ಕರಿಸಿ, ದಂಪತಿಗಳ ಹಾರೈಕೆ ಸ್ವೀಕರಿಸಿತು. ಗಂಧಾಹಾರಗಳ ಹನಿಯಿಂದ ಸುಗಂಧ ಸರೋವರವೇ ನಿರ್ಮಾಣವಾದಂತಿತ್ತು. ಆ ಇಳಿ ವಯಸ್ಸಿನಲ್ಲೂ ಶ್ರೀ ಕುರುಂಜಿಯವರು ಮಂದಸ್ಮಿತರಾಗಿ ಬಾಂಧವರ ಕ್ಷೇಮ ವಿಚಾರಿಸುತ್ತಾ ಅತ್ಯಂತ ಹಿರಿಯರಿಂದ ಅವರೂ ಕಾಲುಮುಟ್ಟಿ ಆಶೀರ್ವಾದ ಬೇಡಿದರು. ಸಾಂಪ್ರದಾಯಿಕ ಗೌಡ ಉಡುಪುದಾರಿಗಳನ್ನು ಕುರುಂಜಿ ದಂಪತಿಗಳು ಕೊಡಗಿನ ಪದ್ಧತಿಯಂತೆ ಕುಣಿಯಬೇಕೆಂದು ವಿನಂತಿಸಿದರು. ಆ ಪರಿ ನಿಜಕ್ಕೂ ವಿಸ್ಮಯವಾಗಿತ್ತು. ಜನಾಂಗದ ಜನ್ಮ ಬಂಧುಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಅತ್ಯಂತ ಸುವ್ಯವಸ್ಥಿತವಾಗಿ ಏರ್ಪಡಿಸಲಾಗಿತ್ತು. ಇಪ್ಪತ್ತು ಕೌಂಟರುಗಳಲ್ಲಿ ಸ್ತ್ರೀ ಪುರುಷರಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಮಾಡಲಾಗಿತ್ತು. ಜನ್ಮ ಜಯಂತಿಗೆ ಬಂದ ಯಾವೊಬ್ಬ ಬಂಧುವಿಗೂ ಕಿಂಚಿತ್ತೂ ತೊಂದರೆಯಾಗದಷ್ಟು ನಯವಾಗಿ ಸತ್ಕಾರ ನಡೆದಿತ್ತು.

ನಿರೀಕ್ಷೆಯಂತೆ ಮಧ್ಯಾಹ್ನದ ನಂತರ ಸಮನ್ವಯ ಸಮಾರಂಭ ಏರ್ಪಟ್ಟಿತ್ತು. ಎನ್.ಸಿ.ಸಿ.ಕೆಡೇಟ್‌ಗಳಿಂದ ಗೌಡರ ಪಥ ಸಂಚಲನದೊಂದಿಗೆ ಸಭೆಗೆ ಆಗಮಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಛೇರ್‌ಮನ್ ಮತ್ತು ವಿಧಾನ ಸಭಾ ಸದಸ್ಯರಾದ ಶ್ರೀ ಬಿ. ಎಂ. ಇದಿನಬ್ಬರವರು ಆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು.

ಶ್ರೀ ಓ. ರಾಜಗೋಪಾಲ್‌ರ ಉದ್ಘಾಟನಾ ಭಾಷಣದ ಅಂಶ

ಗೌರವಾನ್ವಿತ ಕೇರಳ ರಾಜ್ಯದ ಮಂತ್ರಿಗಳಾದ ಓ. ರಾಜಗೋಪಾಲ್‌ರವರು New Teaching Block ನ್ನು ಉದ್ಘಾಟಿಸಿ ಮಾತನಾಡುತ್ತಾ ಸಭಾಸೀನರಿಗೆ ನಮಸ್ಕಾರ ಎಂಬ ಕನ್ನಡ ಪದೋಚ್ಚಾರಣೆಯೊಂದಿಗೆ ನಮಿಸಿ ತಮ್ಮ ಭಾಷಣ ಆರಂಭಿಸಿದರು. ಕನ್ನಡ ತಮಗೆ ಒಲಿದಿಲ್ಲವೆಂದೂ, ಮಲಯಾಳಂ ತಮ್ಮ ಮಾತೃಭಾಷೆಯೆಂದೂ ಹೇಳಿ ಆಂಗ್ಲ ಭಾಷೆಯಲ್ಲಿ ಮಾತನಾಡಿದರು.

ಶ್ರೀ ಕುರುಂಜಿ ವೆಂಕಟ್ರಮಣಗೌಡರು ಉನ್ನತ ಶಿಕ್ಷಣ ಪಡೆಯದಿದ್ದರೂ ಅದನ್ನು ಅನ್ಯರಿಗೂ ದೊರಕಿಸಿಕೊಟ್ಟವರೆಂದು ಶ್ಲಾಘಿಸಿದರು. ಶ್ರೀ ಕುರುಂಜಿಯವರ ಸಾಧನೆಯ ಒಂದೊಂದೆ ಮಗ್ಗಲುಗಳನ್ನು ಪ್ರಸ್ತಾಪಿಸುತ್ತಾ ಶ್ರೀಯವರು ಗಾಂಧೀ ತತ್ವಗಳನ್ನು ಮೈಗೂಡಿಸಿಕೊಂಡು Simple living broad thinking ಎಂಬ ಮಾದರಿಯಲ್ಲಿ ಬದುಕು ಸಾಗಿಸುತ್ತಿರುವ ಆದರ್ಶ ವ್ಯಕ್ತಿ ಎಂಬುದಾಗಿ ಕೊಂಡಾಡಿದರು.

ಅಮೃತಾನಂದಮಯಿಯರ ಅಮೃತವರ್ಷಾಚರಣೆ ಮತ್ತು ಶ್ರೀ ಕುರುಂಜಿಯವರ ವಜ್ರ ಮಹೋತ್ಸವಕ್ಕೂ ಹೋಲಿಕೆಗಳನ್ನು ನೀಡುತ್ತಾ ಅಮ್ಮನವರನ್ನು ಭೇಟಿಯಾಗುವಂತೆ ಸಲಹೆಯಿತ್ತರು. ಬಹುತೇಕ ಸುಶಿಕ್ಷಿತರು ಸ್ವಾರ್ಥಿಗಳಾಗಿದ್ದು, ಇಂದು ಸಮೋಜೋಪಯೋಗಿ ಕೆಲಸಗಳಿಂದ ದೂರವಿದ್ದಾರೆ. ಈ ನಿಟ್ಟಿನಲ್ಲಿ ಶ್ರೀಯವರದು ಆದರ್ಶ ವ್ಯಕ್ತಿತ್ವವಾಗಿದ್ದು ಸಮಾಜಕ್ಕಾಗಿ ತಮ್ಮನ್ನೂ ತೊಡಗಿಸಿಕೊಂಡಿದ್ದಾರೆ ಎಂದರು. ಪ್ರಾಚೀನ ಅರ್ವಾಚೀನ ಸಂಸ್ಕೃತಿಯನ್ನು ಮೆಲುಕು ಹಾಕುತ್ತಾ ಗುರುಕುಲ ಪದ್ಧತಿ, ಹಿಂದುತ್ವ, ನಮ್ಮ ಪರಂಪರೆಯಲ್ಲಿನ ಆದರ್ಶಗಳನ್ನು ಪರಿಚಯಿಸಿದರು. ಸತ್ಯವೊಂದೇ, ಅದನ್ನು ಕಂಡುಕೊಳ್ಳುವ ಮಾರ್ಗಗಳು ಬೇರೆ ಬೇರೆ ಎಂಬುದಾಗಿ ನಮ್ಮ ಪರಂಪರೆ ಹೇಳುತ್ತದೆ. ಆದ್ದರಿಂದ ನಮ್ಮದು ಶ್ರೇಷ್ಠ ಸಂಸ್ಕೃತಿ. ಈ ನಾಡಿನ ಸ್ವಾತಂತ್ರ್ಯಕ್ಕಾಗಿ ತಿಲಕರೇ ಮುಂತಾಗಿ ತಮ್ಮ ಜೀವನ ಸವೆಸಿದ್ದಾರೆ. ಅವರನ್ನು ನೆನೆಯೋಣ. ಅಟಲ್ ಬಿಹಾರಿ

ವಾಜಪೇಯಿಯವರೂ ಇಂದೂ ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದಾರೆ. ಇಂದು ಕ್ರಿಸ್‌ಮಸ್‌ದಿನವಾದ್ದರಿಂದ ಇಡೀ ಪ್ರಪಂಚವೇ ಶ್ರೀ ಕುರುಂಜಿ ಹಾಗೂ ಎ.ಬಿ. ವಾಜಪೇಯಿಯವರು ಜಯತೋತ್ಸವವನ್ನುಆಚರಿಸುತ್ತಿದೆ ಎಂಬುದಾಗಿ ಹರ್ಷ ವ್ಯಕ್ತಪಡಿಸಿದ ಓ. ರಾಜಗೋಪಾಲರವರು ಭಾರತದ ಅಭಿವೃದ್ಧಿಯತ್ತಲೂ ಇಣುಕಿ ಇಂದು ಶಕ್ತಿಶಾಲಿ ಸೂಪರ್ ಕಂಪ್ಯೂಟರ್, ಉಪಗ್ರಹ ಉಡಾವಣೆ ಮುಂತಾದ ತಂತ್ರಜ್ಞಾನದಲ್ಲಿ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಭಾರತವು ಯಾವುದರಲ್ಲೂ ಎರಡನೆಯದಾಗಿ ಉಳಿದಿಲ್ಲ. ಆದ್ದರಿಂದ ಇನ್ನು 15 ವರ್ಷಗಳಲ್ಲಿ ವಿಶ್ವದ ಒಂದು ಅಗ್ರಮಾನ್ಯ ರಾಷ್ಟ್ರವಾಗಿ ಭಾರತ ಕಾಣಿಸಿಕೊಳ್ಳಲಿವೆ ಎಂಬುದಾಗಿ ಭವಿಷ್ಯವಾಣಿ ನುಡಿದರು.

"ಜ್ಞಾನವೇ ಶಕ್ತಿ" ಜ್ಞಾನದಾಹದಿಂದ ಬರುವ ಕೇರಳದ ವಿದ್ಯಾರ್ಥಿಗಳಿಗೂ ಇಲ್ಲಿ ಆಶ್ರಯವಿದೆ. ಪ್ರಾಚೀನ ಶಿಕ್ಷಣ ಸಂಸ್ಥೆಗಳ ಧ್ಯೇಯೋದ್ದೇಶಗಳು ಆದರ್ಶವಾಗಿದ್ದು ಅವನ್ನು ಈಗಲೂ ತಮ್ಮ ಸಂಸ್ಥೆಗಳಲ್ಲಿ ಮೇಳೈಸಿಕೊಂಡು ಶಿಕ್ಷಣ ನೀಡುತ್ತಿರುವ ಶ್ರೀ ಕುರುಂಜಿಯವರು ನೂರು ವರ್ಷ ಬಾಳಿ ಬದುಕಬೇಕು ಎಂಬುದಾಗಿ ಇಡೀ ದೇಶವೇ ಶುಭ ಕೋರುತ್ತದೆ" ಎಂಬುದಾಗಿ ಹೇಳಿ ತಮ್ಮ ಉದ್ಘಾಟನಾ ಭಾಷಣ ಮುಗಿಸಿದರು.

ಡಾ. ಕೆ. ಚಿನ್ನಪ್ಪಗೌಡರ ಅಭಿನಂದನಾ ಭಾಷಣದ ಅಂಶ

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದೆನಬೇಕೆಂದು
ಹೇಳುತ್ತಾರೆ ಬಸವಣ್ಣನವರು

ಶ್ರೀ ಕುರುಂಜಿ ವೆಂಕಟ್ರಮಣಗೌಡರ ವಜ್ರಮ ಹೋತ್ಸವದ ಬಾಂಧವ್ಯ ದಿನಾಚರಣೆಯ ಅಭಿನಂದನಾ ಸಮಾರಂಭದಲ್ಲಿ ಡಾ. ಕೆ. ಚಿನ್ನಪ್ಪಗೌಡರು ಬಸವಣ್ಣನವರು ಹೇಳಿರುವ ಮಾದರಿಯಲ್ಲಿಯೇ ನುಡಿದು ಸಭಾ ಸದರ-ಪ್ರೇಕ್ಷಕರ ಮನಗೆದ್ದರು. ಕಾಲಾವಕಾಶ ಕಡಿಮೆಯಿದ್ದ ಆ ವೇಳೆಯಲ್ಲಿ ತಮ್ಮ ಭಾಷಣಕ್ಕೊಂದು ಹದಿನೈದು ನಿಮಿಷಗಳ ಚೌಕಟ್ಟು ಹಾಕಿಕೊಂಡು ಹಿತಮಿತ ಮೃದುವಚನಗಳಿಂದ ಮಾತನಾಡಿದರು. ಆದರೆ ಶ್ರೀ ಕುರುಂಜಿಯವರ ಶ್ರೇಷ್ಠ ವ್ಯಕ್ತಿತ್ವವನ್ನು ಅವರ ಸಾಧನೆಯನ್ನು ಸಾಮಾನ್ಯ ಮಾತುಗಳಲ್ಲಿ ಗಂಟೆ ಗಟ್ಟಲೆ ಹೇಳಿದರೂ ಸರಿಗಟ್ಟಲಾಗದೇನೊ, ಪುನರಾವರ್ತನೆಯೆನಿಸುವುದೇನೋ, ಆದ್ದರಿಂದ ಚಿನ್ನಪ್ಪಗೌಡರು ಶ್ರೀ ಕುರುಂಜಿಯವರ ಬಗೆಗಿನ ವಿಶೇಷಣಗಳನ್ನು ಮಾತ್ರ ಪ್ರಸ್ತಾಪಿಸಿ ಭಾವಾರ್ಥ, ಧ್ವನ್ಯಾರ್ಥ ಗಳಲ್ಲಿಯೇ ಇಡೀ ಭಾಷಣವನ್ನು ಕಟ್ಟಿಟ್ಟುಬಿಟ್ಟರು. ಅವುಗಳಲ್ಲಿನ ಒಂದೊಂದು ಪದವೂ ಕನಿಷ್ಠ ಹತ್ತತ್ತು ಪುಟಗಳ ವಿವರಣೆ ಬೇಡುವಂತಹವು. ಅವರ ಭಾಷಣದ ಕಸುವನ್ನು ಎಷ್ಟು ರೀತಿಯಲ್ಲಿ ಅರ್ಥೈಸಿಕೊಳ್ಳಲು ಸಾಧ್ಯವೋ ಹೊಸ ಹೊಸ ಆಲೋಚನೆಗಳನ್ನು ಹೊಳೆಯಿಸಿಕೊಳ್ಳಲು ಸಮರ್ಥರೋ ಅಷ್ಟೂ ವಿಚಾರಗಳನ್ನು ಅವರ ಭಾಷಣ ಹಿಡಿದಿಟ್ಟುಕೊಂಡಂತಿತ್ತು.

ಶ್ರೀ ಕುರುಂಜಿಯವರಿಗೆ ಹಾರಾರ್ಪಣೆ ಮಾಡಿದ ವಿಚಾರದಿಂದ ಭಾಷಣ ಆರಂಭಿಸಿ ಈ ಹಾರದೊಂದಿಗಿನ ಒಂದೊಂದು ತುಣುಕುಗಳೂ ಅಭಿಮಾನಿಗಳು, ಜನಾಂಗ ಬಂಧುಗಳು ನೀಡಿರುವ ಬಲದ ಸಂಕೇತ. ಈ ಗಜ ಬಲದಿಂದಲೇ ಗೌಡರು ಶತಾಯುಷಿಗಳಾಗಿ ಬಾಳುತ್ತಾರೆ ಎಂದರು.

ಗಾಂಧೀಜಿಯವರದು ಗ್ರಾಮರಾಜ್ಯದ ಕನಸು. ನೆಹರೂರವರದು ನಗರರಾಜ್ಯಚಿಂತನೆಯ ಕನಸು. ಶ್ರೀ ಕುರುಂಜಿಯವರು ಈ ಎರಡರ ಸಮನ್ವಯ ಸಾಧಿಸಿ ಗ್ರಾಮದಲ್ಲೆ ನಗರ ಕಟ್ಟುವ ಚಿಂತನೆಯನ್ನು ಬೆಳೆಸಿದವರು. ಈಗವರು ಒಂದು ಜನಾಂಗದ, ಒಂದು ಜಿಲ್ಲೆಯ ವ್ಯಕ್ತಿಯಲ್ಲ. ಅಂತರಾಷ್ಟ್ರೀಯ ವ್ಯಕ್ತಿಯಾಗಿ ಬೆಳೆದುನಿಂತ ಅತೀ ಶ್ರೇಷ್ಠ ವ್ಯಕ್ತಿತ್ವ. ಆದ್ದರಿಂದ ತಮ್ಮ ಜನಾಂಗಕ್ಕೆ ಮೀಸಲಿದ್ದ ಈ ದಿನವನ್ನು ಬಾಂಧವ್ಯದ ದಿನ ಎಂಬುದಾಗಿ ಸೂಚ್ಯಾರ್ಥದಲ್ಲಿ ಬಳಸಲಾಗಿದೆ.

ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಲಯಂ ಮಾಡಿಸು, ಎಂಬುದಾಗಿ ದಾಸನ ಪದ್ಯವೊಂದನ್ನು ಉದ್ಧೃತಗೊಳಿಸುತ್ತಾ ಬಹುಶಃ ಶ್ರೀ ಕುರುಂಜಿಯವರ ತಂದೆ ಮಹಾಲಿಂಗ ಮಾಸ್ತರರು ಮತ್ತು ತಾಯಿ ಶಾಲೆಯಂ ಕಟ್ಟಿಸು, ಆಸ್ಪತ್ರೆಯಂ ಮಾಡಿಸು ಎಂಬುದಾಗಿ ಮಗನ ಕಿವಿಯಲ್ಲಿ ಹೇಳಿರಬೇಕೆಂದು ಭಾವಪರವಶರಾಗಿ ನುಡಿದರು. ಇದು ಎಳವೆಯಿಂದ ಬಂದ ಸಂಸ್ಕಾರ. ಅಂತರಾಷ್ಟ್ರೀಯ ವ್ಯಕ್ತಿಯಾಗಿಯೂ ಸಾಂಸ್ಕೃತಿಕ ಬೇರುಗಳನ್ನು ಗ್ರಾಮದಲ್ಲಿ ಬಿಟ್ಟಿರುವ, ಕೃಷಿ ಉತ್ಪನ್ನವನ್ನು ಶಿಕ್ಷಣಕ್ಕೆ ತೊಡಗಿಸಿ ಈ ಶಿಕ್ಷಣ ಸಾಮ್ರಾಜ್ಯ ನಿರ್ಮಿಸಿರುವ ವ್ಯಕ್ತಿ ಅಭೂತಪೂರ್ವಪರಂಪರೆಯ ಗಾಂಭೀರ್ಯ, ಆಧುನೀಕತೆಯ ಉಲ್ಲಾಸದ ವ್ಯಕ್ತಿತ್ವ ಶ್ರೀಯವರದು.

ಏನು ಸಾಧಿಸಲಾಗಲಿಲ್ಲವೋ, ಅದರ ಬಗ್ಗೆ ಚಿಂತೆಯಿಲ್ಲದ
ಏನು ಸಾಧಿಸಲಾಗಿದೆಯೋ ಅದರ ಬಗ್ಗೆ ಗರ್ವವಿಲ್ಲದ
ಏನು ಯೋಜನೆಗಳು ಮುಂದಿವೆಯೋ ಅವುಗಳ ಬಗ್ಗೆ ಆಲಸ್ಯವಿಲ್ಲದ

ಶ್ರೀ ಕುರುಂಜಿಯವರು ಮುಂದೆಯೂ ಕನಸುಗಳನ್ನು ಕಂಡು ಸಾಕಾರಗೊಳಿಸಿ ಇನ್ನಷ್ಟು ಮೇರು ವ್ಯಕ್ತಿಯಾಗಿ ಶತಾಯುಷಿಗಳಾಗಿ ಬಾಳುತ್ತಾರೆ. ಅವರಿಗೆ ನಮ್ಮೆಲ್ಲರ ಹಾರೈಕೆಗಳು ಇದ್ದೇ ಇವೆ ಎಂಬುದಾಗಿ ಹೇಳುತ್ತಾ ಬಂದ ಅತಿಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿ, ಮಾಲಾರ್ಪಣೆ ಮಾಡಲಾಯಿತು.

- ಆರ್. ಚಂದ್ರು, ಸಂಗಾತಿ

ಕೊಡಗು ಗೌಡ ಸಮಾಜ (ರಿ) ಬೆಂಗಳೂರು, ಹುರುಪಿನ ಹುತ್ತರಿ ಹಬ್ಬದ ಆಚರಣೆ

ಡಿಸೆಂಬರ್ (2003) 8ನೇ ಸೋಮವಾರ ಸಂಜೆ ಕೊಡಗು ಸಮಾಜದ ಸಭಾಂಗಣದಲ್ಲಿ ಈ ವರ್ಷ 3 ನೇ ಹುತ್ತರಿ ಹಬ್ಬವನ್ನು ಬಹಳಷ್ಟು ಹರ್ಷದಾಯಕವಾಗಿ, ವಿಜೃಂಭಣೆಯಿಂದ ಆಚರಿಸಲಾಯಿತು. ಬೆಂಗಳೂರಿನ ಮೂಲೆ ಮೂಲೆಗಳಿಂದ ಜನಾಂಗ ಬಾಂಧವರು 350 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಂಜೆ ಐದೂವರೆ ಘಂಟೆಯಿಂದ ಪ್ರಾರಂಭವಾದ ಈ ಕಾರ್ಯಕ್ರಮವು ರಾತ್ರಿ 10–30 ಘಂಟೆಯವರೆಗೆ ಜನಾಂಗದವರ ಸಂತೋಷವನ್ನು ಹಾಗೂ ಒಗ್ಗಟ್ಟನ್ನೂ ಸೂಚಿಸುವ ಸಂಕೇತದೊಂದಿಗೆ ಮುಕ್ತಾಯವಾಯಿತು. ಸಾಯಂಕಾಲ 6 ಘಂಟೆಗೆ ಸರಿಯಾಗಿ ಕಾವೇರಿ ಮನೆ ಬೋಜಮ್ಮನವರ ನೇತೃತ್ವದಲ್ಲಿ ಅನೇಕ ಮಹಿಳೆಯರು ಸೇರಿ ಪೂಜೆಗೆ ಏರ್ಪಾಡನ್ನು ಮಾಡಿದ್ದರು. ಘಂಟೆ 7 ಕ್ಕೆ ಸರಿಯಾಗಿ ಯುವಕ ವೃಂದದಿಂದ ಕೂಡಕಂಡಿ ಸುನಿಲ್ ಸೋಮಣ್ಣ ಹಾಗೂ ಕರ್ಣಯ್ಯನ ಸುನಿಲ್ ಮತ್ತು ಹರಿಸ್‌ಮೋನಿ, ಮೊದಲಾದವರ ನೇತೃತ್ವದಲ್ಲಿ ಆರ್ಕೆಸ್ಟ್ರಾ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲಾಗಿ ತದನಂತರ ಮಹಿಳಾ ವೃಂದದವರಿಂದ ಕುದುಕುಳಿ ಧರಣಿ ಮತ್ತು ರಾಧಾ, ಮಗಳು ಪೂಜ, ಮತ್ತು ಕೋಳಿಬೈಲು ಉಮಾ ಇವರಿಂದ ಜಾನಪದ ನೃತ್ಯ ನಡೆಯಿತು. ಈ ಕಾರ್ಯಕ್ರಮವು ನಡೆಯುತ್ತಿದ್ದಂತೆ ಸಮಾಜದ ಗೌರವ ಕಾರ್ಯದರ್ಶಿ ಬಾರಿಕೆ ಶ್ರೀ ರಾಘವಯ್ಯನವರ ಸತತ ಪ್ರಯತ್ನ ಹುರುಪು, ಉತ್ಸಾಹ ಹಾಗೂ ಮುಂದಾಳತ್ವದಲ್ಲಿ ಸಜ್ಜಿತಗೊಂಡ ಕೋಲಾಟ ತಂಡವು ಸಭಾಂಗಣವನ್ನು ಇದ್ದಕ್ಕಿದ್ದಂತೆ ಮೊಳಗುವ ವಾದ್ಯದೊಡನೆ ಸಾಲು ಸಾಲಾಗಿ ಮುನ್ನುಗ್ಗಿ ಬಂದಾಗ ಜನ ಸಮೂಹವು ಹರ್ಷೋದ್ಗಾರದಿಂದ ಅವರನ್ನು ಸ್ವಾಗತಿಸಿದ ದೃಶ್ಯ ಮನೋಹರವಾಗಿತ್ತು. ಈ ಕೋಲಾಟ ಪಂಗಡದಲ್ಲಿ ಭಾಗವಹಿಸಿದ ಮಹನೀಯರೆಲ್ಲರೂ ಕೊಡಗಿನ ಹುತ್ತರಿ ಹಬ್ಬದಲ್ಲಿ ಸಂಪ್ರದಾಯಕವಾಗಿ ಧರಿಸುವ ಉಡುಪನ್ನು ಧರಿಸಿದ್ದು ಬಹಳಷ್ಟು ರಮ್ಯವಾಗಿತ್ತು. ಕೋಲಾಟದ ಪಂಗಡದ ಮುಂದಾಳಾಗಿ ಸಮಾಜದ ಅಧ್ಯಕ್ಷರಾದ ತೋಟಂಬೈಲು ಬೆಳ್ಯಪ್ಪನವರೊಡನೆ ಹಿರಿಯರಾದ ಕಾಳೆಕೋಟಿ ಮಾಚಯ್ಯನವರು, ಬೈತಡ್ಕ ಜೋಯಪ್ಪನವರು, ಅಮೆಮನೆ ಸೀತಾರಾಮನವರು ಕುದುಪಜೆ ಗಣಪತಿ ಹಾಗೂ ಮೋಹನರವರು ಮತ್ತು ಇತರರೂ ಸೇರಿದ್ದರು.

ಭಾಗಮಂಡಲ ನಾಡಿನ ಕೆಲವೊಂದು ಗೌಡ ಕುಟುಂಬಕ್ಕೆ ಸೀಮಿತವಾಗಿರುವ ನಾಡುತಕ್ಕರನ್ನು (ಬಾರಿಕೆ ಮತ್ತು ನಂಗಾರು ಮನೆಯವರು) ಮತ್ತು ದೇಶತಕ್ಕರನ್ನು (ಕುದುಪಜೆ ಮತ್ತು ಸೂರ್ತಲೆ ಮನೆಯವರು) ಪ್ರತಿನಿಧಿಸಿ, ಈ ಎಲ್ಲಾ ಕುಟುಂಬದವರು ಹಾಗೂ ಇನ್ನಿತರ ಕುಟುಂಬದವರು ಸೇರಿದಂತೆ ಒಟ್ಟಾರೆ 20 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಪಂಗಡವು ಕೋಲಾಟ, ಚೌರಿ ಆಟ, ಬೊಳಕಾಟ, ಕತ್ತಿ ಆಟ, ಮತ್ತು ಕೋಲ್‌ಪರೆ ಆಟದ ಪ್ರದರ್ಶನವನ್ನು ಹೆಚ್ಚು ಕಡಿಮೆ 1 ಘಂಟೆ ಪ್ರದರ್ಶಿಸಿ ಎಲ್ಲರ ಮೆಚ್ಚುಗೆಯನ್ನು ಪಡೆದರು. ತದನಂತರ ಬಾರಿಕೆ ರಾಘವಯ್ಯನವರ ಅರಿಕೆಯೊಂದಿಗೆ ಕಾವೇರಿ ಮನೆ ಬೋಜಮ್ಮನವರು ಇತರ ಹಿರಿಯ ಮಹಿಳೆಯರ ಸಮ್ಮುಖದಲ್ಲಿ ಕುಯ್ಯುಮುಡಿ ಕುಮಾರಿ ಅಕ್ಷತಳಿಗೆ ಕಳಶವನ್ನು ಎತ್ತಿಕೊಟ್ಟು, ಆ ನಂದಾದೀಪದ ಬೆಳಕಿನಡಿಯಲ್ಲಿ ಹಿರಿಯರಾದ ಕಾವೇರಿ ಮನೆ ಡಾ. ಬೋಜಪ್ಪನವರು ಕದಿರು ಗುತ್ತಿಯನ್ನು ಸಮಾಜದ ಅಧ್ಯಕ್ಷರಿಗೆ ಎತ್ತಿಕೊಟ್ಟರು. ಈ ಮಧ್ಯೆ ತಳಿಯಕ್ಕಿ ಬೆಳಕನ್ನು ಹಿಡಿದಿದ್ದ ಅನೇಕ ತರುಣಿಯರು ಹಾಗೂ ಕಳಶದೊಂದಿಗೆ ಎಲ್ಲರೂ ಕದಿರು ಗದ್ದೆಗೆ ಧಾವಿಸಿ, ಪೂಜೆಯ ನಂತರ ಕದಿರು ತೆಗೆಯುವ ಕಾರ್ಯಕ್ರಮವನ್ನು ಶ್ರೀಮಾನ್ ತೋಟಂಬೈಲು ಬೆಳ್ಯಪ್ಪನವರು ಸಾಂಗವಾಗಿ ನೆರವೇರಿಸಿ ಕೊಟ್ಟರು. ಈ ಮಧ್ಯೆ ಸಿಡಿದೆದ್ದ ಪಟಾಕಿಗಳ ಸ್ಫೋಟನದ ಶಬ್ಧ ಆಕಾಶಕ್ಕೇರುತ್ತಿದ್ದಂತೆ ಗುಂಡನ್ನು ಹಾರಿಸುತ್ತಾ ಕದಿರು ಹೊತ್ತು ಹಿಂದಿರುಗಿದ ಸರ್ವರೂ ಕಾವೇರಮ್ಮ ಹಾಗೂ ಇಗ್ಗುತಪ್ಪನ ನಾಮಪದವನ್ನು ಉಚ್ಚರಿಸುತ್ತಾ "ಪೊಲಿ" ಕರೆದರು. ಸಭಾಂಗಣವನ್ನು ಮತ್ತೆ ಸೇರಿ ಕದಿರು ಗುತ್ತಿಯನ್ನು ಇಳಿಸಿಕೊಟ್ಟು, ಪೂಜೆಯ ನಂತರ ಕದಿರು ವಿತರಣೆ ನಡೆಯಿತು. ಕಡೆಯದಾಗಿ ಹುತ್ರಿಯ ಸಿಹಿಊಟ ತಂಬಿಟ್ಟು, ಪಾಯಸ, ವಡೆ, ಪುಳಿಯೊಗರೆ, ಅವಲಕ್ಕಿ, ಸುಂಠಿ ಚಟ್ನಿ, ಮತ್ತು ವಿಶೇಷವಾಗಿ ಹುತ್ತರಿ ಗೆಣಸಿನ ಸಾರು ಮತ್ತು ಬಿಸಿ ಬಾದಾಮಿ ಹಾಲು ಇತ್ಯಾದಿ. ಈ ಊಟದ ತಯಾರಿ ಶ್ರೀಮತಿ ಕೂಡಕಂಡಿ ಹೊನ್ನಮ್ಮನವರ ನೇತೃತ್ವದಲ್ಲಿ ನಡೆದು ಇತರ ಅನೇಕ ಮಹಿಳೆಯರು ಭಾಗವಹಿಸಿದ್ದರು. ಕಾರ್ಯಕ್ರಮವು 10–30 ಘಂಟೆಗೆ ಮುಕ್ತಾಯವಾಯಿತು.

ವಿ. ಸೂ. ಕೊಡಗಿನಲ್ಲೇ ಹುಟ್ಟಿ ಬೆಳೆದು ಹುತ್ರಿ ಹಬ್ಬವನ್ನು ಆಚರಿಸಿದವರಿಗೆ ಈ ಹಬ್ಬದ ವಿವರಣೆ ಬೇಕಾಗಿಲ್ಲವಾದರೂ ಇಂದಿನ ಯುವಕ ವೃಂದದವರಲ್ಲಿ ಹೆಚ್ಚಿನವರಿಗೆ ಇದರ ಪರಿಜ್ಞಾನವೇ ಇಲ್ಲದ್ದರಿಂದ ಇದನ್ನು ಸ್ವಲ್ಪ ಮಟ್ಟಿಗೆ ವಿವರಿಸಿ ಬರೆಯಬೇಕಾಯಿತು. ಇದೇ ಹಿನ್ನಲೆಯಲ್ಲಿ ಸಮಾಜದ ಹಿರಿಯ ಸದಸ್ಯರಲ್ಲಿ ಒಬ್ಬರಾದ ಪೂಜಾರಿ ಪೂವಯ್ಯನವರು ಕೆಲವೊಂದು ಗ್ರಂಥಗಳ ಆಧಾರದ ಮೇಲೆ ಈ ಹಬ್ಬಕ್ಕೆ ಸಮ್ಮಂದಿಸಿದ ಆದಿ ದೇವತೆಗಳು, ಹಬ್ಬದ ನಡವಳಿಕೆ ಮುಂತಾದ ವಿಷಯಗಳ ಬಗ್ಗೆ ಭಾಷಣ ಮಾಡಿ ನೆರೆದವರಿಗೆ ತಿಳಿಸಿದರು.

-ಕಾವೇರಿ ಮನೆ ಡಾ. ಬೋಜಪ್ಪ, ಬೆಂಗಳೂರು.

13 ನೇ ಪುಟಕ್ಕೆ

ಬಾರಿಸು ಗೌಡ ಡಿಂಡಿಮವ..... ಸತ್ತಂತಿಹರನು ಬಡಿದೆಚ್ಚರಿಸು!

ಇತ್ತೀಚೆಗೆ ಕರ್ನಾಟಕ ವಿಧಾನ ಪರಿಷತ್ತ್‌ಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಭಾರೀ ಜಯಭೇರಿ ಬಾರಿಸಿತು. ಆದರೆ ಕೊಡಗಿನಲ್ಲಿ ಹಾಲಿ ಸಚಿವ ಟಿ. ಜಾನ್ ಸೋಲುವ ಮೂಲಕ ಭಾರೀ ಮುಖಭಂಗ ಅನುಭವಿಸಿತು. ಮೊಟ್ಟ ಮೊದಲ ಪ್ರೇಕ್ಷಕರ ಅಭ್ಯರ್ಥಿಯಾಗಿ ವಿಧಾನ ಪರಿಷತ್ ಪ್ರವೇಶಿಸಿ, ಅರುಣ್ ಮಾಚಯ್ಯನವರು ಹೊಸ ಇತಿಹಾಸ ನಿರ್ಮಿಸಿದ್ದಾರೆ. ಈ ಸಲದ ಚುನಾವಣೆಯ ವಿಶೇಷವೆಂದರೆ ಮತದಾರರು ಹಣ, ಆಮಿಷ, ಪಕ್ಷ ಎಲ್ಲವನ್ನು ಬದಿಗೆ ತಳ್ಳಿ, ಜನರೊಂದಿಗೆ ನಿಕಟವಾಗಿ ಗುರುತಿಸಿಕೊಳ್ಳಬಲ್ಲ, ಅಭ್ಯರ್ಥಿಗೆ ಬೆಂಬಲ ನೀಡಿದ್ದು.

ವಿಧಾನ ಪರಿಷತ್ ಚುನಾವಣೆಯಲ್ಲಿ ಕೇವಲ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಮಾತ್ರ ಮತದಾರರಾಗಿದ್ದರೂ ಸಹ, ಚುನಾವಣೆಯ ಭರಾಟೆ,ಪ್ರಚಾರ ಖರ್ಚುವೆಚ್ಚಗಳಲ್ಲಿ ಸಾರ್ವತ್ರಿಕ ಚುನಾವಣೆಗೇ ಸಡ್ಡು ಹೊಡೆದಿತ್ತು. ಮತದಾರ ಮಾತ್ರ ಈ ಬಾರಿ ಈ ಜಲ, ನೆಲ, ಸಂಸ್ಕೃತಿ ಪ್ರೀತಿಸಬಲ್ಲ ವ್ಯಕ್ತಿಗೆ ಅಧಿಕಾರದ ಅವಕಾಶ ನೀಡಿದ್ದಾನೆ. ಅರುಣ್ ಮಾಚಯ್ಯ ಹಲವು ಸ್ಥಳೀಯ ಸರ್ಕಾರಗಳಲ್ಲಿ ಹಾಗೂ ಪಕ್ಷದಲ್ಲಿ ಸೇವೆ ಸಲ್ಲಿಸಿ ಕೆಳಹಂತದಿಂದಲೇ ವಿವಿಧ ಮೆಟ್ಟಿಲೇರಿ ಬಂದ ಜನನಾಯಕ. ಇದರೊಂದಿಗೆ ಕ್ರೀಡಾ ಪ್ರತಿಭೆಯನ್ನೂ ಮೈಗೂಡಿಸಿಕೊಂಡು ಜನಪ್ರಿಯರಾದವರು. ಇದೆಲ್ಲಕ್ಕಿಂತಲೂ ಮುಖ್ಯವಾಗಿ ಕೊಡಗಿನಲ್ಲಿ ಪ್ರತ್ಯೇಕತೆಯ ಕೂಗು ಎದ್ದಾಗ ಅದನ್ನು ವಿರೋಧಿಸಿದವರಲ್ಲಿ ಅರುಣ್ ಮಾಚಯ್ಯನವರೂ ಒಬ್ಬರು. ಸ್ವತಃ ನಾಚಪ್ಪನವರೇ ಮಡಿಕೇರಿಯಲ್ಲಿ ನಡೆದ ಸಮಾವೇಶದಲ್ಲಿ ಅರುಣ್ ಮಾಚಯ್ಯನವರ ಹೆಸರು ಹೇಳದೇ, ನಮ್ಮ ಸಂಘಟನೆಯನ್ನು ವಿರೋಧಿಸಿದ ವ್ಯಕ್ತಿಯೇ, ಚುನಾವಣೆಯಲ್ಲಿ ತಮ್ಮ ಪರವಾಗಿ ಕೆಲಸ ಮಾಡುವಂತೆ ಗೋಗರೆಯುತ್ತಿರುವುದು ಹಾಸ್ಯಾಸ್ಪದ ಎಂದಿದ್ದರೂ, ಜಿಲ್ಲಾ ಪಂಚಾಯತ್‌ನಲ್ಲಿ ಎಂ. ಎಂ. ನಾಣಯ್ಯ ಹಾಗೂ ಅವರ ನೆರಳಿನಂತಿದ್ದ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಬಲದೇವಕೃಷ್ಣರ ಸರ್ವಾಧಿಕಾರಿ ಧೋರಣೆ ವಿರುದ್ಧ ಕೆ. ಪಿ. ಚಂದ್ರ ಕಲಾರವರು ಸೆಟೆದು ನಿಂತಾಗ ಅವರ ಬೆನ್ನಿಗೆ ನಿಂತವರು ಅರುಣ್ ಮಾಚಯ್ಯನವರು. ಈ ಎಲ್ಲಾ ಕಾರಣಗಳಿಂದ ಅರುಣ್ ಮಾಚಯ್ಯನವರು ಕೊಡಗಿನಲ್ಲಿ ಸರ್ವಜನರ ಬೆಂಬಲ ಪಡೆಯುವಲ್ಲಿ ಯಶಸ್ವಿಯಾಗಿದ್ದರು.

ವಿಧಾನ ಪರಿಷತ್ ಚುನಾವಣೆಗೆ ಅರುಣ್ ಮಾಚಯ್ಯನವರು ಬಂಡಾಯವಾಗಿ ಸ್ಪರ್ಧಿಸಿದಾಗ, ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯೇತರ ಪಕ್ಷಗಳು ಅರುಣ್‌ರವರ ಬೆಂಬಲಕ್ಕೆ ನಿಂತಿದ್ದವು. ಅಲ್ಲದೆ ಕಾಂಗ್ರೆಸ್ ಪಕ್ಷದಿಂದಲೂ ಹಲವರು ಅರುಣ್ ಮಾಚಯ್ಯನವರನ್ನು ಬೆಂಬಲಿಸಿರುವುದು, ಸಧ್ಯಕ್ಕೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಕಂಬಗಳು ಅಲುಗಾಡುವಂತೆ ಮಾಡಿದೆ.

ಇದೇ ವರ್ಷ ನಡೆಯಲಿರುವ ಚುನಾವಣೆಗೆ ಮುಂಚೆ ಕಾಂಗ್ರೆಸ್ ಮನೆಯನ್ನೂ ದುರಸ್ಥಿಗೊಳಿಸದೇ ಹೋದರೆ ಅದಕ್ಕೆ ಅಪಾಯ ತಪ್ಪಿದ್ದಿಲ್ಲ.

ಈ ಚುನಾವಣೆಯ ಮತ್ತೊಂದು ವಿಶೇಷತೆಯೆಂದರೆ ಗೌಡ ಜನಾಂಗ, ಜಾತಿ ಭೇದ ಮರೆತು ಅರುಣ್ ಮಾಚಯ್ಯನವರನ್ನು ಬೆಂಬಲಿಸಿದ್ದು. ಹಲವಾರು ಗೌಡ ರಾಜಕೀಯ ನೇತಾರರು ಅರುಣ್ ಮಾಚಯ್ಯನವರ ಗೆಲುವಿಗೆ ಹಗಲಿರುಳೆನ್ನದೆ ಶ್ರಮಿಸಿದ್ದಾರೆ. ಕೊಡಗು ಅಭಿವೃದ್ಧಿಯಾಗಬೇಕಾದರೆ, ನಿಜವಾಗಿಯೂ ದುಡಿಯಬಲ್ಲ ಸಜ್ಜನನಿಗೆ ಗದ್ದುಗೇರುವ ಅವಕಾಶ ನೀಡಬೇಕೆಂಬ ಇರಾದೆ ಇವರದಾಗಿತ್ತು. ಕೊಡಗಿನ ಮಟ್ಟಿಗೆ ಇದೊಂದು ಉತ್ತಮ ಆಶಾದಾಯಕ ಬೆಳವಣಿಗೆ. ಕೊಡಗು ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಕೊಡವ ಮತ್ತು ಗೌಡ ಜನಾಂಗದವರು ಸಂಘಟಿತರಾಗಿ ದುಡಿಯಲೇ ಬೇಕು. ಇವರಿಬ್ಬರ ನಡುವೆ ವಿರಸಮೂಡಿದರೆ ಅದರಿಂದ ನಷ್ಟ ಅನುಭವಿಸುವವರು ಇವರಿಬ್ಬರೇ ಎನ್ನುವುದು ಇಬ್ಬರಿಗೂ ಗೊತ್ತಿರುವ ಸತ್ಯ.

ಪ್ರಸ್ತುತ ರಾಜಕೀಯ ವಿದ್ಯಾಮಾನವನ್ನು ಗಮನಿಸಿದರೆ ಕೊಡಗು ಗೌಡ ಜನಾಂಗದವರು ರಾಜಕೀಯ ಪ್ರತಿನಿಧಿತ್ವವನ್ನು ಕಳೆದುಕೊಳ್ಳುತ್ತಾ ಸಾಗುತ್ತಿದ್ದಾರೆ. ರಾಷ್ಟ್ರ ರಾಜಕಾರಣ ಬಿಡಿ, ರಾಜ್ಯ ವಿಧಾನ ಸಭೆ, ವಿಧಾನ ಪರಿಷತ್‌ಗಳಲ್ಲಿ ಸ್ಥಾನ ಪಡೆಯಲು ಅಸಾಧ್ಯವಾಗುತ್ತಿದೆ. ರಾಜಕಾರಣಿಗಳ ಸ್ವಯಂಕೃತಪರಾಧವೇ ಈ ದಮನೀಯ ಸ್ಥಿತಿಗೆ ಕಾರಣವೆಂಬುದು ಎಲ್ಲರಿಗೂ ಗೊತ್ತಿದೆ. ಕೊಡಗು ಗೌಡ ಜನಾಂಗದವರು ರಾಜಕೀಯ ಪ್ರತಿನಿಧಿತ್ವವನ್ನು ಕಳೆದುಕೊಳ್ಳುತ್ತಾ ಸಾಗುತ್ತಿದ್ದಾರೆ. ರಾಷ್ಟ್ರ ರಾಜಕಾರಣಬಿಡಿ, ರಾಜ್ಯ ವಿಧಾನ ಸಭೆ, ವಿಧಾನ ಪರಿಷತ್‌ಗಳಲ್ಲಿ ಸ್ಥಾನ ಪಡೆಯಲು ಅಸಾಧ್ಯವಾಗುತ್ತಿದೆ.ಅತಿ ಹೆಚ್ಚು ಕೊಡಗು ಗೌಡ ಜನ ಸಂಖ್ಯೆಯನ್ನು ಹೊಂದಿರುವ ಮಡಿಕೇರಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಹೋಗುವುದು ಕೊಡಗು ಗೌಡ ಪ್ರತಿನಿಧಿಗಳಿಗೆ ಕಷ್ಟವೇನಲ್ಲ. ಆದರೆ ಇಬ್ಬರಿಬ್ಬರು ಚುನಾವಣೆಯಲ್ಲಿ ಸ್ಪರ್ಧಿಗಿಳಿದುಕೊಂಡರೆ ಗೆಲುವು ಮರೀಚಿಕೆಯಾಗುತ್ತದೆ ಯೆನ್ನುವುದು ಎಲ್ಲರಿಗೂ ಗೊತ್ತಿದೆ. ಪ್ರತಿಗ್ರಾಮ ಗ್ರಾಮಗಳಲ್ಲಿಯೂ 'ಗೌಡ' ಜನಾಂಗ ದವರು ನಮ್ಮಲ್ಲಿ ಒಬ್ಬ ಉತ್ತಮ ರಾಜಕೀಯ ನಾಯಕನ ಕೊರತೆ ಯಿದೆಯೆಂಬ ಅಳಲನ್ನು ತೋಡಿ ಕೊಳ್ಳುತ್ತಿದ್ದಾರೆ. ಇವರ ನೋವಿಗೆ ಸ್ಪಂದಿಸುವವರಾರು?

ನಮ್ಮಲ್ಲಿ ಇಂದು ಹಲವಾರು ಗೌಡ ಸಂಘಟನೆಗಳಿವೆ. ಎಲ್ಲಾ ಸಂಘಟನೆಗಳಿಗೆ ತಂದೆಯಂತೆ ಕೊಡಗು ಗೌಡ ಸಮಾಜವಿದೆ. ಹೊಸ ವರ್ಷದಲ್ಲಿ ಬರುವ ಚುನಾವಣೆಯಲ್ಲಿ, ಗೌಡ ಜನಾಂಗದಿಂದ ಒಬ್ಬನೇ ಸಮರ್ಥ ಅಭ್ಯರ್ಥಿ ಕಣಕ್ಕಿಳಿಯುವ ವ್ಯವಸ್ಥೆ ನಡೆಯಬೇಕು. ಅದು ನಡೆಯಬೇಕಾದರೆ, ಈಗಲೇ ನಿದ್ದೆ ಯಿಂದೆದ್ದು ಯೋಚಿಸಿ ಚರ್ಚಿಸಬೇಕು. ಅರುಣ್ ಮಾಚಯ್ಯ ಮೇಲ್ಮನೆಗೆ, ಟಿಜಾನ್ ಮನೆಗೆ, ನಾವು ಯಾವ ಮನೆಗೆ ಎನ್ನುವ ಪ್ರಶ್ನೆ ಈಗ ಗೌಡ ಜನಾಂಗದ ಮುಂದಿದೆ. ಎಲ್ಲಿಗೆ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಜವಾಬ್ದಾರಿ ಗೌಡ ಸಂಘಟನೆಗಳ ಮೇಲಿದೆ. ಗೌಡ ಡಿಂಡಿಮ ಬಾರಿಸುವತ್ತ ಸಂಘಟನೆಗಳು ಹೆಜ್ಜೆ ಹಾಕಿ ಜನತೆಗೆ ಹೊಸ ವರ್ಷದ ಶುಭಾಶಯ ಕೋರಲಿ.

—ಪಟ್ಟಡ ಶಿವಕುಮಾರ್

ಮೈಸೂರಿನಲ್ಲಿ ಹುತ್ರಿ ಆಚರಣೆ

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ ದಿನಾಂಕ 8-12-2003 ರಂದು ಹುತ್ರಿ ಹಬ್ಬವನ್ನು ಆಚರಿಸಲಾಯಿತು. ಸುಮಾರು 300 ಜನ ಸಮಾಜ ಬಾಂಧವರು ಸಂಜೆ 7 ಘಂಟೆಗೆ ಸೇರಿ 8-00 ಗಂಟೆಗೆ ನೆರೆಕಟ್ಟಿ 9-00 ಗಂಟೆಗೆ ಕದಿರನ್ನು ಕುಯ್ಯಲಾಯಿತು.

ಕುಲಗುರು ವೆಂಕಟರಮಣ, ತಾಯಿ ಕಾವೇರಿ, ಇಗ್ಗುತಪ್ಪರನ್ನು ನೆನೆಯುವುದರ ಮೂಲಕ ಸಮಾಜದ ಹಿರಿಯರಾದ ಕುಯ್ಯುಮುಡಿ ರಾಮಪ್ಪನವರು ಹಾಗೂ ನೆಯ್ಯಣೀರ ಕುಶಾಲಪ್ಪನವರು ಕದಿರು ಗುತ್ತಿಯನ್ನು ಕುಯ್ಯುಮುಡಿ ಮಾಚಯ್ಯನವರ ಹೆಗರಿಗೇರಿಸಿದರು. ಶ್ರೀಮತಿ ಕಡ್ಯದ ಸರೋಜ ಚುಂಡಯ್ಯನವರು ಕಂಚಿಮಿ ಹಿಡಿದು, ಪೊಲಿ ಪೊಲಿಯೋ ಬಾ ಎಂಬ ವೇದಘೋಷದೊಂದಿಗೆ ನೆಟ್ಟ ಬೆಳೆಗೆ ನೆರೆಕಟ್ಟಿ ದೇವರನ್ನು ನೆನೆದು ಅಕ್ಕಿ ಹಾಕಿ ಪ್ರಾರ್ಥಿಸಿ ಕದಿರು ಕುಯ್ಯಲಾಯಿತು. ಈ ಸಮಯದಲ್ಲಿ ಪಟಾಕಿಗಳನ್ನು ಸಿಡಿಸಲಾಯಿತು.

ಒಲೆಗೆರಡರಂತೆ ನೆರೆಯನ್ನು ಮತ್ತು ಕದಿರನ್ನು ಹಂಚಲಾಯಿತು. ಪದ್ಧತಿಯಂತೆ ಫಲಾಹಾರವನ್ನು ನೀಡಲಾಯಿತು. ಮನೋರಂಜನಾ ಕಾರ್ಯಕ್ರಮ ನಡೆಯಿತು. ಕೊಡಗು ಮತ್ತು ದ. ಕ. ಗೌಡ ಮಹಿಳಾ ಸಂಘದ ವತಿಯಿಂದ ತಂಬಿಟ್ಟು ಫಲಹಾರವಿತ್ತು. ಕೊಡಗು ಗೌಡ ಸಂಘದಿಂದ ಇತರೆ ಖರ್ಚುಗಳು ಹಾಗೂ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪಟಾಕಿಯನ್ನು ಸಿಡಿಸಲಾಯಿತು.

---

11 ನೇ ಪುಟದಿಂದ

ಶ್ರೀ ಇಗ್ಗುತಪ್ಪ ದೇವರ ಸ್ತುತಿ ಗೀತೆ

ಓ ಎನ್ನದೇವ ಈಶ್ವರ ಇಗ್ಗುತಪ್ಪ ಕರುಣಿಸೆನಗೆ ಸುಕ ಸುಖ
ಶಾಂತಿಯನ್ನು ಸುಭಿಕ್ಷೆಯನು
ಮಲೆಯಾಳ ರಾಜ್ಯದಲ್ಲಿ ಮಾಯೆಯಿಂದ ಅವತರಿಸಿ
ಪೂಮಾಲೆ ಕೊಡಗಿನಲ್ಲಿ ಸನ್ನಿದಿಯ ತಳೆದಿಹ
ಅನ್ನ ದೇವಿಯ ಪೂಜೆಗೆ ಹುತ್ತರಿ ಹಬ್ಬವನು ನೀಡಿಹ
ಕೊಡಗಿನಲ್ಲಿ ಕೋಲಾದ ನರ್ತನದ ಹರ್ಷವನ್ನು ಹರಿಸಿಹ ||ಪ||
ಮನೆ ಮನೆಗಳಲ್ಲಿ ಉದಯಾಸ್ಥಮಾನದಲ್ಲಿ ದೀಪ ಆರತಿ
ನೆನೆದವರ ಮನದಲ್ಲಿ ದಿವ್ಯತೆಯ ಬೆಳಕಾಗಿ ಬಂದು ತುಂಬಿಹೆ
ತುಂಬಿ ಬರುವ ಮಳೆ ಬೆಳೆ ಪೋಷಣೆಗೆ ಕಾಲ ಕಾಲಕ್ಕೆ ವರವ
ನೀಡುವ ಬದುಕುವುದಕ್ಕೆ ಬದುಕಿನ ಸುಖ ಸುಂದರ ಸಾಧನೆಗೆ
ಚೇತನ ತುಂಬುವ ||ಪಲ್ಲವಿ||
ಮನೆ ತೋಟಗಳ ಸಿರಿ ತುಂಬಿ ಬರಲಿ ಮನದೊಳಗೆ
ಪಾವನತೆನೆಲೆಗೊಡಿ ನಿನ್ನಲ್ಲಿ
ನಡೆನುಡಿಗಳಲ್ಲಿ ಹಗಲು ಇರುಳು ನಿನ್ನ ನೆನಪು ಇರಲಿ,
ಜೀವನದ ಹಾದಿಯಲಿ ತವರಕ್ಷೆ ಎನಗಿರಲಿ ||ಪಲ್ಲವಿ||

ರಚನೆ : ಶ್ರೀಮತಿ ಕಾವೇರಿ ಮನೆ ಬೋಜಮ್ಮ

ಈವಂಗೆ ದೇವಂಗೆ ಅವುದಂತರವಯ್ಯ
ದೇವನು ಜಗಕೆ ಕೊಡುತಿಹನು ಕೈಯ್ಯಾರೆ
ಈವನೇ ದೇವ ಸರ್ವಜ್ಞ

ಶ್ರೀ ಕುರುಂಜಿ ವೆಂಕಟ್ರಮಣ ಗೌಡರ ಸೇವಾ ಕ್ಷೇತ್ರಗಳು

ಎ. *ಶೈಕ್ಷಣಿಕ ಸೇವೆ:*

1967 ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ (ರಿ) ಸುಳ್ಯ ಸಂಸ್ಥೆ ಸ್ಥಾಪನೆ. ಅದರ ಸ್ಥಾಪಕಾಧ್ಯಕ್ಷರಾಗಿ ನಿರಂತರ ಸೇವೆ. ಅಕಾಡೆಮಿಯ ಆಶ್ರಯದಲ್ಲಿ ಸ್ಥಾಪನೆಗೊಂಡ ಶೈಕ್ಷಣಿಕ ಸಂಸ್ಥೆಗಳು.

ಸಾಮಾನ್ಯ (General) ಶಿಕ್ಷಣ ಸಂಸ್ಥೆಗಳು

ನೆಹರು ಮೆಮೋರಿಯಲ್ ಪ್ರಥಮ ದರ್ಜೆ ಕಾಲೇಜು (ಕಲೆ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳು) –1976

ಕೆ. ವಿ. ಜಿ. ಕಾನೂನು ಕಾಲೇಜು -- 1990

ಕೆ. ವಿ. ಜಿ. ಪ್ರಥಮ ದರ್ಜೆ ಕಾಲೇಜು, ಭಾಗಮಂಡಲ ಕೊಡಗು – 1996

ಶ್ರೀ ಶಾರದಾ ಪ್ರಥಮದರ್ಜೆ ಮಹಿಳಾ ಕಾಲೇಜು, ಸುಳ್ಯ 1996

ನೆಹರು ಸ್ಮಾರಕ ಸಂಯುಕ್ತ ಪದವಿಪೂರ್ವ ಕಾಲೇಜು, ಅರಂತೋಡು – 1980

ಶ್ರೀ ಶಾರದ ಹೆಮ್ಮಕ್ಕಳ ಸಂಯುಕ್ತ ಪದವಿಪೂರ್ವ ಕಾಲೇಜು , ಸುಳ್ಯ 1982

ಕೆ. ವಿ. ಜಿ. ಪ್ರೌಢಶಾಲೆ ಕೊಲ್ಲಮೊಗರು, ಸುಳ್ಯ – 1992

ಜ್ಯೋತಿ ಪ್ರೌಢಶಾಲೆ ಪೆರಾಜೆ, ಕೊಡಗು – 1987

ಕೆ. ವಿ. ಜಿ. ಆಂಗ್ಲ ಮಾಧ್ಯಮ ಪ್ರೌಢಶಾಲೆ, ಸುಳ್ಯ – 1991

ವೈದ್ಯಕೀಯ ಸಂಸ್ಥೆಗಳು

ಕೆ. ವಿ. ಜಿ. ವೈದ್ಯೀಯ ಮಹಾವಿದ್ಯಾಲಯ (Medical College), ಸುಳ್ಯ 2002

ಕೆ. ವಿ. ಜಿ. ದಂತ ಮಹಾವಿದ್ಯಾಲಯ (Dental Collge), ಸುಳ್ಯ – 1991

ಎನ್, ಎಸ್, ವಿ. ಕೆ. ಶ್ರೀ ವೆಂಕಟೇಶ್ವರ ದಂತ ಮಹಾ ವಿದ್ಯಾಲಯ, ಬೆಂಗಳೂರು

ಕೆ. ವಿ. ಜಿ. ಆಯುರ್ವೇದ ಮಹಾವಿದ್ಯಾಲಯ, ಸುಳ್ಯ –1 1996

ಕೆ. ವಿ. ಜಿ. ಇನ್ಸಿಟ್ಯೂಟ್ ಆಫ್ ನರ್ಸಿಂಗ್ ಸುಳ್ಯ –1991

ವೈದ್ಯಕೀಯ ಸಂಸ್ಥೆಗಳು

ಕೆ. ವಿ. ಜಿ. ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ

ಕೆ. ವಿ. ಜಿ. ಸಂಚಾರಿ ಆರೋಗ್ಯ ಘಟಕ

ತಾಂತ್ರಿಕ ಶಿಕ್ಷಣ ಸಂಸ್ಥೆಗಳು

ಕೆ. ವಿ. ಜಿ. ಕಾಲೇಜ್ ಆಫ್ ಇಂಜಿನಿಯರಿಂಗ್ , ಸುಳ್ಯ – 1986

ಕೆ. ವಿ. ಜಿ. ಇನ್ಸಿಟ್ಯೂಟ್ ಆಫ್ ಹೈಯರ್ ಟೆಕ್ನಿಕಲ್ ಎಜ್ಯುಕೇಶನ್ (MCA, MBA, MTech,)–1998

ಕೆ. ವಿ. ಜಿ. ಪಾಲಿಟೆಕ್ನಿಕ್ ಕಾಲೇಜ್, ಸುಳ್ಯ 1984–

ಎನ್. ಎಸ್. ವಿ. ಕೆ. ಶ್ರೀ ವೆಂಕಟೇಶ್ವರ ಪಾಲಿಟೆಕ್ನಿಕ್ ಕಾಲೇಜ್, ಬೆಂಗಳೂರು

ಕೆ. ವಿ. ಜಿ. ಕೈಗಾರಿಕಾ ತರಬೇತಿ ಕೇಂದ್ರ, ಸುಳ್ಯ – 1984

ಕೆ. ವಿ.ಜಿ. ಕೈಗಾರಿಕಾ ತರಬೇತಿ ಕೇಂದ್ರ, ಭಾಗಮಂಡಲ, ಕೊಡಗು –, 1995

ಶ್ರೀ ಮಹಾ ಲಿಂಗೇಶ್ವರ ಕೈಗಾರಿಕಾ ತರಬೇತಿ ಕೇಂದ್ರ ಪುತ್ತೂರು

ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲೆಯ ಮತ್ತು ಕೊಡಗು ಜಿಲ್ಲೆಗಳ 157 ಪ್ರಾಥಮಿಕ /ಪ್ರೌಢ ಶಾಲೆಗಳಿಗೆ ಉಕ್ಕಿನ ಕವಾಟು ಮತ್ತು ಆಂಗ್ಲ ಭಾಷಾ ಪುಸ್ತಕಗಳನ್ನು ಉಚಿತವಾಗಿ ನೀಡಿ ಆಂಗ್ಲ ಭಾಷಾ ಗ್ರಂಥಾಲಯವನ್ನು ಸ್ಥಾಪಿಸಲು ಕಾರಣಕರ್ತಕರು.

ತಲಾ ರೂ. 10,000ದಂತೆ ರೂ. 2,90,000 ವನ್ನು ಉದಾರವಾಗಿ ನೀಡಿ ಸುಳ್ಯ ತಾಲ್ಲೂಕಿನ 29 ಜ್ಞಾನ ದೇಗುಲ ಕಟ್ಟಡ ನಿರ್ಮಾಣವಾಗುವಲ್ಲಿ ಕಾರಣಕರ್ತರು.

ಅರಂತೋಡು, ಪೆರಾಜೆ, ಕೊಲ್ಲಮೊಗಲು, ಸುಳ್ಯ, ಭಾಗಮಂಡಲ, ಮದೆನಾಡು, ಬೆಳ್ಳಾರೆ ಮುಂತಾದ ಕಡೆಗಳಲ್ಲಿ ಶಾಲಾ ಕಾಲೇಜುಗಳಿಗೆ ಸ್ವಂತ ಕಟ್ಟಡ ನಿರ್ಮಿಸಿ ಕೊಟ್ಟಿರುತ್ತಾರೆ.

ರೂ. 4 ಲಕ್ಷ ವೆಚ್ಚದಲ್ಲಿ ಕೆ. ವಿ. ಜಿ. ವಿಜ್ಞಾನ ಮಂದಿರ ಮತ್ತು ರೂ 1 ಲಕ್ಷ ವೆಚ್ಚದಲ್ಲಿ ಕೆ. ವಿ. ಜಿ. ರಂಗಮಂದಿರವನ್ನು ಅರಂತೋಡು ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜಿಗೆ ಉದಾರವಾಗಿ ಕೊಟ್ಟಿರುತ್ತಾರೆ.

ರೂ. 25 ಲಕ್ಷ ವೆಚ್ಚದ ಭವ್ಯವಾದ ಸೌಧವನ್ನು ಸುಳ್ಯದ ಶಾರದಾ ಮಹಿಳಾ ಕಾಲೇಜಿಗೆ ನಿರ್ಮಿಸಿಕೊಡುವಲ್ಲಿ ಕಾರಣಕರ್ತರು.

ತಲಾ ರೂ. 5,000 ದಂತೆ ದೇಣಿಗೆ ನೀಡಿ ಸುಳ್ಯ ತಾಲೂಕಿನ 27 ಅಕ್ಷರ ಕರಾವಳಿ ಕೇಂದ್ರಗಳು ನಿರ್ಮಾಣ ವಾಗುವಲ್ಲಿ ಕಾರಣಕರ್ತರು.

ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್,ಸಿಂಡಿಕೇಟ್ ಮತ್ತು ಎಕಾಡೆಮಿಕ್ ಕೌನ್ಸಿಲ್‌ಗಳ ಸದಸ್ಯರಾಗಿ ಸೇವೆಸಲ್ಲಿಸಿರುತ್ತಾರೆ.

ಸುಳ್ಯದ ಸರಕಾರಿ ಪದವಿಪೂರ್ವ ಕಾಲೇಜಿನ ರಕ್ಷಕ -ಶಿಕ್ಷಕ ಸಂಘದ ಅಧ್ಯಕ್ಷರಾಗಿ ಆ ಕಾಲೇಜಿನ ವಿಜ್ಞಾನ ಮತ್ತು ಪಿ.ಯು.ಸಿ. ವಿಭಾಗಕ್ಕೆ ಪ್ರತ್ಯೇಕ ಕಟ್ಟಡ ನಿರ್ಮಿಸಿ ಕೊಡುವಲ್ಲಿ ಕಾರಣಕರ್ತರು.

ತಮ್ಮ ಕೆ. ವಿ. ಜಿ. ವಿದ್ಯಾ ಸಂಕೀರ್ಣದಲ್ಲಿ ಇಂಟರ್‌ನೆಟ್ ಸೌಲಭ್ಯ ನಿರಂತರ ವಿದ್ಯುತ್ ಒದಗಿಸುವ ಕೆ. ವಿ. ಜಿ. ಹೈಟೆನ್ಸನ್ ಘಟಕ, ಸುಮಾರು 3000 ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಜಲ ಶುದ್ಧೀಕರಣ ಕಾರ್ಯಗಾರ.

ಶಾಖಾಹಾರಿ ಹಾಗೂ ಮಾಂಸಾಹಾರಿ ಕ್ಯಾಂಟೀನ್‌ಗಳು, ವಿಶಾಲವಾದ ಕ್ರೀಡಾಂಗಣ, ಸುಸಜ್ಜಿತ ಸಭಾಂಗಣಗಳು, ಜಿಮ್ನಾಸ್ಟಿಕ್ಸ್, ನಂದಿನಿ ಮಿಲ್ಕ್‌ಪಾರ್ಲರ್ ಸುಂದರ ಹೂತೋಟಗಳನ್ನು ನಿರ್ಮಿಸಿ ಸುಂದರವಾದ ಶೈಕ್ಷಣಿಕ ಸಂಕೀರ್ಣವನ್ನು ರೂಪಿಸಿರುತ್ತಾರೆ.

ಸಾಮಾಜಿಕ ಸೇವೆ:–

1. ಸುಳ್ಯದಲ್ಲಿ ನ್ಯಾಯಾಲಯ ಸ್ಥಾಪನೆಯಾಗಲು ಮತ್ತು ಅದಕ್ಕಾಗಿ ನೂತನ ಕಟ್ಟಡ ನಿರ್ಮಾಣಗೊಳ್ಳಲು ರೂಪಿಸಿದ ಚಾಲನಾ ಸಮಿತಿಯ ಅಧ್ಯಕ್ಷರಾಗಿ, ಈ ಎರಡೂ ಕೆಲಸ ಕಾರ್ಯಗಳು ಇವರ ನೇತೃತ್ವದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿವೆ.

ಉತ್ತಮ ಗುರಿಗಾಗಿ ತಮ್ಮ ಪ್ರಾಣವನ್ನು ತೆರುವವರು ಎಂದಿಗೂ ಸೋತವರಾಗುವುದಿಲ್ಲ.

2. 1970 ರಲ್ಲಿ ಸುಳ್ಯದ ಪ್ರತಿಷ್ಠಿತ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ ಅನೇಕ ಜನಹಿತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುತ್ತಾರಲ್ಲದೇ ಸುಳ್ಯದ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಯೋಗಾಲಯ ಕಟ್ಟಡದ ನಿರ್ಮಾಣಕ್ಕೆ ಕಾರಣಕರ್ತರಾಗಿರುತ್ತಾರೆ.

3. ಸುಳ್ಯದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆ ಆರಂಭವಾಗಲು ಕಾರಣಕರ್ತರಾಗಿರುತ್ತಾರೆ.

4. ಸುಳ್ಯದಲ್ಲಿ ರಾಷ್ಟ್ರೀಯ ಕುಟುಂಬ ಯೋಜನಾ ಕಾರ್ಯಕ್ರಮದ ಅನುಷ್ಠಾನದಲ್ಲಿ ಸಕ್ರೀಯವಾಗಿ ಪಾಲ್ಗೊಂಡಿರುತ್ತಾರೆ. ಸುಮಾರು ರೂ. 10,000 ಮೌಲ್ಯದ 1,000 ಸೀರೆಗಳನ್ನು ಕುಟುಂಬ ಯೋಜನಾ ಪ್ರಯೋಜನಾರ್ಥಿಗಳಿಗೆ ಪ್ರೋತ್ಸಾಹ ರೂಪದಲ್ಲಿ ನೀಡಿರುತ್ತಾರೆ. ಇವರ ಸಕ್ರೀಯ ಪಾಲ್ಗೊಳ್ಳುವಿಕೆ ಮತ್ತು ಉತ್ತೇಜನದಿಂದಾಗಿ ಮೈಸೂರು ವಿಭಾಗದಲ್ಲೇ ಕುಟುಂಬ ಯೋಜನಾ ಕಾರ್ಯಕ್ರಮ ಅನುಷ್ಠಾನದಲ್ಲಿ ಸುಳ್ಯ ಪ್ರಥಮ ಸ್ಥಾನ ಪಡೆಯುವಂತಾಯಿತು.

5. ಸುಳ್ಯದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಾದ ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ವಿಜಯಬ್ಯಾಂಕ್ ಮತ್ತು ಕರ್ನಾಟಕ ಬ್ಯಾಂಕ್‌ಗಳು ತಮ್ಮ ಶಾಖೆಗಳನ್ನು ತೆರೆಯಲು ಇವರು ಒತ್ತಾಸೆ ನೀಡಿರುತ್ತಾರಲ್ಲದೇ, ತಮ್ಮ ವಿದ್ಯಾ ಸಂಕೀರ್ಣದಲ್ಲಿ ಇವುಗಳ ವಿಸ್ತರಣಾ ಕೌಂಟರ್ ತೆರೆಯಲು ಸ್ಥಳಾವಕಾಶವನ್ನೂ ಮಾಡಿಕೊಟ್ಟಿರುತ್ತಾರೆ.

6. ಸುಳ್ಯದ ಲಯನ್ಸ್ ಸೇವಾ ಸದನ, ರೋಟರಿ ಶಾಲಾ ಕಟ್ಟಡ ಹಾಗೂ ತಾಲೂಕಿನ ಅನೇಕ ಯುವಕ ಮತ್ತು ಯುವತಿ ಮಂಡಲಗಳ ಕಟ್ಟಡ ನಿರ್ಮಾಣಕ್ಕೆ ಉದಾರ ದೇಣಿಗೆ ನೀಡಿರುತ್ತಾರೆ.

7. ಕರ್ನಾಟಕ ರಾಜ್ಯದಾದ್ಯಂತ 18 ಸಮಾಜ ಕಲ್ಯಾಣಮಂಟಪ, ರಂಗಮಂದಿರ ಮತ್ತು ವಿವಿದೋದ್ದೇಶ ಸಭಾ ಭವನವನ್ನು ನಿರ್ಮಾಣವಾಗಲಿ ಕಾರಣಕರ್ತರಾಗಿರುತ್ತಾರೆ.

***ಆಧುನಿಕ ಸುಳ್ಯದ ನಿರ್ಮಾಪಕರಾಗಿ*:**

1. ಇವರ ನಾಯಕತ್ವದಲ್ಲಿ 1965 ರಲ್ಲಿ ಸುಳ್ಯ ತಾಲೂಕಾಗಿ ರೂಪುಗೊಂಡು, ಸುಳ್ಯದಲ್ಲಿ ಅದರ ಕೇಂದ್ರ ಕಛೇರಿ ಸ್ಥಾಪನೆಗೊಂಡಿತು.

2. ಸುಳ್ಯದಲ್ಲಿ ಸರಕಾರಿ ಉಪಖಜಾನೆ ಸ್ಥಾಪಿಸಲು ಕಾರಣಕರ್ತರಾದರು.

3. ಸುಳ್ಯ ತಾಲ್ಲೂಕು ಕಛೇರಿಗೆ ವಿಶಾಲವಾದ ಕಟ್ಟಡ ನಿರ್ಮಾಣವಾಗಲು ಸಕ್ರೀಯವಾಗಿ ಶ್ರಮಿಸಿದರು.

4. ಅವರ ದೃಢವಾದ ನಾಯಕತ್ವ, ಮತ್ತು ಕೃತು ಶಕ್ತಿಯಿಂದಾಗಿ 1958 ರಲ್ಲಿ ಸುಳ್ಯದಲ್ಲಿ ಅಂದಿನ ಬಸ್ಸು ನಿಲ್ದಾಣ ರೂಪುಗೊಂಡಿತು.

5. 1959ರಲ್ಲಿ ಇವರ ಅಧ್ಯಕ್ಷತೆಯ ಚಾಲನಾ ಸಮಿತಿ ನೇತೃತ್ವದಲ್ಲಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲ್ಪಟ್ಟಿತು.

6. ಸುಳ್ಯಕ್ಕೆ ಪುತ್ತೂರಿನಿಂದ ವಿದ್ಯುತ್‌ಲೈನ್ ಸಂಪರ್ಕ ದೊರಕುವಂತೆ ಮಾಡಲು ಇವರ ಶ್ರಮ ಕಾರಣವಾಯಿತು.

7. ಪೌರ ಸೌಲಭ್ಯಗಳಾದ ನಲ್ಲಿನೀರಿನ ಸೌಲಭ್ಯ, ಒಳಚರಂಡಿ, ಉತ್ತಮ ರಸ್ತೆ, ಅನೇಕ ಸೇತುವೆಗಳು, ಸಾರ್ವಜನಿಕ ಗ್ರಂಥಾಲಯ ಮುಂತಾದವುಗಳನ್ನು ಸುಳ್ಯ ನಗರದಲ್ಲಿ ಅನುಷ್ಠಾನಗೊಳಿಸಲು ಇವರ ಶ್ರಮ ಗಮನಾರ್ಹವಾದುದು.

8. 1979 ರಲ್ಲಿ ಇವರು ಸುಳ್ಯ ನಗರದ ಮುನಿಸಿಪಾಲಿಟಿಯ ಅಧ್ಯಕ್ಷರಾಗಿ ಆಯ್ಕೆಯಾಗಿ - ಸುಳ್ಯಕ್ಕೆ ನಲ್ಲಿನೀರಿನ ವಿಸ್ತೃತ ಯೋಜನೆ, ಉತ್ತಮ ಸಾರಿಗೆ ವ್ಯವಸ್ಥೆ, ಭೂರಹಿತರಿಗೆ ಮನೆ ನಿವೇಶನ ನೀಡುವಿಕೆ, ಇಡೀ ನಗರಕ್ಕೆ ಬೀದಿ ದೀಪಗಳು, ಕಡಿಮೆ ವೆಚ್ಚದ ಮನೆಗಳು ಮುಂತಾದ ಅನೇಕ ಸೌಲಭ್ಯಗಳನ್ನು ಒದಗಿಸಲು ಕಾರಣಕರ್ತರಾದರು.

9. ತನ್ನ ವೈಯಕ್ತಿಕ ದೇಣಿಗೆಯಾಗಿ ರೂ. 14 ಲಕ್ಷವನ್ನು ನೀಡಿ, ಸುಳ್ಯದಲ್ಲಿ ರೂ. 25 ಲಕ್ಷ ವೆಚ್ಚ ಮಾಡಿ ಸುಳ್ಯದ ಪುರಭವನದ ನಿರ್ಮಾಣಕ್ಕೆ ಕಾರಣಕರ್ತರಾಗಿರುತ್ತಾರಲ್ಲದೇ, ಪ್ರಸ್ತುತ ಅದರ ನಿರ್ವಹಣೆಯ ಉಸ್ತುವಾರಿಯನ್ನು ಕೂಡ ಅವರೇ ನೋಡಿಕೊಳ್ಳುತ್ತಿದ್ದಾರೆ.

***ಸಮಾಜದ ಧುರೀಣನಾಗಿ*:**

1. 1954ರಲ್ಲಿ ಪುತ್ತೂರು ತಾಲೂಕಿನ ಅಭಿವೃದ್ಧಿ ಮಂಡಳಿ ಸದಸ್ಯರಾಗಿ ಸೇವೆ.

2. 1956 ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರಾಗಿ ಹಾಗೂ ಸುಳ್ಯದ ಮಂಡಲ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸೇವೆ.

3.1966 ರಲ್ಲಿ ಸುಳ್ಯ ತಾಲೂಕು ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷರಾಗಿ ಸೇವೆ.

4. 1978 ರಲ್ಲಿ ಕರ್ನಾಟಕ ಸರಕಾರ ಇವರನ್ನು 20 ಅಂಶ ಕಾರ್ಯಕ್ರಮಗಳ ದ. ಕ. ಜಿಲ್ಲಾ ಅನುಷ್ಠಾನ ಸಮಿತಿಯ ಸದಸ್ಯರನ್ನಾಗಿ ನೇಮಕಮಾಡಿತು.

5. 1979 ರಲ್ಲಿ ಸುಳ್ಯ ನಗರದ ಮುನಿಸಿಪಾಲಿಟಿಯ ಅಧ್ಯಕ್ಷರಾಗಿ ಕೂಡಾ ಸುಳ್ಯದಲ್ಲಿ ವಿವಿಧ ಧರ್ಮಗಳ ಜನರು ಅತ್ಯಂತ ಶಾಂತಿಯುತ, ಸೌಹಾರ್ದಯುತ ಹಾಗೂ ಸಾಮರಸ್ಯದ ಜನ ಜೀವನ ನಡೆಸುವಲ್ಲಿ ಪ್ರೇರೇಪಣೆ ನೀಡಿರುತ್ತಾರೆ.

6. 1982 ರಿಂದ ದಕ್ಷಿಣ ಕನ್ನಡ ಗೌಡ ವಿದ್ಯಾ ಸಂಘದ ಅಧ್ಯಕ್ಷರಾಗಿ ಶ್ರೀ ಶಾರದಾ ಹೆಮ್ಮಕ್ಕಳ ಪ್ರೌಢಶಾಲೆ, ಶ್ರೀ ಶಾರದಾ ಹೆಮ್ಮಕ್ಕಳ ಪದವಿ ಪೂರ್ವ ಕಾಲೇಜು ಮತ್ತು ಶ್ರೀ ಶಾರದಾ ಹೆಮ್ಮಕ್ಕಳ ಪ್ರಥಮ ದರ್ಜೆ ಕಾಲೇಜು ಮತ್ತು ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪಿಸಿ, ಅವುಗಳಿಗೆ ಅತ್ಯುತ್ತಮ ಕಟ್ಟಡ ಸೌಲಭ್ಯಗಳನ್ನು ಒದಗಿಸಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ.

7. 1987 ರಲ್ಲಿ ನೂರಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಬೆಂಗಳೂರಿನ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾಗಿ 2003 ರ ತನಕ ನಿರಂತರ 16 ವರ್ಷಗಳ ಕಾಲ ಮಾರ್ಗದರ್ಶನ ನೀಡಿರುತ್ತಾರೆ.

***ವೈದ್ಯಕೀಯ ಸೇವೆ*:**

1. 1980 ರಲ್ಲಿ 200 ಹಾಸಿಗೆಗಳುಳ್ಳ ಕೆ. ವಿ. ಜಿ. ಆಸ್ಪತ್ರೆ

ಮತ್ತು ಸಂಶೋಧನಾ ಕೇಂದ್ರವನ್ನು ಅತ್ಯಾಧುನಿಕ ಹೈಟೆಕ್ ಸೌಲಭ್ಯಗಳೊಂದಿಗೆ ಸ್ಥಾಪಿಸಿ ಸುಳ್ಯದ ಹಾಗೂ ಆಸು ಪಾಸಿನ ಗ್ರಾಮೀಣ ಜನರಿಗೆ ಆಧುನಿಕ ಶಸ್ತ್ರ ಚಿಕಿತ್ಸಾ ಘಟಕ, ಎಕ್ಸರೇ ಘಟಕ, ಇಂಕ್ಯುಬೇಟರ್, ರೇಡಿಯೋಲಜಿ, ಅಲ್ಟ್ರಾ ಸೌಂಡ್ ಒದಗಿಸಿಕೊಟ್ಟಿರುತ್ತಾರೆ.

2 ಗ್ರಾಮೀಣ ಜನರ ಬಾಗಿಲಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವವರೇ 4 ಸಂಚಾರಿ ವೈದ್ಯಕೀಯ ಘಟಕಗಳನ್ನು ಸ್ಥಾಪಿಸಿ, ಸುಳ್ಯ, ಪುತ್ತೂರು, ಕೊಡಗು ಮತ್ತು ಕಾಸರಗೋಡಿನ 105 ಗ್ರಾಮಗಳ ಸುಮಾರು 1 ಲಕ್ಷ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಕಾರಣ ಕರ್ತರಾಗಿರುತ್ತಾರೆ.

3. ಗ್ರಾಮೀಣ ದಂತ ಚಿಕಿತ್ಸಾಲಯ ಘಟಕಗಳನ್ನು ಸುಳ್ಯ ತಾಲೂಕಿನಾದ್ಯಂತ ಸ್ಥಾಪಿಸಿ ಸುಮಾರು 25 ಸಾವಿರ ದಂತ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಕಾರ್ಯಕ್ರಮವನ್ನು ಪ್ರಾಯೋಜಿಸಿರುತ್ತಾರೆ.

4. 1994 ರಲ್ಲಿ ಇವರು ಸ್ಥಾಪಿಸಿದ ದಂತ ಮಹಾ ವಿದ್ಯಾಲಯದ ಸಹಯೋಗದಿಂದ 200 ಆಧುನಿಕ ದಂತ ಚಿಕಿತ್ಸಾ ಆಸನ (Dental Chairs) ಗಳುಳ್ಳ ದಂತ ವೈದ್ಯಕೀಯ ಸೌಲಭ್ಯವನ್ನು ಸುಳ್ಯ ಮತ್ತು ಆಸುಪಾಸಿನ ಬಡರೋಗಿಗಳಿಗೆ ಉಚಿತವಾಗಿ ಒದಗುವಂತೆ ಮಾಡಿರುತ್ತಾರೆ.

5. 2002 ರಲ್ಲಿ ಸ್ಥಾಪನೆಗೊಂಡ ವೈದ್ಯಕೀಯ ಕಾಲೇಜಿಗಾಗಿ 2000 ದಲ್ಲಿ ರೂಪುಗೊಂಡ 500 ಹಾಸಿಗೆಗಳ ಅತ್ಯಾಧುನಿಕ ಕುರುಂಜಿಬಾಗ್‌ನಲ್ಲಿ ಯಶಸ್ವಿಯಾಗಿ ಕಾರ್ಯಾಚರಿಸುತ್ತಿದೆ.

6. ಸುಳ್ಯ ತಾಲೂಕಿನ ಅನೇಕ ಕಡೆ ವೈದ್ಯಕೀಯ ಸೇವಾ ಕೇಂದ್ರಗಳನ್ನು ಸ್ಥಾಪಿಸಿ ಅವುಗಳ ಮೂಲಕ ಗ್ರಾಮೀಣ ಜನರಿಗೆ ಆಲೋಪೆಥಿಕ್, ಆಯುರ್ವೇದಿಕ್ ಮತ್ತು ದಂತ ಚಿಕಿತ್ಸಾ ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಸಾಹಿತ್ಯ ಮತ್ತು ಸಾಂಸ್ಕೃತಿಕ ಸೇವೆಗಳು :

1.1969ರಲ್ಲಿ ಸುಳ್ಯದ ಕಲೆ ಮತ್ತು ಕ್ರೀಡಾ ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡರು.

2. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಪದ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಸುಳ್ಯದಲ್ಲಿ ಶ್ರೀ ರಾಜರಾಜೇಶ್ವರಿ ಹೆಮ್ಮಕ್ಕಳ ಯಕ್ಷಗಾನ ಕಲಾ ಸಂಘವನ್ನು ಸ್ಥಾಪಿಸಿ ಅಧ್ಯಕ್ಷರಾಗಿ ಆಯ್ಕೆಗೊಂಡರು. ಮುಂದೆ ಅದು ಕರ್ನಾಟಕದಾದ್ಯಂತ ಅನೇಕ ಯಕ್ಷಗಾನ ಪ್ರದರ್ಶನಗಳನ್ನು ನೀಡಿತು.

3. ಮಂಗಳೂರು ವಿಶ್ವ ವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಆಶ್ರಯದಲ್ಲಿ ಹತ್ತು ದಿನಗಳ ಅಖಿಲ ಭಾರತ ರಾಷ್ಟ್ರೀಯ ಭಾವೈಕ್ಯ ಶಿಬಿರವನ್ನು ಏರ್ಪಡಿಸಲು ನೇತೃತ್ವವನ್ನು ವಹಿಸಿದರು.

4. ದಕ್ಷಿಣ ಕನ್ನಡ ಜಿಲ್ಲಾ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ 'ಅಕ್ಷಯ' ಸ್ಮರಣ ಸಂಚಿಕೆಯನ್ನು ಹೊರತಂದು ಸಮ್ಮೇಳನದ ಅಪೂರ್ವ ಯಶಸ್ಸಿಗೆ ಕಾರಣರಾದರು.

5. ಸುಳ್ಯ ತಾಲೂಕಿನಾದ್ಯಂತ 'ರಂಗ ಮಂದಿರಗಳ' ಕಾಮಗಾರಿಗೆ ಉದಾರವಾಗಿ ಧನಸಹಾಯ ನೀಡಿದರು.

6. ಇವರ ನೇತೃತ್ವದಲ್ಲಿ ಸುಳ್ಯದಲ್ಲಿ ವಿಭಾಗಮಟ್ಟದ, ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಅನೇಕ ಯುವಜನ ಮೇಳಗಳನ್ನು ಏರ್ಪಡಿಸಲಾಯಿತು.

7. ಅನೇಕ ಕನ್ನಡ ಮತ್ತು ಆಂಗ್ಲ ಭಾಷಾ ಪುಸ್ತಕಗಳ ಪ್ರಕಟಣೆಗೆ ಪೋಷಕರಾಗಿದ್ದಾರೆ.

ಆದರ್ಶ ವ್ಯಕ್ತಿಯಾಗಿ :

1. ಇವರು ಎಲ್ಲಾ ಸದ್ಗುಣಗಳ ಆಗರ ಮತ್ತು ಎಲ್ಲರೂ ಅನುಸರಿಸಬೇಕಾಗುವ ಮಾನವೀಯ ಗುಣಗಳನ್ನು ಹೊಂದಿರುವರು. ಮದ್ಯಪಾನ, ಧೂಮಪಾನ, ನಶ್ಯ ಸೇವನೆ, ಪಾನ್ ಬೀಡಾ ಸೇವನೆ ಮೊದಲಾದ ದುರಭ್ಯಾಸಗಳನ್ನು ಯಾವುದೇ ವಿಧದಲ್ಲಿ ಉಪಯೋಗಿಸದಿರುವ ಇವರು ಇದರ ನಿಷೇಧಕ್ಕಾಗಿ ನಿರಂತರವಾಗಿ ಸಮಾಜಕ್ಕೆ ಕರೆ ನೀಡುತಿದ್ದಾರೆ.

2. ನಿರಂತರ ಮಿತವ್ಯಯದ ಪಾಲನೆಗೆ ಇವರು ವಿಶೇಷ ಮಹತ್ವ ನೀಡುತ್ತಿದ್ದಾರೆ. ಅನಗತ್ಯ ಖರ್ಚುವೆಚ್ಚಗಳನ್ನು ಇವರು ಸಹಿಸಲಾರರು. ಇವರು ದುಂದುವೆಚ್ಚದ ವಿರೋಧಿ. ಇವರು ಅತ್ಯಂತ ಸರಳ ಜೀವಿಯಾಗಿ ವೈಭವೋಪೇತ ಜೀವನಕ್ಕೆ ಒಲವು ತೋರಿಸದವರು.

3. ಕಠಿಣ ದುಡಿಮೆ, ಏಕಾಗ್ರತೆ, ಪ್ರಾಮಾಣಿಕತೆ, ಸಮಯದ ಬೆಲೆ ಮತ್ತು ತ್ಯಾಗಮಯ ಮನೋಭಾವಗಳೆಂಬ 'ಪಂಚ ಸೂತ್ರ'ಗಳನ್ನು ಪಾಲಿಸಲು ಇವರು ಯುವ ಜನಾಂಗಕ್ಕೆ ಕರೆ ನೀಡುತ್ತಾರೆ.

4. ಭದ್ರ ಭವಿಷ್ಯಕ್ಕಾಗಿ ಉಳಿತಾಯದ ಮನೋಭಾವವನ್ನು ಇವರು ಸದಾ ಪ್ರತಿಪಾದಿಸುವವರಾಗಿರುತ್ತಾರೆ.

5. ಇವರೊಬ್ಬ ಸ್ವಯಂಕೃತ ಇಂಜಿನಿಯರ್ ತನ್ನ ವಿದ್ಯಾ ಸಂಕೀರ್ಣದ ಎಲ್ಲಾ ಭವ್ಯ ಸೌಧಗಳ ಸ್ವಯಂ ಶಿಲ್ಪಿ.

6. ಇವರು ಎಲ್ಲರಿಗೂ ಮಾರ್ಗದರ್ಶಿ ಮತ್ತು ಹಿತೈಸಿ. ಎಲ್ಲರನ್ನೂ ಸೌಜನ್ಯತೆಯಿಂದ ಕಾಣುವ ಹಾಗೂ ಮಾತನಾಡಿಸುವ ಇವರು ಓರ್ವ ಮಹಾನ್ ಮಾನವತಾವಾದಿ.

ಮಾದರಿ ಕೃಷಿಕನಾಗಿ :

1. ಸುಳ್ಯ ತಾಲೂಕಿನಲ್ಲಿಯೇ ಆಧುನಿಕ ಅತೀ ವಿಸ್ತಾರವಾದ ವೈಜ್ಞಾನಿಕ ಹಾಗೂ ಸುಧಾರಿತ ಅಡಿಕೆ ಬೆಳೆಯ ಕೃಷಿಕರಲ್ಲಿ ಪ್ರಥಮರು ಹಾಗೂ ವರ್ಷಕ್ಕೆ ಸುಮಾರು ಒಂದು ಸಾವಿರ ಟನ್ ಅಡಿಕೆ ಉತ್ಪಾದನೆ ಮಾಡಿದವರಲ್ಲಿ ಮೊದಲಿಗರು.

2. ಸುಳ್ಯದಲ್ಲಿ ಮಾದರಿ ತೆಂಗಿನ ತೋಟವನ್ನು ರೂಪಿಸಿದವರು.

3. ಕೋ. ಕೋ. ಬೆಳೆ, ಕಾಳುಮೆಣಸು, ಗೋಡಂಬಿ, ಬಾಳೆ ಕೃಷಿಗಳಿಗೆ ಮಹತ್ವ ನೀಡುತ್ತಿದ್ದಾರೆ.

4. ಅವರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳಿಗೆ ಕೃಷಿಯೇ ಆಧಾರವಾಗಿರುವುದು ಉಲ್ಲೇಖನೀಯ.

ಗುರಿಯನ್ನು ತಲುಪಬೇಕಾದರೆ ಧಗಧಗನೆ ಉರಿಯುವ ಜ್ವಾಲೆಯಂತಹ ಇಚ್ಛೆಯೊಂದಿಗೆ ದುಡಿಯಬೇಕು.

ಬಂಧುತ್ವ ಮೆರೆಸಿದ ಬಾಂಧವ್ಯ ದಿನಾಚರಣೆ.

ಕುರುಂಜಿ ಹುಟ್ಟು ಹಬ್ಬದಲ್ಲಿ ಕೊಡಗು ಗೌಡರು.

ಕೊಡುಗೈ ದಾನಿ, ವಿದ್ಯಾದಾನಿ, ಸಮಾಜಸೇವಕ, ಆಧುನಿಕ ಸುಳ್ಯದ ನಿರ್ಮಾಪಕ, ತನ್ನ ಸಾಧನೆಯ ಮೂಲಕ ಇಡೀ ಜಗತ್ತಿನ ಗಮನವನ್ನೇ ತನ್ನತ್ತ ಸೆಳೆದಿರುವ ಅವಿರತ ದುಡಿಮೆಗಾರ, ಕೊಡಗಿನ ಅಳಿಯ ಶ್ರೀ ಕುರುಂಜಿ ವೆಂಕಟ್ರಮಣಗೌಡರಿಗೆ 75ಹೊಸ್ತಿಲಲ್ಲಿ ನಡೆದ ಅಮೃತಮಹೋತ್ಸವ, ಅಬಿನಂದನಾ ಸಮಾರಂಭದಲ್ಲಿ ಕೊಡಗಿನಗೌಡ ಜನಾಂಗ ಬಹು ಉತ್ಸಾಹದಿಂದ ಪಾಲ್ಗೊಂಡಿತ್ತು. ಡಿಸಂಬರ್ 25 ರಂದು ಗೌಡ ಬಾಂಧವರಿಗಾಗಿಯೇ ಏರ್ಪಡಿಸಿದ್ದ ಬಾಂಧವ್ಯ ದಿನಾಚರಣೆಗಾಗಿ ಅಂದು ಬೆಳಗ್ಗಿನಿಂದಲೇ ಗೌಡ ಸಮಾಜದ ಆಶ್ರಯದಲ್ಲಿ ನೂರಾರು ವಾಹನಗಳಲ್ಲಿ ಸಹಸ್ರಾರು ಗೌಡ ಬಾಂಧವರು ಸುಳ್ಯಕ್ಕೆ ಪ್ರಯಾಣ ಬೆಳೆಸಿ ಸಮಾಜ ಸೇವಕನಿಗೆ ಅಭಿನಂದನೆ ಹೇಳಿದರು.

ಗೌಡ ಸಮಾಜದ ಅಧ್ಯಕ್ಷ ಪೈಕೆರ ಅನಂತರಾವ್, ಉಪಾಧ್ಯಕ್ಷ ಪೇರಿಯನ ಜಯಾನಂದ, ಕಾರ್ಯದರ್ಶಿ ಕೋಳುಮುಡಿಯನ ಅನಂತಕುಮಾರ್, ಗೌಡ ವಿದ್ಯಾಸಂಘದ ಅಧ್ಯಕ್ಷ ಹೊಸೂರು ರಮೇಶ್ ಜೋಯಪ್ಪ, ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತಜಿ ಗಣೇಶ್, ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಚೀಯಂಡಿ ರಾಧಯಾದವ್, ಗೌಡ ಮಾಜಿ ನೌಕರರ ಸಂಘದ ಅಧ್ಯಕ್ಷ ಸೂದನ ನಾಣಯ್ಯ, ಮರಗೋಡು ಗೌಡ ಸಮಾಜ ಅಧ್ಯಕ್ಷ ಪುಳಕಂಡ್ರ ಮುತ್ತಪ್ಪ, ಅಲ್ಲದೆ ಭಾಗಮಂಡಲ, ಮೂರ್ನಾಡು, ಪಾರಾಣೆ, ವಿರಾಜಪೇಟೆ, ಪಿರಿಯಾಪಟ್ಟಣಗಳ ಗೌಡ ಸಮಾಜಗಳ ಪದಾಧಿಕಾರಿಗಳೂ ಸಹ ತಮ್ಮ ತಮ್ಮ ಸಂಘಟನೆಗಳ ಪರವಾಗಿ ಗೌಡರಿಗೆ ಹೂ ಹಾರ ಅರ್ಪಿಸಿ ಹುಟ್ಟು ಹಬ್ಬದ ಶುಭಾಶಯ ಕೋರಿದರು. ಮದೆ ಮಹೇಶ್ವರ ವಿದ್ಯಾಲಯದ ಪರವಾಗಿ ಸಂಚಾಲಕರಾದ ಹುದೇರಿ ರಾಜೇಂದ್ರರವರು ಹಾರಾರ್ಪಣೆ ಮಾಡಿದರು.

ಸುಳ್ಯಕ್ಕೆ ಜಾತ್ರೆಯ ಮೆರಗು : ಹಳ್ಳಿಯ ರೂಪದಲ್ಲಿದ್ದ ಸುಳ್ಯವನ್ನು ಆಧುನಿಕ ನಗರದ ಸ್ವರೂಪಕ್ಕೆ ತಂದು, ಅದರ ಹೆಸರನ್ನೂ ಜಗತ್ತಿಗೇ ಪರಿಚಯಿಸಿದ ಆಧುನಿಕ ಸುಳ್ಯದ ಹರಿಕಾರ ವೆಂಕಟ್ರಮಣಗೌಡರ ಹುಟ್ಟು ಹಬ್ಬಕ್ಕಾಗಿ ಇಡೀ ಸುಳ್ಯವೇ ತಳಿರು ತೋರಣಗಳಿಂದ ಶೃಂಗರಿಸಿಕೊಂಡಿತ್ತು. ಎತ್ತ ನೋಡಿದರತ್ತ ವೆಂಕಟ್ರಮಣಗೌಡರಿಗೆ ಶುಭ ಕೋರುವ ಬ್ಯಾನರ್‌ಗಳೇ ಎದ್ದು ಕಾಣುತ್ತಿದ್ದವು. ರಾಷ್ಟ್ರ ಮತ್ತು ರಾಜ್ಯ ಮಟ್ಟದ ಹಲವು ಪ್ರಮುಖ ರಾಜಕೀಯ ನಾಯಕರು ಸಮಾರಂಭದಲ್ಲಿ ಪಾಲ್ಗೊಂಡಿದ್ದರಿಂದ ವಿವಿಧ ರಾಜಕೀಯ ಪಕ್ಷಗಳ ಬಾವುಟ, ಬ್ಯಾನರ್‌ಗಳೂ ಸುಳ್ಯವನ್ನೂ ಶೃಂಗರಿಸಿದ್ದರಿಂದ ಸುಳ್ಯದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಸಂಜೆಯಾಗುತ್ತಲೇ, ಕುರುಂಜಿ ಕ್ಯಾಂಪಸ್‌ನಲ್ಲಿ ಅಡ್ಡಾಡಿದರೆ ಮೈಸೂರು ದಸರಾದಲ್ಲಿ ಅರಮನೆಯ ಮುಂದೆ ಹಾದು ಹೋದಂತಹ ಅನುಭವ ಮೂಡುತ್ತಿತ್ತು. ವಿದ್ಯುದಾಲಂಕೃತವಾದ ವಿದ್ಯಾಲಯದ ಕಟ್ಟಡಗಳು ನೋಡುಗರ ಕಣ್ಮನ ಸೆಳೆಯುತ್ತಿದ್ದವು.

ಮನರಂಜಿಸಿದ ಮನೋರಂಜನಾ ಕಾರ್ಯಕ್ರಮ :

ಸುಮಾರು ಹತ್ತು ಸಾವಿರ ಆಸನಗಳನ್ನು ಹೊಂದಿದ ಬೃಹತ್ ಸಭಾಂಗಣ, ಅದಕ್ಕೆ ಮೆರಗು ನೀಡಬಲ್ಲ ವಿಶಾಲವೇದಿಕೆ. ಆ ವೇದಿಕೆಯ ಮೇಲಿನಿಂದ, ಸಂಜೆಯಾಗುತ್ತಲೇ ಆರಂಭವಾಗುವ ಸಾಂಸ್ಕೃತಿಕ ಕಾರ್ಯಕ್ರಮಗಳು ಸೂಜಿಗಲ್ಲಿನಂತೆ ಸಭಿಕರನ್ನು ತನ್ನತ್ತ ಸೆಳೆಯುತ್ತಿದ್ದವು. ಸಹಸ್ರ ಸಹಸ್ರ ಜನ ತದೇಕಚಿತ್ತದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಿ ಆನಂದಿಸುತ್ತಿದ್ದರು. ಕೊಡಗಿನಿಂದ ಸಾಗಿದ ಕೊಡಗು ಗೌಡ ಮಹಿಳಾ ಒಕ್ಕೂಟ ಮತ್ತು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಸದಸ್ಯರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ನೀಡಿದರು. ಅತ್ಯಂತ ಸುಂದರವಾಗಿ ನೃತ್ಯ ಪ್ರದರ್ಶನ ನೀಡುತ್ತಿದ್ದ ಕೊಡಗಿನ ಯುವತಿಯರ ಹೆಜ್ಜೆಗೆ, ಸಭಿಕರು ಚಪ್ಪಾಳೆ ತಟ್ಟಿ, ಹರ್ಷ ವ್ಯಕ್ತಪಡಿಸುತ್ತಿದ್ದರು.

ಆತ್ಮೀಯತೆ ಮೆರೆದ ವೆಂಕಟ್ರಮಣ ಗೌಡರು :

ಕೊಡಗಿನ ಅಳಿಯ ವೆಂಕಟ್ರಮಣ ಗೌಡರು, ತಮ್ಮ ಹುಟ್ಟು ಹಬ್ಬಕ್ಕೆ ಸಾಗರದೋಪಾದಿಯಲ್ಲಿ, ಸೈನ್ಯೋದೋಪಾದಿಯಲ್ಲಿ ಆದರೆ ಶಿಸ್ತು ಬದ್ಧವಾಗಿ ಮೆರವಣಿಗೆಯಲ್ಲಿ ಆಗಮಿಸುತ್ತಿರುವ, ಕೊಡಗು ಗೌಡ ಬಂಧುಗಳನ್ನೂ ಕಾಣುತ್ತಿದ್ದಂತೆ, ವೇದಿಕೆಯಲ್ಲಿ ಎದ್ದು ನಿಂತು ಸ್ವಾಗತ ಕೋರಿದಾಗ, ಭಾವುಕರಾದಂತೆ ಕಂಡು ಬಂದರು. ಕೊಡಗು ಗೌಡ ಜನಾಂಗವನ್ನು ಉದ್ದೇಶಿಸಿ ಮಾತನಾಡು ವಾಗಲೂ ಒಮ್ಮೆ ಅತ್ಯಂತ ಭಾವುಕತೆಯಿಂದ ತನ್ನ ಸಹಕಾರವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕರೆ ನೀಡಿದರು. ಸಂಜೆಯ ಹೊತ್ತಿನಲ್ಲಿ ಕೊಡಗು ಗೌಡರ ಸಾಂಪ್ರದಾಯಿಕ ವಾಲಗ ಕುಣಿತವನ್ನು ನೋಡಬೇಕೆಂಬ ಅಪೇಕ್ಷೆ ವ್ಯಕ್ತಪಡಿಸಿ, ಅದಕ್ಕೆ ಅವಕಾಶ ನೀಡಿ, ಕುಣಿತ ನೋಡಿ ಸಂತೋಷಪಟ್ಟರು. ಒಟ್ಟಿನಲ್ಲಿ ವೆಂಕಟ್ರಮಣ ಗೌಡರು ಕೊಡಗು ಗೌಡರೊಂದಿಗೆ ಆತ್ಮೀಯ ಪ್ರೀತಿಯನ್ನು ಹಂಚಿಕೊಂಡರು.

ಇಂತಹ ಬೃಹತ್ ಕಾರ್ಯಕ್ರಮ ರೂಪಿಸಲು ಕೊಡಗಿನಲ್ಲಿ ಸಾಧ್ಯವೇ? ಕುರುಂಜಿ ಬಾಗ್‌ನಲ್ಲಿದ್ದ ವ್ಯವಸ್ಥೆ ಬಹಳ ಅಚ್ಚುಕಟ್ಟಾಗಿತ್ತು. ಅಲಂಕಾರ, ಸ್ವಾಗತ, ಊಟದ ವ್ಯವಸ್ಥೆ, ಮಾರ್ಗದರ್ಶನ, ವಸ್ತು ಪ್ರದರ್ಶನ ಎಲ್ಲವೂ ಶಿಸ್ತುಬದ್ಧವಾಗಿತ್ತು. ಅಷ್ಟೊಂದು ಸಂಖ್ಯೆಯಲ್ಲಿ ಜನ ಸೇರಿದ್ದರು. ಎಲ್ಲೂ ಅಹಿತಕರ ಘಟನೆಗಳಿಗೆ ಆಸ್ಪದವಿರಲಿಲ್ಲ. ಈ ವಿಚಾರದಲ್ಲಿ ವೆಂಕಟ್ರಮಣಗೌಡರೊಂದಿಗೆ ಇಡೀ ಸುಳ್ಯದ ಜನತೆ ಅಭಿನಂದನೆಗೆ ಅರ್ಹರು. ಆದರೆ ಕೊಡಗಿನಲ್ಲಿ ಇಂತಹ ಕಾರ್ಯಕ್ರಮವನ್ನು ಆಯೋಜಿಸುವುದು ಸುಲಭವಲ್ಲ. ಜನರೂ ಅಷ್ಟೇ ಜನ ನಾಯಕರೂ ಅಷ್ಟೆ, ತಮ್ಮ ಸ್ವಾರ್ಥ ಸಾಧಿಸಲು ಪ್ರಯತ್ನಿಸುವವರೇ ಹೆಚ್ಚು. ಕೊಡಗಿನಿಂದ ಸುಳ್ಯಕ್ಕೆ ಹೋಗುವಾಗ ಮೆರವಣಿಗೆಯೋಪಾದಿಯಲ್ಲಿ ಕೊಡಗಿನಿಂದಲೇ ಸಾಗಬಹುದಿತ್ತು. ನೂರಾರು ವಾಹನಗಳು ಸರತಿ ಸಾಲಿನಲ್ಲಿ ಸಾಗುತ್ತಿದ್ದರೆ, ಮುಂಚೂಣಿಯಲ್ಲಿ ಧ್ವನಿವರ್ಧಕದಿಂದ ಗೌಡರಗುಣಗಾನ ನಡೆಯುತ್ತಿದ್ದರೆ, ನಾವೂ ಆ ಮೆರವಣಿಗೆಯಲ್ಲಿ ಪಾಲ್ಗೊಳ್ಳಬೇಕಿತೆಂಬ ಬಯಕೆ ಪ್ರತಿಯೊಬ್ಬರಲ್ಲೂ ಬರುತ್ತಿತ್ತು. ಇದು ಇಂದಲ್ಲ ನಾಳೆಗಾದರೂ, ಜನ ಸಂಘಟನಗೆ ಉಪಕಾರಿಯಾಗುತ್ತಿತ್ತು. ಆದರೆ ಕೆಲವು ಪ್ರಮುಖರೆನಿಸಿಕೊಂಡವರು ತಮ್ಮ ಪ್ರತಿಷ್ಠೆಗಾಗಿ ಸುಳ್ಯದ ಕಡೆಗೆ ತೆರಳಿದರೇ ಹೊರತು ಜನ ಸಂಘಟನೆಯ ಬಗ್ಗೆ ಕಾಳಜಿ ವಹಿಸಲೇ ಇಲ್ಲ. ದುರಲೋಚನೆಗೆ ಬದಲಾಗಿ ದೂರಾಲೋಚನೆ ತುಂಬಿಕೊಂಡರೆ ಕಾರ್ಯಕ್ರಮ ಹೇಗೆ ಸಾಧ್ಯ?

-ಪಟ್ಟಡ ಶಿವಕುಮಾರ್

ಒಬ್ಬನ ಗುರಿಯರಿತು ಅವನ ವ್ಯಕ್ತಿತ್ವ ಅಳೆಯಬಹುದು

ಋಷಿ ಮೂಲ ನೋಡಬೇಡ

"ನದಿ ಮೂಲ ಮತ್ತು ಋಷಿ ಮೂಲವನ್ನು ನೋಡಬೇಡ' ಎಂಬೊಂದು ಗಾದೆ ಪ್ರಚಲಿತದಲ್ಲಿದೆ. ಪಶ್ಚಿಮ ಘಟ್ಟದ ಭಾಗವಾದ ಬಂಟಮಲೆಯಲ್ಲಿ ಜನಿಸಿದ ನನಗೆ 'ನದಿಮೂಲ' ನೋಡುವ ಅವಕಾಶ ಒದಗಿ ಬಂದಾಗ ನಾನು ಅದನ್ನು ಬಿಡದೆ, ಹಠ ಬಿಡದ ತ್ರಿವಿಕ್ರಮನಂತೆ ಗೆಳೆಯರೊಡನೆ ಸಂಶೋಧನೆಗೆ ಹೊರಟಿದ್ದೆ. ಪ್ರಖ್ಯಾತ ಯಾತ್ರಾಸ್ಥಳ ಸುಬ್ರಹ್ಮಣ್ಯದಲ್ಲಿ ಹರಿಯುವ ಪವಿತ್ರ ನದಿ "ಕುಮಾರ ಧಾರೆ'ಯ ಮೂಲ ಹಿಡಿದು ನಮ್ಮ ಪಯಣ ಅದು ನಮ್ಮನ್ನು ಬಿಸಿಲೆ ಘಟ್ಟದ ಬುಡಕ್ಕೊಯ್ದು ಮುಂದೆ ಬತ್ತದ ರಾಶಿ ಗುಡ್ಡದ ಕಡೆಗೆ ಎಳೆದೊಯ್ದಿತು. ಮುಂದೆ ಮುಂದೆ ಅಂದರೆ ನದಿಯ ಬುಡದ ಕಡೆಗೆ ಸಾಗುತ್ತಿದ್ದಂತೆ ನದಿಯೇನೋ? ಕಿರಿದಾಗುತ್ತಾ ಹೋಯಿತು. ಇನ್ನೇನು ಕುಮಾರಧಾರಾ ಹುಟ್ಟಿದ ಜಾಗಕ್ಕೆ ಬಂದೆವು ಎಂದುಕೊಂಡಾಗ ನದಿಯೇ ಮಟಾ ಮಾಯ! ಇದೇನು? ನದಿಯೇ ಇಲ್ಲವಲ್ಲಪ್ಪ ಎಂದುಕೊಂಡಾಗ ಎಲ್ಲೋ ಒಂದೆಡೆ ತೊರೆ ಹುಟ್ಟಿ ಬಂದಂತೆ ಕಂಡಿತು. ಅಲ್ಲಿ ಹೋದರೆ ಅದೂ ಇಲ್ಲ. ಹುಚ್ಚರಂತೆ ಹಸಿಮಣ್ಣಿನಲ್ಲಿ ಅಡಿಡ್ಡಾಡಿ, ನದಿಮೂಲ ನೋಡಿಯೂ ನೋಡದಂತೆ ಹಿಂದಿರುಗಿ ಬಂದದ್ದು ಈಗ ಬರೇ ನೆನಪು.

ಕಳೆದ ಒಂದೆರಡು ವರ್ಷಗಳಲ್ಲಿ ನಾನು ತೀರಾ ಅಸೌಖ್ಯಕ್ಕೊಳಗಾಗಿ, ಸಾವಿನ ಕದ ತಟ್ಟಿ ಹಿಂದೆ ಬಂದಿದ್ದೇನೆ. ಆ ಹೊತ್ತಿನಲ್ಲಿ ನಾನು ಕೆಲವಾದರೂ ಪುಸ್ತಕಗಳನ್ನು ಓದಲು ಪ್ರಯತ್ನಿಸಿದ್ದೇನೆ. ಟಿ. ವಿ.ಯಲ್ಲಿ ಕೆಲವು ಸಂತರು ಮಾಡುವ ಪ್ರವಚನಗಳನ್ನು ಆಲಿಸಿ ಮನಸ್ಸಿಗೆ ಸಮಾಧಾನಪಟ್ಟುಕೊಳ್ಳಲು ಹೆಣಗಾಡಿದ್ದೇನೆ. ಆದರೆ ನಿಮಗೆಲ್ಲಾ ತಿಳಿದೇ ಇದೆ, ಶಾಂತಿಗಾಗಿ ಪರಿತಪಿಸಿದ್ದಷ್ಟೂ ಅಶಾಂತಿಯೇ ಸಿಗುತ್ತದೆ. ಮನಸ್ಸಿನ ಸಮಾಧಾನಕ್ಕಾಗಿ ನಡೆಸಿದ ಪ್ರಯತ್ನಗಳು ಅಸಮಾಧಾನವನ್ನೇ ಒಟ್ಟು ಹಾಕುತ್ತವೆ. ಮಹಾಕವಿ ಕುವೆಂಪು ಹೇಳಿದಂತೆ 'ವಿಧಿಯ ತಿದ್ದಲು ನಾವು ಗೆಯ್ಯ ಪ್ರಯತ್ನವೇ ತಳ್ಳುವುದು ನಮ್ಮ ನಾ ವಿಧಿಯ ಒಡ್ಡಿದ ಬಲೆಗೆ' ಹೀಗೆ ಸಾವಿನ ಹೊಸ್ತಿಲಲ್ಲಿ ನನ್ನನ್ನುಬಾಧಿಸಿದ ಹಲವು ಸಂಗತಿಗಳಲ್ಲಿ ಋಷಿಮೂಲವೂ ಒಂದು, ಮಹಾತ್ಮಕ ಮೂಲಗಳು ಹೀಗೇಕೆ ನಿಗೂಢವಾಗಿವೆ ಎಂಬುದರ ಕುರಿತು ನನ್ನಲ್ಲಿ ಉತ್ತರವೇನೂ ಇಲ್ಲ. ಪಾಂಡವರ ಉಗಮದ ಕತೆ ನಿಮಗೆ ತಿಳಿದಿರಬೇಕು. ಕುಂತಿಯು ಸೂರ್ಯಮಂತ್ರವನ್ನು ಪಠಿಸಿ ಕರ್ಣನಿಗೆ ಜನ್ಮ ಕೊಟ್ಟಳು. ಆನಂತರ ಸೂರ್ಯನ ಮಗನಾದ ಯಮನನ್ನು ಆರಾಧಿಸಿ, ಧರ್ಮರಾಯನನ್ನು ಹೆತ್ತಳು. ಇದು ಹೇಗೆ ಸಾಧ್ಯ? ಅಪ್ಪನೂ ಮಗನೂ ಒಂದೇ ಹೆಣ್ಣಿನಿಂದ ಮಕ್ಕಳನ್ನು ಪಡೆದರೆ?

ದೇವಾಧಿದೇವತೆಗಳಿಗೆ ಗುರುವೆಂದರೆ ಬೃಹಸ್ಪತಿ, ಮಹಾಜ್ಞಾನಿ, ಇವನ ಅಣ್ಣ ಉಚಥ್ಯ. ಉಚಥ್ಯನ ಪತ್ನಿ ಮಮತಾದೇವಿ. ಮಮತಾದೇವಿ ಗರ್ಭಿಣಿಯಾಗಿದ್ದಾಗ ಬೃಹಸ್ಪತಿಗೆ ಆಕೆಯನ್ನು ಕೂಡಬೇಕೆಂದು ಮನಸ್ಸಾಗುತ್ತದೆ. ಮಮತಾ ನಾನು ನಿನ್ನ ಅಣ್ಣನ ಹೆಂಡತಿ. ಮೇಲಾಗಿ ಗರ್ಭಿಣಿ. ನಿನ್ನ ಬೇಡಿಕೆ ತರವಲ್ಲ' ಎಂದು ಬೇಡಿಕೊಳ್ಳುತ್ತಾಳೆ. ಹೊಟ್ಟೆಯಲ್ಲಿರುವ ಮಗವೂ ಪರಿ ಪರಿಯಾಗಿ ವಿನಂತಿಸಿಕೊಳ್ಳುತ್ತದೆ. ಕೋಪಗೊಂಡ ಬೃಹಸ್ಪತಿಯು ಗರ್ಭದಲ್ಲಿರುವ ಮಗು ಕುರುಡಾಗುವಂತೆ ಶಪಿಸಿದ. ಹಾಗೆ ಹುಟ್ಟಿದ 'ದೀರ್ಘ ತಮಸ್"ನು ಮುಂದೆ ಬಹು ದೊಡ್ಡ ಜ್ಞಾನಿಯಾಗಿ ಬೆಳೆದ. ಬೃಹಸ್ಪತಿಗೂ ಅಣ್ಣನ ಹೆಂಡತಿಯಲ್ಲಿ ಮಗು ಹುಟ್ಟಿತು. ಆತನೇ ಮಹಾ ಮುನಿ 'ಭರದ್ವಾಜ". ಆಚಾರ್ಯ ಬೃಹಸ್ಪತಿಗಳ ಕಾರುಭಾರ ಇಷ್ಟಕ್ಕೇ ನಿಲ್ಲುವುದಿಲ್ಲ. ಅವರು ರಾಕ್ಷಸ ಗುರು ಶುಕ್ರಾಚಾರ್ಯರ ವೇಷ ಧರಿಸಿ, ರಾಕ್ಷಸರಿಗೆ ನಾಸ್ತಿಕ ವಾದವನ್ನು ಬೋಧಿಸುತ್ತಾರೆ. ಈ ಎಡೆಯಲ್ಲಿ ಬೃಹಸ್ಪತ್ಯಾಚಾರ್ಯರ ಹೆಂಡತಿ ತಾರೆಯು ಚಂದ್ರನೊಡನೆ ಮಲಗಿ, ಬುಧನನ್ನು ಹೆತ್ತಳು!ಆಗ ಚಂದ್ರನು ಬೃಹಸ್ಪತಿಗಳಲ್ಲಿ ಶಿಷ್ಯವೃತ್ತಿಯನ್ನು ಅಂಗೀಕರಿಸಿದ್ದ.

ತಾಯ ಗರ್ಭದಲ್ಲಿರುವಾಗಲೇ ಕುರುಡನಾಗಿದ್ದ ದೀರ್ಘ ತಮಸ್ ಪುದ್ವೇಷಿಣಿ ಎಂಬವಳನ್ನು ಮದುವೆಯಾದ. ದೀರ್ಘ ತಮಸ್ಸನ ಉಪಟಳಕ್ಕೆ ಹೇಸಿದ ಆಕೆ ತನ್ನ ಮಕ್ಕಳ ಸಹಾಯದಿಂದ ದೀರ್ಘತಮಸ್ಸನ್ನು ಹೊಳೆಗೆ ಹೊತ್ತು ಹಾಕುತ್ತಾಳೆ. ಚಂದ್ರವಂಶಕ್ಕೆ ಸೇರಿದ ಬಲಿ ಎಂಬ ರಾಜ ಅವನನ್ನು ಬದುಕಿಸುತ್ತಾನೆ. ಮುಂದೆ ಮಕ್ಕಳಿಲ್ಲದ ಬಲಿರಾಜನ ಪತ್ನಿ ಸುದೇಷ್ಣೆಯು ದೀರ್ಘತಮಸ್‌ನಿಂದ ಆರು ಮಕ್ಕಳನ್ನು ಪಡೆಯುತ್ತಾಳೆ. ಹೇಗಿದೆ ಉಪಕಾರಕ್ಕೆ ನೀಡಿದ ಪ್ರತಿಫಲ?

ಬೃಹಸ್ಪತಿಗೆ ಆತನ ಅಣ್ಣನ ಹೆಂಡತಿ ಮಮತಾಳಿಂದ ಹುಟ್ಟಿದವನು ಭರದ್ವಾಜ. ಆತನು ಮಹಾ ತಪಸ್ಸಿನಲ್ಲಿ ನಿರತನಾಗಿದ್ದಾಗ ಘೃತಾಚಿ ಎಂಬ ಅಪ್ಸರೆಯನ್ನು ನೋಡುತ್ತಾನೆ. ನೋಡುತ್ತಲೇ ಮುನಿಯ ಧಾತು ಸ್ಖಲನವಾಗುತ್ತದೆ. ಧಾತುವನ್ನು ಮಡಕೆಯಲ್ಲಿ ಸಂಗ್ರಹಿಸಿ ದಾಗ 'ಕುಂಭ ಸಂಭವ' ನಾದ ದ್ರೋಣನ ಜನನವಾಗುತ್ತದೆ. ಇದೇ ಭರದ್ವಾಜನ ಇನ್ನೊಬ್ಬ ಪುತ್ರ ಯುವಕ್ರೀತ. ಯುವಕ್ರೀತನು ಪರಾವಸು ಮುನಿಯ ಪತ್ನಿಯನ್ನು ಪ್ರೇಮಿಸಿದ ಕಾರಣದಿಂದ ಕೃತ್ಯೆಯಿಂದ ಮರಣ ಹೊಂದುತ್ತಾನೆ.

ಮಿತ್ರಾವರುಣರು ಕೂಡಾ ಮಹಾ ಸಾಧಕರು. ಆದರೆ ಊರ್ವಶಿಯಲ್ಲಿ ಏಕಕಾಲಕ್ಕೆ ಆಸಕ್ತರಾಗಿ ಧಾತು ಗುಂದುತ್ತಾರೆ.

ಈ ಧಾತುವನ್ನು ಕುಂಭದಲ್ಲಿ ರಕ್ಷಿಸಿದ್ದರಿಂದ ವಶಿಷ್ಠ ಮತ್ತು ಅಗಸ್ತ್ಯರು ಜನಿಸುತ್ತಾರೆ. ಇದೆಲ್ಲಕ್ಕಿಂತಲೂ ಸೌಭರಿ ಮುನಿಗಳ ಕತೆಯೇ ಬೇರೆ. ಮೀನುಗಳು ಕ್ರೀಡಿಸುವುದನ್ನು ಕಂಡು ವಿಕಾರ ಮನಸ್ಕರಾದ ಅವರು ಮಾಂಧಾನ ಮಹಾರಾಜನಲ್ಲಿಗೆ ಹೋಗಿ ಆತನ 50 ಮಂದಿ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡಲು ಕೇಳುತ್ತಾರೆ. ರಾಜ ಒಪ್ಪಿದ. ಸೌಭರಿಗೆ ನೂರಾರು ಮಕ್ಕಳಾಗುತ್ತಾರೆ. ಇದೇ ಸೌಭರಿ ಸಂತಾನ ಎಂದು ಪ್ರಸಿದ್ಧ.

ಇಂದು ಎಲ್ಲೆಡೆಯೂ ಕೇಳಿ ಬರುತ್ತಿರುವ ಗಾಯತ್ರಿ ಮಂತ್ರವನ್ನು ಕಂಡವರು ಮಹರ್ಷಿ ವಿಶ್ವಾಮಿತ್ರರು. ಅವರು ತಪಸ್ಸು ಮಾಡುವಾಗ ಮೇನಕೆ ಪ್ರತ್ಯಕ್ಷ ಆದಳು. ವಿಶ್ವಾಮಿತ್ರರು ಆಕೆಯೊಂದಿಗೆ ಸಂಸಾರ ಹೂಡಿಯೇ ಬಿಟ್ಟರು. ಶಕುಂತಲೆ ಹುಟ್ಟಿದ ತಕ್ಷಣ ತಾಯಿ ಮಗುವನ್ನು ಬಿಟ್ಟು ಅವರು ಮತ್ತೆ ತಪಸ್ಸು ಆರಂಭಿಸಿಯೇ ಬಿಟ್ಟರು. ಇಂಥ ಕಥಾನಕಗಳಲ್ಲಿ ಮಾಧವಿ ಕತೆಯೇ ಹೃದಯಾವಿದ್ರಾವಕವಾದುದು. ಯಯಾತಿ ರಾಜನ ಮಗಳಾದ ಮಾಧವಿಯನ್ನು ಗಾಲವನಿಗೆ ಒಪ್ಪಿಸಿ ಬಿಡುತ್ತಾನೆ. ಗಾಲವನು ಮಾಧವಿಯನ್ನು ಇಕ್ಷ್ವಾಕು, ದಿವೋದಾಸ, ಉಷಿನರರೆಂಬ ರಾಜರಲ್ಲಿ ಅಡವಿರಿಸಿ, ಧನ ಸಂಪಾದನೆ ಮಾಡುತ್ತಾನೆ. ಕೊನೆಗೆ ಸಂಗ್ರಹಿಸಿದ ಧನವನ್ನೆಲ್ಲಾ ತಾನೇ ಇರಿಸಿಕೊಂಡು, ಮಾಧವಿಯನ್ನು ಗುರುದಕ್ಷಣೆಯಾಗಿ ವಿಶ್ವಾಮಿತ್ರರಿಗೆ ಅರ್ಪಿಸಿ ಬಿಡುತ್ತಾನೆ. ವಿಶ್ವಾಮಿತ್ರರು ದಕ್ಷಿಣೆಯನ್ನು ಸಂತೋಷದಿಂದ ಸ್ವೀಕರಿಸಿ ಬಿಡುತ್ತಾರೆ. ಇಂಥದ್ದನ್ನೆಲ್ಲ ತಿಳಿದುಕೊಂಡೇ ನಮ್ಮ ಹಿರಿಯರು ದೇವತೆಗಳು ನಡೆದಂತೆ ನಡೆಯತಕ್ಕದ್ದಲ್ಲ ಎಂದು ಹೇಳಿರಬೇಕು. ನಾನಂತೂ ಈಗ ಋಷಿ ಮೂಲ ನೋಡಲಾರೆ.

- ಡಾ. ಪುರುಷೋತ್ತಮ, ಬಿಳಿಮಲೆ.

ಮೈಸೂರಿನಲ್ಲಿ ಡಿಸಂಬರ್ 31 ರಂದು ಹೊಸ ವರ್ಷ ಆಚರಣೆ

ಮೈಸೂರಿನ ಕೊಡಗು ಗೌಡ ಮಾಜಿ ಸೈನಿಕರ ಸಹಕಾರ ಸಂಘವು ವರ್ಷಂಪ್ರತಿಯಂತೆ ಈ ಸಲವೂ ಸಹ ಹೊಸ ವರ್ಷದ ಸಂಭ್ರಮವನ್ನು ಮೈಸೂರಿನ ಗೌಡ ವಿದ್ಯಾರ್ಥಿನಿಲಯದಲ್ಲಿ ತಮ್ಮ ಸಂಸಾರದೊಂದಿಗೆ ವಿಜೃಂಭಣೆಯಿಂದ ಆಚರಿಸಿಕೊಂಡಿತು. ಸಾಯಂಕಾಲ 6-00 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮವಿತ್ತು. ರಾತ್ರಿ 9 ಕ್ಕೆ ಉಟೋಪಚಾರ ವ್ಯವಸ್ಥೆಯಾಗಿತ್ತು. ಮಧ್ಯ ರಾತ್ರಿಯಲ್ಲಿ ಪರಸ್ಪರ ಶುಭಾಶಯಗಳನ್ನು ಕೋರುತ್ತಾ ಹೊಸ ವರ್ಷವನ್ನು ಸ್ವಾಗತಿಸಿ ಸಂಭ್ರಮದಿಂದ ನಲಿದು ಬೀಳ್ಕೊಟ್ಟರು. ಈ ನಡುವೆ ಹೌಸೀ ಹೌಸೀ ಆಟವಿತ್ತು. ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷರಾದ ತಡಿಯಪ್ಪನ ಕುಮಾರಜಯ ನಿರೂಪಿಸಿದರು. ಸುಮಾರು ನೂರ ಇಪ್ಪತ್ತಕ್ಕಿಂತಲೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಹಾಜರಿದ್ದರು.

- ನಿಶಾ

ಮಕ್ಕಳಿಗಾಗಿ ಮಹಾ ಭಾರತ
ಧೃತರಾಷ್ಟ್ರ ಮತ್ತೆ ಪಾಂಡು :

ಸಂತಮನ ಎರ್‌ಡ್ನೆ ಹೆಣ್‌ಗೆ ಚಿತ್ರಾಂಗಧ ಮತ್ತೆ ವಿಚಿತ್ರ ವೀರ್ಯತ ಇಬ್ಬರ್ ಗಂಡ್ ಮಕ್ಕ ಇದ್ದೊ. ಚಿತ್ರಾಂಗದಂಗೆ ಅಂಬಿಕಾ ನೊಟ್ಟಿಗೆ ಮದ್ವೆ ಆಗಿ ಮಕ್ಕ ಆಗದೆ ಇರ್‌ಕಾಕನ ಭೀಷ್ಮ ಮತ್ತೆ ಇನ್ನ್ ಕೆಲವ್ ತಿಳಿದ ಋಷಿಗಳ್ನ ತಿಳ್ದ್ ಭರತ ವಂಶದ ಮುಂದುವರಿಕೆಗೆ ಅಂಬಿಕಾನೊಟ್ಟಿಗೆ ಬೇರೆಯವರ ದೇಹ ಸಂಪರ್ಕನ ಪಡ್ದ್ ಮಕ್ಕಳಾಗುವಂಗೆ ಮಾಡಕುತ ಅಭಿಪ್ರಾಯ ಪಟ್ಟ್ ಭರತ ವಂಶದವೇ ಆಗಿದ್ದ ವ್ಯಾಸ ಮಹರ್ಷಿನ ದೇಹ ಸಂಬಂಧ ಮಾಡಿಕೆ ಏರ್ಪಾಡ್ ಮಾಡಿ ವೇದ ವ್ಯಾಸಂಗೆ ಈ ವಿಷ್ಯ ತಿಳಿಸ್‌ಕಾಕನ ವೇದ ವ್ಯಾಸರ್ ಅಂಬಿಕಾ ಎರಡ್ ತಿಂಗ ಕಠಿಣ ವೃತ ಆಚರಿಸಿದ ಮ್ಯಾಲೆ ತನ್ನ ಸಂಪರ್ಕ ಪಡಿಯಕ್ಕ್ ತ್ತೇಳ್ತ್. ಆದ್ರೆ ಅರಮನೆವು ಅಸ್ಟ್ ದಿನ ಕಾಯದು ಬೇಡಂತ್ತೇಳಿ ಅಂಬಾಲಿಕೆನ ವೇದ ವ್ಯಾಸರ ಸಂಪರ್ಕಕ್ಕಾಗಿ ಕಳುಹಿಸಿದೊ. ಅಂಬಿಕಾ ಹೋಗಿ ವೇದ ವ್ಯಾಸರ ಆಕೃತಿ ನೋಡಿ ಕಣ್ಣ್ ಮುಚ್ಚಿ ಕಣ್‌ತ್. ಅದರಿಂದ ಈ ಸಂಪರ್ಕಂದ ಹುಟ್ಟಿದ ಕೂಸು ಕುರುಡನಾಗಿ ಹುಟ್ಟಿತ್. ಧೃತರಾಷ್ಟ್ರ ಹುಟ್ಟು ಕುರುಡನಾಗಿ ಬೆಳ್ತ್. ಆದರೆ ಕುರುಡಂಗೆ ರಾಜ್ಯ ಭಾರದ ಅಧಿಕಾರನ ಕೊಡಿಕಾಗದ್ ತ್ತೇಳಿ ಅಂಬಾಲಿಕೆಗೆ ಹುಟ್ಟಿದ ಮಂಙಂಗೆ ರಾಜ್ಯನಾಗಿ ಮಾಡಿಕೆ ಭೀಷ್ಮ ಏರ್ಪಾಡ್ ಮಾಡ್ತ್.

ಪಾಂಡು : ಧೃತರಾಷ್ಟ್ರ ಕುರುಡನಾಗಿ ಹುಟ್ಟಿದರ್‌ಂದ ಹಸ್ತಿನಾಪುರದ ರಾಜ್ಯಕ್ಕೆ ಯಾವ ಊನವೂ ಇಲ್ಲದ ಒಬ್ಬ ರಾಜಕುಮಾರ ಬೇಕಿತ್. ಆದ್ದರಿಂದ ಅಂಬಾಲಿಕೆಗೆ ಮಕ್ಕ ಇಲ್ಲದ್ದರ್‌ಂದ ವೇದ ವ್ಯಾಸರ ಸಂಪರ್ಕದ ಮಕ್ಕ ಆಗಲಿತ್ತೇಳಿ ಭೀಷ್ಮ ಮತ್ತೆ ಇತರ ಬುದ್ಧಿವಂತರ್‌ಗಳ ಅಭಿಪ್ರಾಯದಂಗೆ ಅಂಬಾಲಿಕೆನ ವೇದವ್ಯಾಸರ ಹತ್ತಿರ ಕಳ್ಸಿದೊ. ಆ ರೀತಿ ಅಂಬಾಲಿಕೆ ವೇದ ವ್ಯಾಸರ ಹತ್ತಿರ ಹೋಗಿ ಅವರ್‌ನ ನೋಡ್‌ಕನ ಹೆದ್‌ರಿ ನಡ್‌ಗಿ ಬಿಳ್ಚಿಕಂಡ್ ಸಂಪರ್ಕನ ಮಾಡ್‌ದರ್‌ಂದ ಅಂಬಾಲಿಕೆಗೆ ಹುಟ್ಟಿದ ಗಂಡ್ ಕೂಸಿಗೆ ಪಾಂಡುರೋಗ ಸೊಂಕಿದ ಕಾರಣ ಅವಂಗೆ ಪಾಂಡುತ್ತೇಳ್ಳು ಹೆಸರ್ ಬಾತ್. ಈ ಪಾಂಡುಗೆ ಹುಟ್ಟಿದ ಮಕ್ಕಳೇ ಪಾಂಡುವು ಅದೊ. ಯುಧಿಷ್ಟ್ರ, ಭೀಮ, ಅರ್ಜುನ, ನಕುಲ ಮತ್ತೆ ಸಹದೇವ.

ವಿದುರ: ಮಾಂಡವ್ಯ ಮುನಿ ಎಲ್ಲಾ ಶಾಸ್ತ್ರಗಳ್‌ನ ಅಭ್ಯಾಸ ಮಾಡಿ ಪಟ್ಟಣದ ಹೊರಗಡೆ ಇರುವ ಕಾಡ್‌ಲಿ ಆಶ್ರಮ ಕಟ್ಟಿ ಅಲ್ಲಿ ಸಿದ್ಧಿ ಪಡಿಯಕ್ಕಾಗಿ ಧ್ಯಾನ ಮಾಡ್‌ತಾ ಇತ್. ಈ ತರದ ಧ್ಯಾನನ ತನ್ನ ಆಶ್ರಮದ ಹತ್ರ ಇದ್ದ ಮರದಡಿಲಿ ಮಾಡ್‌ತಿರಾಕನ ಒಂದು ದಿನ ರಾತ್ರಿ ಕೆಲವು ಕಳ್ಳರ್ ಆ ಪಟ್ಟಣದ ರಾಜನ ಕೆಲವು ವಸ್ತುಗಳ್ನ ಕದ್ದ್ ಈ ಆಶ್ರಮದೊಳಗೆ ಅಡ್‌ಗಿಸಿ ಇಟ್ಟೊ. ರಾಜನ ದಂಡಾಳ್‌ಗ ಬಂದ್ ಮಾಂಡವ್ಯ ಮುನಿನ ಆ ಕಳ್ಳರ್ ಬಂದದ್‌ನ ಕಂಡಾಂತ ಕೇಳ್ದಕ್ಕೆ ಮುನಿ ಮಾತಾಡದೇ ಇದ್ದದ್ದ್‌ನ ನೋಡಿ ರಾಜನ ದಂಡಾಳ್‌ಗಳಿಗೆ ಸಿಟ್ಟ್ ಬಂದ್ ಅವನ ಮೈಗೆ ಕಬ್ಬಿಣದ ತುಂಡ್‌ಂದ ಕುತ್ತಿ ಕುತ್ತಿ ಗಾಯ ಮಾಡ್‌ದರೂ ಸತ್ತತ್‌ಲೆ. ಈ ಸುದ್ದಿನ ಆ ಪಟ್ಟಣದ ರಾಜ ಕೇಳಿ ಹೆದ್‌ರಿ ತನ್ನ ಜನ ರೊಟ್ಟಿಗೆ

ಆಶ್ರಮಕ್ಕೆ ಬಂದ್ ತನ್ನ ಜನ ಮಾಡ್‌ದ ತಪ್ಪಿಗೆ ಕ್ಷಮೆ ಕೇಳಿಕಂಡತ್. ಈ ಸಮಯಕ್ಕೆ ಆ ಕಾಡ್‌ಲಿ ಇದ್ದ ಮುನಿಗೆಲ್ಲಾ ಮಾಂಡವ್ಯನ ಸುತ್ತ ಕುದ್ದೊ. ಮಾಂಡವ್ಯ ಮುನಿ ರಾಜನ ಮೇಲೆ ಸಿಟ್ ಮಾಡ್‌ತ್‌ಲೆ. ಆ ಮುನಿ ಧರ್ಮದೇವತೆನ ಹತ್ತ್‌ರ ಹೋಗಿ ತನಿಗೆ ಈ ರೀತಿ ನರಕ ಪಡುವ ಸ್ಥಿತಿ ಯಾಕಾತ್‌ತ ಕೇಳ್‌ಕನ ಮಾಂಡವ್ಯ ಮುನಿ ಸಣ್ಣ ಹೈದ ಆಗಿರ್‌ಕಾಕನ ಹಕ್ಕಿಗಳಿಗೆ ತುಂಬಾ ಕಷ್ಟ ಕೊಟ್ಟಿದ್ದ ರ್‌ಂದ ಈ ರೀತಿ ನರಕ ಪಡುವಂತಾತ್‌ತ ಹೇಳ್‌ಕನ ಮಾಂಡವ್ಯ ಮುನಿಗೆ ಸಿಟ್ಟ್ ಬಂದ್ ಧರ್ಮ ದೇವತೆಗೆ ಭೂಮಿಲಿ ಮನ್‌ಸನಾಗಿ ಹುಟ್ಟುತ್ತೇಳಿ ಶಾಪ ಹಾಕಿತ್. ಹಂಗಾಗಿ ಧರ್ಮದೇವತೆ ವಿಚಿತ್ರ ವೀರ್ಯನ ಅರಮನೆಲಿ ಅಂಬಿಕಾರಾಣಿಯ ದಾಸಿಯ ಮಾಣಿನಾಗಿ ಹುಟ್ಟಿತ್. ವಿಧುರ ಬಹಳ ದೊಡ್ಡ ಜ್ಞಾನಿಂತ ಪ್ರಪಂಚಕ್ಕೆಲ್ಲಾ ಹೆಸರಾತ್. ಧುರ್ಯೋಧನ ಪಾಂಡವರ್‌ನ ಪಗಡೆ ಆಟಕ್ಕೆ ಕರಿಯಕಾಕನ ಆ ಕೆಲ್ಸ ಸರಿಯಲ್ಲಾತ ಧೃತರಾಷ್ಟ್ರಂಗೆ ವಿಧುರ ಹೇಳ್ತ್.

ಕುಂತೀ ದೇವಿ : ಶ್ರೀಕೃಷ್ಣನ ಅಜ್ಜ ಸುರ ಮಹಾರಾಜ ಯಾದವರಲ್ಲಿ ತುಂಬಾ ಕೇಳಿಪಟ್ಟಂವ ಆಗಿತ್. ಅವಂಗೆ ಬಾಳಾ ಪೊರ್ಲುನ ಮತ್ತು ಗುಣವಂತಳಾದ ಮಗಳ್ ಇತ್ತ್. ಅವಳ ಹೆಸ್‌ರ್ ಪ್ರೀತಂತ. ಸುರನ ಸಂಬಂಧಿ ಕುಂತ ಭೋಜಂಗೆ ಸಂತಾನ ಇಲ್ಲದರಿಂದ ಪ್ರೀತನ ಕುಂತ ಭೋಜನ ಸಾಕು ಮಗಳಾಗಿ ಕೊಟ್ಟತ್. ಆದ್ದರಿಂದ ಅವಳಿಗೆ ಕುಂತಿ ದೇವಿ ಎಂದ್ ಹೆಸರಾತ್.

ಅವುಳು ಈ ರೀತಿ ಬೆಳೆಯಕಾಕನ ಅವರಲ್ಲಿಗೆ ಒಬ್ಬ ಸನ್ಯಾಸಿ ಬಂದ್ ಒಂದು ವರ್ಷ ಇತ್ತ್. ಆಗ ಆ ಸನ್ಯಾಸಿಗೆ ಬೇಕಾದ ಎಲ್ಲಾ ಕೆಲಸಗಳನ್ನ ತಾನೇ ನೋಡಿಕಂಡದನ್ನ ಗಮನಿಸಿ ಅವಳಿಗೆ ತಾನ್ ಮದುವೆ ಆದ ಮೇಲೆ ಈ ಮಂತ್ರಗಳ್ನ ಹೇಳಿ ಪ್ರಾರ್ಥಿಸಿರೆ ಆಯಾಯ ಮಂತ್ರನ ಕೇಳ್‌ದ ದೇವರ್‌ಗ ಬಂದ್ ಮಕ್ಕಳ ದಯಮಾಡುವತ ಹೇಳಿ ಮಂತ್ರಗಳನ್ನ ಹೇಳಿ ಕೊಟ್ಟಿತ್. ಕುಂತಿ ದೇವಿ ಈ ಮಂತ್ರಗಳ್ಲಿ ಒಂದ್ ಮಂತ್ರನ ಹೇಳಿ ಧ್ಯಾನ ಮಾಡ್ರೆ ಏನಾದೇಂತ ನೋಡೊಕುತ್ತೇಳಿ ಸೂರ್ಯ ದೇವನ ಧ್ಯಾನ ಮಾಡಿ ಒಂದು ಮಂತ್ರ ಹೇಳ್ತ್. ಆಗ ಸೂರ್ಯದೇವ ಬಂದ್ ನನ್ನ ಗ್ಯಾನ ಮಾಡ್‌ದಕ್ಕೆ ಗಂಡ್ ಕೂಸು ಹುಟ್ಟಿದೆತ ಹೇಳ್ತ್. ಕುಂತಿ ದೇವಿಗೆ ತಾನ್ ಲೋಕ ಅಪವಾದಕ್ಕೆ ಸಿಕ್ಕಿನೆ ಆ ಕೂಸು ಈಗ ಬೇಡಾಂತ್ತೇಳ್ತ್. ಆದರೆ ಸೂರ್ಯ ದೇವ್ರು ಒಂದು ಸಲ ಕೊಟ್ಟವರನ ಹಿಂದಕ್ಕೆ ತಕಣಿ ಕಾದುಲೆ ನೀನ್ ಆ ಕೂಸ್‌ನ ಹೆತ್ತ ಮೇಲೆ ಪುನಃ ಕನ್ಯೆ ಆದಿಯಾಂತ ಹೇಳ್ದಂಗೆ ಕೂಸುನ ಹರಿಕೆ ಒಪ್ಪಿತ್. ಇದರಂಗೆ ಕೂಸ್‌ನ ಹೆತ್ತ್ ಒಂದ್ ಪೆಟ್ಟಿಗೆ ಒಳ್ಗೆ ಹಾಕಿ ಅದರ್‌ನ ಹರ್‌ಕಂಡ್ ಹೋಗ್ ತಿದ್ದ ಹೊಳೆಗೆ ಹಾಕಿತ್. ಪೆಟ್ಟಿಗೆ ತೇಲ್ ಹೋಕಾಕನ ಅಲ್ಲಿಗೆ ಒಬ್ಬ ರಥ ಓಡ್‌ಸ್‌ವಂವ ಬಂದ್ ತೇಲ್‌ತಿದ್ದ ಪೆಟ್ಟಿಗೆನ ನೋಡಿ ಅದನ್ನ ಬಿಡ್ಸಿ ನೋಡ್‌ಕನ ಆ ಪೆಟ್ಟಿಗೆ ಒಳಗೆ ಒಂದು ಗಂಡ್ ಕೂಸು ಇದ್ದದ್ ಕಂಡತ್. ಆ ಕೂಸುನ ಮೋರೆ ಸೂರ್ಯನಂಗೆ ಹೊಳಿತಿತ್ತ್. ಅಲ್ಲದೆ ಆ ಕೂಸು ಬಹಾಳ ಪೊರ್ಲಾಗಿ ಇತ್ತ್. ಇಂವನೇ ಮುಂದೆ ಕರ್ಣಂತ ಕರ್ದೊ. ಹುಟ್ಟುಕಾಕನೇ ಇವನ ಕೆಮಿಲಿ ಕುಂಡಲಿ ಇತ್ತ್. ಮತ್ತೆ ಕುಂತಿ ಬೆಳ್ದ್ ಮದುವೆ ವಯಸ್ಸಿಗಾಕನ ಕುಂತೀ ಭೋಜರಾಜ ಕುಂತಿನ ಮದುವೆಗಾಗಿ ಸ್ವಯಂವರ ಏರ್ಪಾಡ್ ಮಾಡ್ತ್. ಸುತ್ತ ಮುತ್ತ ರಾಜರಿಗೆಲ್ಲಾ ಆಮಂತ್ರಣ ಕಳ್ಸಿತ್. ಎಲ್ಲಾ ರಾಜರ್‌ಗ ಬಂದೊ. ಅದೇ ರೀತಿ ಹಸ್ತಿನಾಪುರಂದ ಪಾಂಡು ರಾಜನೂ ಬಂದಿತ್. ಕುಂತಿ ಪಾಂಡುಗೆ ಹೂಮಾಲೆ ಹಾಕಿತ್. ಮದುವೆನೂ ಆಗಿ ಹಸ್ತಿನಾಪುರಕ್ಕೆ ಬಂದೊ. ಸ್ವಲ್ಪ ವರ್ಷ ಕಳ್ದರೂ ಪಾಂಡುಗೆ ಮಕ್ಕ ಆತ್‌ಲೆ. ಆಗ ಭೀಷ್ಮ ಮಾದ್ರ ದೇಶದ ರಾಜನ ತಂಗಿ ಮಾದ್ರಿನೊಟ್ಟಿಗೆ ಪುನಃ ಪಾಂಡುಗೆ ಮದುವೆ ಮಾಡ್ಸಿತ್.

ಪ್ರೊ. ಪೂಜಾರಿ ಮೊಣ್ಣಪ್ಪ

ಬಡ್ತಿ

ಕುಶಾಲನಗರ ನಿವಾಸಿ ಕುಂಞಳಿ ಡಾ.ಕೆ. ಪಿ. ಬೋಪಣ್ಣ ಅವರ ಪುತ್ರ ಡಾ. ಕೆ. ಬಿ. ಜಗದೀಶ್, ಎಂ.ಬಿ.ಬಿ.ಎಸ್., ಎಂ. ಎಡ್., ಇವರು ವೃತ್ತಿಯಲ್ಲಿ ಬಡ್ತಿಹೊಂದಿ ಈಗ ಮಂಡ್ಯ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆರೋಗ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಶುಭ ವಿವಾಹ

ಮೈಸೂರಿನಲ್ಲಿ ವಾಸವಿರುವ ಮೂಲತ ಕೊಡಗಿನ ಕರಿಕೆ ಗ್ರಾಮದ ಆಮೆ ಮನೆ ಶಿವರಾಯ್ ಮತ್ತು ಚಂದ್ರ ಪ್ರಭಾ ದಂಪತಿಗಳ ಮಗ ಹೇಮಂತ್ ರಾಯ್ ಎಂಬ ವರನಿಗೂ ಹಾಕತ್ತೂರು ಗ್ರಾಮದ ಉಳುವಾರನ ಪಳಂಗಪ್ಪನವರ ಪುತ್ರಿ ಹರಿಣಾಕ್ಷಿ ಎಂಬ ವಧುವಿಗೂ ಮಡಿಕೇರಿಯಲ್ಲಿರುವ ಕೊಡಗು ಗೌಡ ಸಮಾಜ ಕಲ್ಯಾಣ ಮಂಟಪದಲ್ಲಿ ಬಾರಿ ಅದ್ದೂರಿಯಿಂದ ದಿನಾಂಕ 12-12-2003 ರಂದು ನಡೆಯಿತು.

ಭಾಗಮಂಡಲ ನಾಡು ಕುಂದಚೇರಿ ಗ್ರಾಮದ ಕೆದಂಬಾಡಿ ರಾಜು ಮತ್ತು ಜಾನಕಿ ದಂಪತಿಗಳ ಮಗ ಸುಗುಣ ಕುಮಾರ್, BE, M.S. (USA) ಎಂಬ ವರನಿಗೂ ಮತ್ತು ಬೆಂಗಳೂರಿನಲ್ಲಿ ವಾಸವಿರುವ ಬೈತಡ್ಕ ಜೋಯಪ್ಪ ಹಾಗೂ ಮತ್ತು ಡಾ. ಬೋಜಮ್ಮನವರ ಪುತ್ರಿ ಡಾ. ಲಕ್ಷ್ಮಿ ಎಂಬ ವಧುವಿಗೂ ದಿನಾಂಕ 3-12-2003 ರ ಬುಧವಾರ ಬೆಂಗಳೂರಿನ ರಾಧಾಭಾಯಿ ತಿಮ್ಮಪ್ಪ ಭಂಡಾರಿ ಆಡಿಟೋರಿಯಂನಲ್ಲಿ ಬಾರಿ ವಿಜೃಂಭಣೆಯಿಂದ ನಡೆಯಿತು.

ಹೊಸ್ಕೇರಿ ಗ್ರಾಮದ ಕಾಂಗಿರ ಅಪ್ಪಾಜಿಯವರ ಮಗ ಗಿರೀಶ್ ಎಂಬ ವರನಿಗೂ ಹೆಮ್ಮೆತ್ತಾಳು ಗ್ರಾಮದ ಕುಡೆಕಲ್ಲು ಶಾಂತಪ್ಪನವರ ಪುತ್ರಿ ರೂಪ ಎಂಬ ವಧುವಿಗೂ ಮಡಿಕೇರಿಯಲ್ಲಿರುವ ಮೇಲಿನ ಗೌಡ ಸಮಾಜ ಕಲ್ಯಾಣ ಮಂಟಪದಲ್ಲಿ ಬಹು ವೈಭವದಿಂದ ದಿನಾಂದ 26-12-2003 ರಂದು ನಡೆಯಿತು.

ವೈಕುಂಠವಾಸಿ

ಅವಂದೂರು ಗ್ರಾಮದ ಕಾಳೇರಮ್ಮನ ದಿ|| ಹೊನ್ನಣ್ಣನವರ ಧರ್ಮಪತ್ನಿ ದೇವಮ್ಮನವರು ದಿನಾಂಕ 25-11-2003ರ ಮಂಗಳವಾರ ದಿನ ನಿಧನರಾದರು. ಇವರಿಗೆ 68 ವರ್ಷ ಪ್ರಾಯವಾಗಿತ್ತು. ಮೃತರು 3 ಗಂಡು 3 ಹೆಣ್ಣು ಮಕ್ಕಳಲ್ಲದೆ ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ.

-ಲತಾ ಮೊಣ್ಣಪ್ಪ, ಮಡಿಕೇರಿ



ತೋಟಂಬೈಲು ದೇವಯ್ಯ ರಘು
ಜನನ: 20-3-1953
ಮರಣ : 23-11-2003
ನಿವೃತ್ತ ವಾಯುಸೇನೆ

ಕೃತಜ್ಞತೆ ಮತ್ತು ವಂದನೆಗಳು

ನನ್ನ ಪತಿ ತೋಟಂಬೈಲು ರಘುರವರು ದಿನಾಂಕ 23-11-2003 ರಂದು ಸ್ವರ್ಗಸ್ಥರಾದ ಸಂದರ್ಭದಲ್ಲಿ ನಮ್ಮ ಬಂಧುಗಳು, ಆಪ್ತರು, ಹಿತೈಷಿಗಳು, ಕುಟುಂಬಸ್ತರು, ನೆಂಟರಿಷ್ಟರು, ಪತಿಯವರ ಸ್ನೇಹಿತರು, ಹಾಗೂ ನನ್ನ ಉದ್ಯೋಗ ಸಹಪಾಠಿಗಳು ಬಂದು ಮೃತರ ಅಪರ ಕ್ರಿಯಾದಿಗಳಲ್ಲಿ ಪಾಲ್ಗೊಂಡು ಸಹಕರಿಸಿದ ನಿಮ್ಮೆಲ್ಲರ ಪ್ರೀತಿ ವಿಶ್ವಾಸ, ಸಹಕಾರಗಳಿಗೆ ನಾನು ಮತ್ತು ನನ್ನ ಸಂಸಾರದವರೆಲ್ಲರೂ ಅಭಾರಿಗಳು.

ಪತ್ನಿ : ಕಸ್ತೂರಿ ಕೆ. ಎಸ್. ಮತ್ತು ಮಗ : ಅಜಿತ್ ಉತ್ತಯ್ಯ ಹಾಗೂ ತಾಯಿ ,ಅಂಣ, ಅತ್ತಿಗೆಯವರು, ಅಕ್ಕಂದಿರು, ಭಾವಂದಿರು, ಮಕ್ಕಳು, ಕುಟುಂಬಸ್ತರು. ಕುಶಾಲನಗರ : 272055



ದಿ|| ಕೈಬೀಲಿರ ಬೋಜಮ್ಮ
ಮರಣ : 17-1-2000

4ನೇ ವರ್ಷದ ಪುಣ್ಯಸ್ಮರಣೆ

ನೀವು ದಿನಾಂಕ 17-1-2000 ರಂದು ಇಹಲೋಕ ತ್ಯಜಿಸಿ ನಾಲ್ಕು ವರುಷಗಳೇ ಸಂದಿವೆ. ಪ್ರೀತಿ, ವಾತ್ಸಲ್ಯ, ಮಮತೆ ನಮ್ಮ ಮರುಕಳಿಸುತ್ತಿದ್ದು ನಿಮ್ಮ ಮಾರ್ಗದರ್ಶನವು ನಮಗೆಲ್ಲರಿಗೂ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಸದಾ ಚಿರಶಾಂತಿಯನ್ನು ಆ ಭಗವಂತ ನೀಡಲೆಂದು ನಾವೆಲ್ಲರೂ ಪ್ರಾರ್ಥಿಸುವೆವು.

ಪತಿ : ಕೈಬೀಲಿರ ತಿಮ್ಮಯ್ಯ, ಮಕ್ಕಳು : ದಿನೇಶ್, ಮನು, ವಸಂತ, ಸೊಸೆಯಂದಿರು, ಮೊಮ್ಮಕ್ಕಳು.

ಪ್ರಕಟಣೆ : ಕೆ. ಬಿ. ಮನೋಹರ್, ಇಂಜಿನಿಯರ್, ಮೈಸೂರು - 17
Phone : 2403643



ಬಾರಿಕೆ ಧನು
ಜನನ:
ಮರಣ : 8-12-2002

ಪ್ರಥಮ ಚಿರಸ್ಮರಣೆ

ನಮ್ಮೆಲ್ಲರ ಮುದ್ದಿನ ಕಣ್ಮಣಿ ಅರಳುವ ಮುನ್ನವೇ ಬಾಡಿ ಹೋಯಿತೆ. ಆ ನಿನ್ನ ಮನಸ್ಸು, ಯೌವ್ವನದ ಹೊಸ್ತಿಲಿನಲ್ಲಿಯೇ ಪರಮಾತ್ಮನ ಪಾದ ಸೇರಿದೆಯಾ, ಸಾಕಾಗಿ ಹೋಯಿತೆ ನಿನಗೆ ಈ ಭೂಮಿಯ ಬದುಕು. ಚಿರಾಯುವಾಗಲಿ ಆ ನಿನ್ನಾತ್ಮ. ದಿನ ಬೆಳಗಾದರು ಸದಾ ನಿನ್ನ ನೆನಪಿನಾಳದಲ್ಲಿರುವ ನಿನ್ನ

ತಂದೆ : ಬಾರಿಕೆ ಸುಬ್ಬಯ್ಯ, ತಾಯಿ : ಜಾನಕಿ, ಅಂಣ್ಣಂದಿರು, ಅಕ್ಕಂದಿರು, ಅತ್ತಿಗೆಯಂದಿರು, ಭಾವಂದಿರು ಮತ್ತು ಮಕ್ಕಳು.

ಪ್ರಕಟಣೆ : ಬಾರಿಕೆ ಮನೋಜ್ ಕುಮಾರ್ (ಅಂಣ) ಇಗ್ಗುತ್ತಪ್ಪ ಕೋಲ್ಡ್ ಸ್ಟೋರೇಜ್, ಖಾಸಗಿ ಬಸ್ ನಿಲ್ದಾಣ, ವಿರಾಜಪೇಟೆ, Phone : 260881, 256591



ಮಣ್ಣಾಪುರ ಗಂಗಮ್ಮ ಮಾದಪ್ಪ
ಜನನ : 1925
ಮರಣ : 1-1-2003

ಪ್ರಥಮ ಚಿರಸ್ಮರಣೆ


ನೀವು ನಮ್ಮೆಲ್ಲರನ್ನು ಅಗಲಿ ಒಂದು ವರ್ಷ ಕಳೆಯಿತು. ನಿಮ್ಮ ಪ್ರೀತಿ, ವಿಶ್ವಾಸ, ಸ್ನೇಹಮಯ ಜೀವನ ನಮಗಿನ್ನು ಹಚ್ಚ ಹಸುರಾಗಿದೆ. ನೀವು ನೀಡಿದ ಮಾರ್ಗದರ್ಶನದಲ್ಲಿಯೇ ಮುಂದುವರಿಯುತ್ತಿರುವೆವು. ಆ ಭಗವಂತನು ನಿಮ್ಮ ಆತ್ಮಕ್ಕೆ ಅನುದಿನವು ಚಿರಶಾಂತಿಯನ್ನು ನೀಡಲೆಂದು ಆಶಿಸುವೆವು.

-ಮಕ್ಕಳು ಸೊಸೆಯಂದಿರು, ಅಳಿಯಂದಿರು, ಹಾಗೂ ಮೊಮ್ಮಕ್ಕಳು
ದೂರವಾಣಿ : 259360

Reg. No. KA/SK/MYS/88/2003 - 05 RNI No. : 10-01-96 TCI Kar. 09592




ಕನಸನ್ನು ಕನಸಾಗಿಸುವ ಚಿಂತನೆಯಲ್ಲಿ ಅಮರಶ್ರೀ.



ಸಾಂಘೀಕ ಶಕ್ತಿ ಸಾಧನೆಯ ಆಧಾರಸ್ತಂಭಗಳು.



ಗುಣಕ್ಕೆ ಮತ್ಸರವಿಲ್ಲ ನಾವೆಲ್ಲರೂ ಒಂದೇ.
ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರಿಗೆ
ಹೊನ್ನ ಕಿರೀಟ ಸಮರ್ಪಣೆ.



ಕರ್ನಾಟಕ ರಾಜ್ಯ ಮುಖ್ಯಮಂತ್ರಿ, ಎಸ್.ಯಂ.ಕೃಷ್ಣ
ಕುರುಂಜಿಬಾಗ್‌ಗೆ ಆಗಮಿಸಿದಾಗ



ಕರುಂಜಿಯವರ ಹಿರಿಯಾಸೆ ಮೆಡಿಕಲ್ ಕಾಲೇಜ್
ನನಸಾದ ಬೃಹದ್ ಕನಸು.



ಬೃಹದ್ ಕನಸು ನನಸಾದ ಸಂಭ್ರಮದಲ್ಲಿ
ಧರ್ಮಪತ್ನಿ ಜಾನಕಿಯೊಂದಿಗೆ ಅಮರಶ್ರೀ.

Kodagu Sangathi Kannada Fortnightly Edited, Published, Printed by Pattada Sheelamani, # 12058 "Sangathi Nilaya", Vijayanagar IV Stage, II Phase, Hinkal Post, Mysore - 570017. ☎ : 0821/2404290.
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/2431792.